ಬೆಲೆ: ಎರಡು ಆಣೆ

ಕರ್ಮವೀರ

ವರ್ಗಣಿ ದರ
(ಅಂಚೆವೆಚ್ಚ ಸೇರಿ)
ವರ್ಷಕ್ಕೆ ರೂ. ೬-೮-೦
೬ ತಿಂಗಳಿಗೆ ,, ೩-೮-೦
೩ ತಿಂಗಳಿಗೆ ,, ೧-೧೨-೦
ವ್ಹಿ. ಪಿ. ಮೂಲಕ
ಕಳಿಸಿಕೊಂಡಲ್ಲಿ ೫ ಆಣೆ
ಹೆಚ್ಚಿಗೆ ಬೀಳುವದು.

KARMAVEER
WEEKLY
HUBLI
MAY 20
1946

ಸಂಪಾದಕರು :
ಹ. ರಾ. ಪುರೋಹಿತ, ಎಂ. ಎ.]
ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ
[Editor : H. R. Purohit, M. A.

ಸಂಪುಟ ೧೮] ಹುಬ್ಬಳ್ಳಿ, ಸೋಮವಾರ ತಾರೀಖು ೨೦—೫—೧೯೪೬ [ಸಂಚಿಕೆ ೭

ಮುಸ್ಲಿಂ ಲೀಗಿನ ಪಾಕಿಸ್ತಾನ ಬೇಡಿಕೆ—

ಲೀಗು ಬೇಡುವದೇನು? ಕಾಂಗ್ರೆಸ್ ಕೊಡಮಾಡಿರುವದೆಷ್ಟು?

ಲಾಹೋರ ಗೊತ್ತುವಳಿಯ ಸಂದಿಗ್ಧ ಸ್ವರೂಪ

ಹಿಂದುಸ್ತಾನದ ರಾಜಕೀಯ ಪ್ರಗತಿಗೆ ದೊಡ್ಡ ತೊಡಕಾಗಿ ನಿಂತಿರುವ ಮುಸ್ಲಿಂ ಲೀಗಿನ ಪಾಕಿಸ್ತಾನ ಬೇಡಿಕೆಯನ್ನು ಪೃಥಕ್ಕರಿಸಿದರೆ ಅದರ ಬೇಡಿಕೆಯ ತಿರುಳಿಗೂ ಕಾಂಗ್ರೆಸ್ಸಿನ ಕೊಡುಗೆಗೂ ಮಹದಂತರವಿಲ್ಲದ್ದು ಕಂಡುಬರುವದು. ಈ ಲೇಖದಲ್ಲಿ ಪ್ರಸಿದ್ಧ ಬಂಗಾಲಿ ಲೇಖಕ ಪ್ರೊ. ಹುಮಾಯೂನ ಕಬೀರರು ಪೃಥಕ್ಕರಿಸಿ ಎರಡನ್ನೂ ನಮಗೆ ತಿಳಿಯುವಂತೆ ವಿವೇಚಿಸಿರುವರು. ಆದರೆ ಕಾಂಗ್ರೆಸ್—ಲೀಗಗಳಲ್ಲಿ ನಿಜವಾಗಿ ಒಡಂಬಡಿಕೆಯಾಗದ್ದಿರಲು ಕಾರಣವೆಂದರೆ ಪಾಕಿಸ್ತಾನ ಪ್ರದೇಶಗಳೆಂದು ಕರೆಯಿಸಿಕೊಳ್ಳುವ ಭಾಗಗಳು ಹಿಂದುಸ್ತಾನದಿಂದ ಸಿಡಿದು ಹೋಗಬೇಕೋ ಬೇಡವೋ ಎಂಬದನ್ನು ನಿರ್ಣಯಿಸುವಲ್ಲಿ ಆ ಭಾಗಗಳ ಮುಸ್ಲಿಮೇತರರಿಗೆ ಮತಾಧಿಕಾರ ಕೊಡಲು ಲೀಗು ಒಪ್ಪದಿರುವದೆ ಆಗಿದೆಯೆಂಬದನ್ನು ಮರೆಯಬಾರದು.

ಮುಸ್ಲಿಂ ಲೀಗಿನ ಪಾಕಿಸ್ತಾನ ಬೇಡಿಕೆಗೆ ೨೬ ಮಾರ್ಚ ೧೯೪೦ ರ ಅದರ ಲಾಹೋರ ಗೊತ್ತುವಳಿಯೇ ತಳಹದಿ. ಅದುಕಾರಣ, ಲೀಗಿನ ಬೇಡಿಕೆ ಇಂಥದೇ ಎಂದು ತಿಳಿದುಕೊಳ್ಳಲು ಆ ಗೊತ್ತುವಳಿಯನ್ನು ಪೃಥಕ್ಕರಿಸುವದು ಅತ್ಯುತ್ತಮ ಉಪಾಯ. ಆ ಗೊತ್ತುವಳಿಯ ಮೂರನೆ ಖಂಡ ಹೀಗೆ ಹೇಳುತ್ತದೆ:-

" Geographically contiguous units are demarcated into regions which should be so constituted with such territorial re-adjustments as may be necessary, that the areas in which the Muslims are numerically in a majority as in the North West and Eastern Zones of India should be grouped to constitute independent states in which the constituent units shall be autonomous and sovereign. "

(ಭೌಗೋಲಿಕವಾಗಿ ಒಂದಕ್ಕೊಂದು ಹತ್ತಿಕೊಂಡಿರುವ ಘಟಕಗಳನ್ನು ಪ್ರದೇಶಗಳಾಗಿ ವಿಂಗಡಿಸಿ, ಅವಶ್ಯವೆನಿಸಬಹುದಾದ ಪ್ರಾದೇಶಿಕ ಪುನರ್ವ್ಯವಸ್ಥೆಗಳೊಡನೆ ಅವುಗಳನ್ನು ಪುನರ್ಘಟಿಸಿ ಹಿಂದುಸ್ತಾನದ ವಾಯವ್ಯ ಮತ್ತು ಪೂರ್ವ ವಲಯಗಳಲ್ಲಿರುವಂತೆ ಮುಸ್ಲಿಮರು ಬಹುಸಂಖ್ಯಾಕರಿರುವ ಭಾಗಗಳನ್ನು ಗುಂಪುಗೂಡಿಸಿ ಸ್ವತಂತ್ರ ರಾಜ್ಯಗಳಾಗಿ ಸಂಘಟಿಸಬೇಕು. ಮತ್ತು ಅವುಗಳಲ್ಲಿ ಸೇರಿದ ಘಟಕಗಳು ಸ್ವಾಯತ್ತವೂ ಸಾರ್ವಭೌಮವೂ ಆಗಿರಬೇಕು.)

ಈ ಪ್ರತಿಪಾದನೆಯನ್ನು ಈ ಕೆಳಗಿನಂತೆ ವಿಂಗಡಿಸಬಹುದು:-

(೧) ಭೌಗೋಲಿಕವಾಗಿ ಒಂದಕ್ಕೊಂದು ಹತ್ತಿಕೊಂಡಿರುವ ಘಟಕಗಳನ್ನು ಪ್ರದೇಶಗಳಾಗುವಂತೆ ವಿಂಗಡಿಸಬೇಕು.

(೨) ಈ ಪ್ರದೇಶಗಳು ಈಗಿರುವ ಹಿಂದೀ ಪ್ರಾಂತ ಅಥವಾ ಪ್ರಾಂತಗಳೇ ಇದ್ದಕ್ಕಿದ್ದಂತೆ ಇರಬಹುದು, ಆಗದಿರಬಹುದು.

(೩) ಸದ್ಯದ ಪ್ರಾಂತಗಳ ಗಡಿಗಳನ್ನು ಹೆಚ್ಚುಕಡಿಮೆ ಮಾಡುವಾಗ, ಮಾಡಿದರೆ, ಆಡಳಿತ, ಆರ್ಥಿಕ ಅಥವಾ ಸಾಂಸ್ಕೃತಿಕ ದೃಷ್ಟಿಯಿಂದ ಮಾಡುವದಿಲ್ಲ.

(೪) ಇಂಥ ವಿಂಗಡಿಕೆಯ ಮೂಲ ತತ್ವ, ಮುಸ್ಲಿಮರು ಬಹುಸಂಖ್ಯಾಕರಾಗಿರುವ ಭಾಗಗಳನ್ನು ವಿಂಗಡಿಸುವದೇ ಇರಬೇಕು.

(೫) ಅಂಥ ಪ್ರದೇಶಗಳು ಹಿಂದುಸ್ತಾನದ ವಾಯವ್ಯ ಮತ್ತು ಪೂರ್ವ ವಲಯಗಳಲ್ಲಿ ಕಾಣಸಿಗುತ್ತವೆ ಮಾತ್ರವಲ್ಲ, ಬೇರೆ ಕಡೆಗಳಲ್ಲೂ ಇರಬಹುದು.

(೬) ಅಂಥ ಪ್ರದೇಶಗಳು ಅಥವಾ ಭಾಗಗಳನ್ನು ಸ್ವತಂತ್ರ ರಾಜ್ಯಗಳಾಗಿ ಘಟಿಸಬೇಕು.

(೭) ಈ ಸ್ವತಂತ್ರ ರಾಜ್ಯಗಳು ಏಕಘಟಕಾತ್ಮಕ (Unitary) ವಾಗಿರದೆ ಸ್ವಾಯತ್ತ ಸಾರ್ವಭೌಮ ಘಟಕಗಳಿಂದ ಕೂಡಿರಬೇಕು.

ಸಡಿಲು ಶಬ್ದಬಂಧ

ಈ ಗೊತ್ತುವಳಿಯ ಶಬ್ದಬಂಧ ಸಡಿಲಾಗಿದೆ. ಅಲಕ್ಷದಿಂದ ಕೂಡಿದೆಯೆಂದರೂ ಸರಿಯೆ. ಘಟಕಗಳೆಂದರೇನೆಂದಾಗಲಿ ಪ್ರದೇಶಗಳೆಂದರೇನೆಂದಾಗಲಿ ವ್ಯಾಖ್ಯಾನ ಮಾಡಿಲ್ಲ. ವಾಯವ್ಯ ಮತ್ತು ಪೂರ್ವ ವಲಯಗಳಂತೆ ಎಂದು "ಅಂತೆ" ಶಬ್ದವನ್ನು ಪಯೋಗಿಸಿದ್ದರಿಂದ ಅವೆರಡೇ ವಲಯಗಳಿಂದಲೇ ಮುಗಿಯಲಿಲ್ಲ, ಇನ್ನೂ ಏತದ್ಗಣವಿಶಿಷ್ಟ ವಲಯಗಳಿರಬಹುದೆಂದೂ ಸೂಚ್ಯವಾಗುತ್ತದೆ. ಇದೂ ಅಲ್ಲದೆ ಸ್ವತಂತ್ರ, ಸ್ವಾಯತ್ತ, ಸಾರ್ವಭೌಮ ಶಬ್ದಗಳನ್ನೂ ಅವುಗಳಿಗಿರುವ ನಿರ್ದಿಷ್ಟ ಲಕ್ಷಣಾರ್ಥವನ್ನನುಸರಿಸಿ ಉಪಯೋಗಿಸಿಲ್ಲವೆಂಬುದು ಸ್ಪಷ್ಟ. ಒಂದು ರಾಜ್ಯದ ಘಟಕಗಳು ಸ್ವಾಯತ್ತವಾಗಿರಬಹುದು. ಆದರೆ ಪ್ರಚಲಿತ ಲಕ್ಷಣಾರ್ಥದಲ್ಲಾದರೆ ಅವು ಸಾರ್ವಭೌಮ(Sovereign) ಆಗಲಾರವು.

ಘಟಕಗಳಿಗೆ ಸಾರ್ವಭೌಮತ್ವ

ಇದರಿಂದ ಸಾರ್ವಭಾಮ ಶಬ್ದವನ್ನು ಸ್ವಾಯತ್ತ ಅಥವಾ ಸ್ವಯಂಶಾಸಕ (Self Governing) ಎಂಬರ್ಥದಲ್ಲೇ ಉಪಯೋಗಿಸಿರಬೇಕೆಂದು ತೋರುತ್ತದೆ. ಸಾಲದ್ದಕ್ಕೆ ವಾಯವ್ಯ ಮತ್ತು ಪೂರ್ವ ಸ್ವತಂತ್ರ ರಾಜ್ಯಗಳಲ್ಲಿ ಪರಸ್ಪರ ಸಂಬಂಧವೆಂತಹುದೆಂಬುದನ್ನೂ ಸ್ಪಷ್ಟಗೊಳಿಸಿಲ್ಲ. ಅವೆರಡೂ ಸಂಯುಕ್ತ ರಾಜ್ಯಗಳೆ. ಆದರೆ ಎರಡೂ ಸೇರಿ ಬೃಹತ್ತರ ಸಂಯುಕ್ತ ರಾಜ್ಯವಾಗುವವೊ ಇಲ್ಲವೋ ಸಂದಿಗ್ಧವಾಗಿದೆ. ಘಟಕಗಳನ್ನು ಸಾರ್ವಭೌಮವೆಂದು ಕರೆಯಬಹುದಾದರೆ ಸ್ವತಂತ್ರ ರಾಜ್ಯಗಳಾಗುವ "ಪ್ರದೇಶ"ಗಳು ಪರಸ್ಪರವಾಗಿಯಾಗಲಿ ಹಿಂದುಸ್ತಾನದ ಇತರ ಭಾಗಗಳೊಡನೆಯಾಗಲಿ ಸೇರಿ ಸಂಯುಕ್ತ ಘಟನೆಯಲ್ಲಿ ಕೂಡಿಕೊಳ್ಳಲು ಯಾವ ಅಡ್ಡಿಯೂ ಇಲ್ಲ.

ಗೊತ್ತುವಳಿಯಲ್ಲಿ ಘಟಕಗಳ ಅಥವಾ ಪ್ರದೇಶಗಳ ಸ್ಥಾನಮಾನದ ಕುರಿತು ಸ್ಫುಟ ಉಲ್ಲೇಖವಿಲ್ಲ. ಘಟಕ, ಪ್ರದೇಶಗಳೆರಡಕ್ಕೂ ಪರಮಾವಧಿ ಸ್ವಾಯತ್ತತೆಯಿರುವದೆಂದಷ್ಟೇ ಅದು ಒತ್ತಿ ಹೇಳುತ್ತದೆ. ಸ್ವಾತಂತ್ರ್ಯದ ಪರಮಾವಧಿಯ ಅರ್ಥದಲ್ಲಿ ಉಪಯೋಗಿಸಲ್ಪಡುವ "ಸಾರ್ವಭೌಮ" ಶಬ್ದವನ್ನು "ಪ್ರದೇಶ"ಗಳ ಅರ್ಥಾತ್ ಸಂಯುಕ್ತ ರಾಜ್ಯದ ವಿಷಯದಲ್ಲಿ ಬಳಸದೆ ಘಟಕಗಳ ವಿಷಯದಲ್ಲಿ ಉಪಯೋಗಿಸಿರುವದು ಗಮನಾರ್ಹವಾಗಿದೆ.

ಗೊತ್ತುವಳಿಯ ೫ ನೇ ಮತ್ತು ಕೊನೆಯ ಖಂಡದಲ್ಲಿ ಕ್ರಿಯಾತ್ಮಕ ಕಲಮು ಅಡಕವಾಗಿದೆ. ಅದು ನಮ್ಮ ಸೂಕ್ಷ್ಮ ಅವಲೋಕನಕ್ಕೆ ಅರ್ಹವಾಗಿದೆ. ಅದು ಹೀಗೆ ಹೇಳುತ್ತದೆ : "ಈ ಮೂಲ ತತ್ವಗಳಿಗನುಸಾರವಾಗಿ ರಾಜ್ಯಘಟನೆಯ ಯೋಜನೆಯೊಂದನ್ನು ಸಿದ್ಧಗೊಳಿಸಲು ಈ ಅಧಿವೇಶನ ಕಾರ್ಯಸಮಿತಿಗೆ ಅಧಿಕಾರ ಕೊಡುತ್ತದೆ ಅದರಲ್ಲಿ ಆಯಾ ಪ್ರದೇಶಗಳು ಕೊನೆಗೆ ಸಂರಕ್ಷಣೆ, ವಿದೇಶ ವ್ಯವಹಾರ, ಸಂಪರ್ಕ, ಸುಂಕ ಮೊದಲಾದ ಮತ್ತು ಇತರ ಆವಶ್ಯಕ ಅಧಿಕಾರಗಳನ್ನು ಸ್ವಾಧೀನಪಡಿಸಿಕೊಳ್ಳುವ ವ್ಯವಸ್ಥೆ ಇರಬೇಕು.

ಮುಸ್ಲಿಂ ಲೀಗ್ ಕಾರ್ಯಸಮಿತಿಗೆ ಈ ಮೂಲ ತತ್ವಗಳನ್ನು ಅನುಸರಿಸಿ ಘಟನಾವಳಿಯನ್ನು ಸಿದ್ಧಗೊಳಿಸಲು ಅಧಿಕಾರ ಕೊಡಲಾಗಿತ್ತೆಂಬುದು ಮೊದಲನೆ ಮುದ್ದೆ. ಆದರೆ ಆರು ವರ್ಷಗಳ ಹಿಂದೆ ಈ ಅಧಿಕಾರ ಕೊಡಲಾಗಿದ್ದರೂ ಇನ್ನೂ ಅದನ್ನು ಕಾರ್ಯಸಮಿತಿ ಸಿದ್ಧಗೊಳಿಸಿದ ಲಕ್ಷಣವಿಲ್ಲ. ಕಾರ್ಯ ಸಮಿತಿ ಅದನ್ನು ಸಿದ್ಧಗೊಳಿಸಲು ಪ್ರಯತ್ನಿಸಿ ಅದು - ಅದನ್ನು ಕಠಿನವೆನಿಸಿ ಅಥವಾ ಅಸಾಧ್ಯವೆನಿಸಿ ಸುಮ್ಮನಿದೆಯೆಂದಾದರೂ ಇದಕ್ಕೆ ಅರ್ಥ ಮಾಡಬಹುದು. ಅಥವಾ ಅದನ್ನು ಸಿದ್ಧಗೊಳಿಸಲು ಇನ್ನೂ ಕಾರ್ಯಸಮಿತಿ ಮನಸು ಕೊಟ್ಟಿಲ್ಲವೆಂದಾದರೂ ತಿಳಿದುಕೊಳ್ಳಬಹುದು. ಹೇಗೇ ಇದ್ದರೂ ಸ್ವತಃ ಲೀಗೇ ಬಹಳ ಮಹತ್ವ ಕೊಟ್ಟ ಈ ವಿಷಯದಲ್ಲಿ ಮುಂದೆ ಅದೇ ಹೀಗೆ ದುರ್ಲಕ್ಷದಿಂದ ಆಚರಿಸಿದ್ದು ನಿಜವಾಗಿ ಆಶ್ಚರ್ಯಜನಕವಾಮುದು

ಒಂದಲ್ಲ, ಎರಡು ಪಾಕಿಸ್ತಾನಗಳು

ಎರಡನೆ ವಿಷಯವೆಂದರೆ, ಮೇಲೆ ಹೇಳಿರುವಂತೆ ಕಡಿಮೆಯೆಂದರೆ ಮೂರಾದರೂ ಇರುವ ಸ್ವತಂತ್ರ ರಾಜ್ಯಗಳಲ್ಲಿ ಪ್ರತಿಯೊಂದು ರಾಜ್ಯವೂ ಸಂರಕ್ಷಣೆ, ವಿದೇಶ ವಿಚಾರ, ಸುಂಕ ಸಂಪರ್ಕ ಇತ್ಯಾದಿ ಅಧಿಕಾರಗಳನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದಿದೆ. ಎಂದ ಮೇಲೆ ಒಂದಲ್ಲ ಎರಡು ಪಾಕಿಸ್ತಾನಗಳನ್ನು ಈ ಗೊತ್ತುವಳಿ ದೃಕ್ಪಥದಲ್ಲಿಟ್ಟುಕೊಂಡಿದೆಯಂದಾಯಿತು.

ಮೂರನೆಯ ಮತ್ತು ಅತ್ಯಂತ ಮಹತ್ವದ ಅಂಶವಿದು. ಆಯಾ ಪ್ರದೇಶಗಳು ಮೇಲೆಹೇಳಿದ ಅಧಿಕಾರಗಳನ್ನು "ಕೊನೆಗೆ" ಸ್ವಾಧೀನ ಪಡಿಸಿಕೊಳ್ಳಬೇಕೆಂದಿದೆ. ಅರ್ಥಾತ್ ಈ ರಾಜ್ಯಗಳ ಸ್ಥಾಪನೆಯಾದ ಮೇಲೂ ಸಂರಕ್ಷಣೆ ಮೊದಲಾದ ಅಧಿಕಾರಗಳನ್ನು ಮಧ್ಯಾವಧಿಯಲ್ಲಿ ಈ ಹೊಸ ರಾಜ್ಯಗಳು ಕೈಕೊಳ್ಳುವದಿಲ್ಲದೆಂದು ಸೂಚಿಸಿದಂತಾಯಿತು. ಆದರೆ ಅವುಗಳನ್ನು ಬಟ್ಟಬಯಲಲ್ಲಿ ಬಿಡಲಾದೀತೆ? ಅದ್ದರಿಂದ ನೇರವಾಗಿ ಹೇಳದಿದ್ದರೂ ಪರ್ಯಾಯದಿಂದ ಈ ಗೊತ್ತುವಳಿಯಲ್ಲಿ ಸಮಸ್ತ ಹಿಂದುಸ್ತಾನಕ್ಕೆ ಒಂದು ನಡುಗಾಲದ ಸರಕಾರವಿದ್ದು ಅದು ಮೇಲೆ ಹೇಳಿದ ಅಧಿಕಾರಗಳನ್ನು ನಡೆಸುವದೆಂದು ಒಪ್ಪಿಕೊಂಡಂತಾಯಿತು.

ಒಟ್ಟಿನ ಮೇಲೆ ಲಾಹೋರ ಗೊತ್ತುವಳಿಯನ್ವಯ ಗಡಿಗಳಲ್ಲಿ ಬದಲಾವಣೆ ಮಾಡಿದ ಅಥವಾ ಮಾಡದ ಘಟಕಗಳಿಗೆ ಪರಮಾವಧಿ ಸ್ವಾಯತ್ತತೆ ಬೇಕೆಂದು ಲೀಗು ಬೇಡಿದೆ. ಅವು ಮೂರು ಅಥವಾ ಹೆಚ್ಚು ಸಂಯುಕ್ತ ರಾಜ್ಯಗಳಾಗಿ ಕೂಡಿ ಸಾರ್ವಭೌಮ ಸ್ಥಿತಿಗೆ ರೂಪಾಂತರ ಹೊಂದಬೇಕೆಂದು ಅದು ಸೂಚಿಸುತ್ತದೆ. ಆದರೆ ಈ ಸಾರ್ವಭೌಮ್ವ ಸ್ಥಿತಿಯನ್ನು ಮುಟ್ಟುವದು ಮಾತ್ರ ಕೊನೆಯ ಅವಸ್ಥೆಯಾಗಿದ್ದು ಅದಕ್ಕೆ ಮೊದಲು ಸಂರಕ್ಷಣ, ಸಂಪರ್ಕ ಮೊದಲಾದ ಅಧಿಕಾರಗಳನ್ನು ಸಮಾನ ಕೇಂದ್ರ ಸರಕಾರ ನಡೆಸುತ್ತದೆ. ಅರ್ಥಾತ್ ಆ ರಾಜ್ಯಗಳು ಹೊಸತಾಗಿ ಪುನರ್ಘಟಿತವಾದೊಡನೆ ಅವಕ್ಕೆ ಸಾರ್ವಭೌಮತ್ವ ಅಧಿಕಾರಗಳು ಪ್ರಾಪ್ತವಾಗುವದಿಲ್ಲ. ಅವು ಕಾಲಾಂತರದಲ್ಲಿ ಸಾರ್ವಭೌಮವಾಗಬಹುದು.

ಕಾಂಗ್ರೆಸ ವಾಗ್ದಾನ

ಕಾಂಗ್ರೆಸ್ಸು ತನ್ನ ೧೯೪೨ ರ ಪ್ರಸಿದ್ಧ ಅಗಸ್ಟ ಗೊತ್ತುವಳಿಯ ಮೂಲಕ ಸಂಯುಕ್ತ ರಾಜ್ಯಘಟನೆಗೆ ಬದ್ಧವಾಗಿದೆ. ಅದರಲ್ಲಿ ಸೇರುವ ಘಟಕಗಳಿಗೆ ಪರಮಾವಧಿ ಸ್ವಾಯತ್ತತೆ ದೊರೆಯುವದೆಂದೂ ಶಿಷ್ಟಾಧಿಕಾರಗಳು ಘಟಕಗಳಿಗೇ ಸೇರುವವೆಂದೂ ಕಾಂಗ್ರೆಸ್ಸು ಸಾರಿತು.

ಕಾಂಗ್ರೆಸ್ಸು ತನ್ನ ಕಾರ್ಯಸಮಿತಿಯ ೧೯೪೨ ಜುಲೈಯ ವರ್ಧಾ ಗೊತ್ತುವಳಿಯ ಮೂಲಕ ಭವಿಷ್ಯತ್ ರಾಜ್ಯದ ಸ್ವರೂಪದ ಬಗೆಗೂ ವಾಗ್ಬದ್ಧವಾಗಿದೆ. "ಸಂಸ್ಥಾನಿಕರು, ಜಾಗಿರದಾರರು ಜಮೀನದಾರರು ಮತ್ತು ಆಸ್ತಿವಂತ ಹಾಗು ಧನವಂತ ವರ್ಗಗಳು ತಮ್ಮ ಧನ—ಆಸ್ತಿಗಳನ್ನು ಹೊಲ, ಕಾರಖಾನೆ ಮತ್ತು ಬೇರೆ ಕಡೆಗಳಲ್ಲಿಯ ಕೆಲಸಗಾರರಿಂದಲೇ ಪಡೆಯುತ್ತಾರಾದುದರಿಂದ ಆ ಕೆಲಸಗಾರರಿಗೇ ನಿಜವಾಗಿ ಅಧಿಕಾರ ಮತ್ತು ಹಕ್ಕು ಸೇರಿದ್ದು." ಇದು ಅಗಸ್ಟ ಗೊತ್ತುವಳಿಯಿಂದ ಅನುಮೋದಿಸಲ್ಪಟ್ಟಿದೆ.

ಸಿಡಿದು ಹೋಗುವ ಹಕ್ಕು

೧೯೪೨ ಎಪ್ರಿಲದಲ್ಲಿ ಕಾಂಗ್ರೆಸ ಕಾರ್ಯಸಮಿತಿ ತನ್ನ ದಿಲ್ಲಿ ಗೊತ್ತುವಳಿಯಲ್ಲಿ, ಹಿಂದುಸ್ತಾನದ ಅಖಂಡತ್ವಕ್ಕೆ ಭಂಗಬಂದರೆ ಸಂಬಂಧಪಟ್ಟ ಎಲ್ಲರಿಗೂ ಹಾನಿಯಾಗುವದೆಂದು ತನಗನಿಸುವದಾದರೂ 'ಯಾವುದಾದರೊಂದು ಪ್ರಾದೇಶಿಕ ಘಟಕದ ಪ್ರಜೆಗಳನ್ನು ಅವರ ಉದ್ಘೋಷಿತ ಮತ್ತು ಸಿದ್ಧಾಂತವಾದ ಇಚ್ಛೆಗೆ ವಿರುದ್ಧವಾಗಿ ಹಿಂದೀ

—೧೬ನೇ ಪುಟ ನೋಡಿರಿ



ಇಜ್ಜೋಡು

ಸಾಮಾಜಿಕ ಕಾದಂಬರಿ. ಬರೆದವರು: ಶ್ರೀ ವಿ ಕೃ ಗೋಕಾಕ, ಒಟ್ಟು ಪುಟ ೫೯೦, ಎರಡು ಭಾಗವಾಗಿ ಪ್ರಕಟವಾಗಿದೆ. ಮೊದಲನೆಯ ಭಾಗ ಪ್ರಕಟವಾಗಿ ಹತ್ತು ವರ್ಷಗಳ ನಂತರ ಎರಡನೆಯ ಭಾಗ ಪ್ರಕಟವಾಗಿದೆ. ಇನ್ನೊಂದು ಭಾಗ ಬರಲಿದೆ ಮೊದಲನೆಯ ಭಾಗದ ಇಂದಿನ ಬೆಲೆ ೨-೦-೦, ಎರಡನೆಯ ಭಾಗದ ಬೆಲೆ: ೧-೧೨-೦, ಪ್ರಕಾಶಕರು: ಮನೋಹರ ಗ್ರಂಥಮಾಲೆ, ಧಾರವಾಡ.

ಮುನ್ನುಡಿ: ಪಾತ್ರ ರಚನೆಯ ಕಡೆಗೆ ಲಕ್ಷ್ಯಗೊಟ್ಟು ಕತೆಯ ಕಡೆಗೆ ವಿಶೇಷ ಶ್ರಮ ತೆಗೆದುಕೊಂಡಿಲ್ಲವೆಂದು ಶ್ರೀ ಗೋಕಾಕರು ಹೇಳಿರುವರು. ಆದ್ದರಿಂದ ನಾವು ಕತೆಯಲ್ಲಿ ಕಂಡುಬರುವ ಎಲ್ಲ ದೋಷಗಳನ್ನು ಬಿಡಬೇಕಾಗುವದು. ಇವರು ತಮಗೆ ಏನೂ ಗೊತ್ತಿಲ್ಲದ ವೈಷ್ಣವ ಸಮಾಜವನ್ನು ಚಿತ್ರಿಸಲು ಯತ್ನಿಸಿರುವರು. ಇವರು ಕನ್ನಡ ಶಾಲೆಯಲ್ಲಿದ್ದಾಗ್ಗೆ ಹಿಂದಿನ ಸ್ವಾಮಿಗಳವರು ಸವಣೂರಿಗೆ ಬಂದಿದ್ದರೆಂದು ಕಾಣುತ್ತದೆ ಅಗ್ಗ ಶಾಲೆಯ ಹುಡುಗರು ಇವರಿಗೆ ರಾಯರ ವಿಷಯಕ್ಕೆ ಕೆಲವು ಕತೆಗಳನ್ನು ಹೇಳಿರಬೇಕು. ಆ ಎಲ್ಲ ಕತೆಗಳನ್ನು ನಂಬಿ ಈ ಮಹಾಕಾದಂಬರಿಯಲ್ಲಿ ಸೇರಿಸಲು ಯತ್ನಮಾಡಿರುವರು. ಮಹಾಸಾಹಸಿಗರು ಇವರು.

"ಹಾಸ್ಯ, ವಿಡಂಬನೆ ಮುಂತಾದ ಎಲ್ಲ ಲಹರಿಗಳಿಗೂ ಇಲ್ಲಿ ಎಡೆಯಿದೆ'' ಎಂದು ಹೇಳಿರುವರು. ಇವರ ಎರಡೂ ಭಾಗಗಳಲ್ಲಿ ಲಂಗೋಟಿ ಹಾಕಿಕೊಂಡು ಮುಳುಗಿದರೂ ಒಂದು ನಗೆ ಬರುವ ಪ್ರಸಂಗ ಸಿಗಲಾರದು. "ಸೂಳೆಮಗನ'' "ಹಾದರಗಿತ್ತಿ'' "ಹೇರಕಟ್" "ಬೋಡಂತಿ'' "ಜುಟ್ಟವಿಲ್ಲದ ತೆಂಗಿನಕಾಯಿ'' ಈ ಶಬ್ದಗಳಿಂದ ಹಾಸ್ಯ ಹುಟ್ಟಿಸಹೋಗಿದ್ದರೆ ಇವರಲ್ಲಿ ಇವರು ಸೋತಿರುವರು. "ಶಾಲ್ಲೂಕಾ ರಾಜಾ'' ನೋಡಿ ಏನೋ ನಗಬಹುದಿತ್ತು. ಆದರೆ ಆ ಉಪಮೆಯನ್ನು ಅತಿವಿಸ್ತಾರವಾಗಿ ವರ್ಣಿಸಿ ಹತ್ತು ಪುಟ ಬರೆದಿರುವರು. ಕಡೆಕಡೆಗೆ ಅದು ಹಾಸ್ಯದ ಬದಲು ಹೊಲಸಾಗುವದು. ಇವರ ರೀತಿಯಲ್ಲಿಯೆ ಹೇಳುವದಾದರೆ ಇದು ಹುಣ್ಣಿನ ಮೇಲೆ ಉಪ್ಪು ತಿಕ್ಕಿದಂತಾಗುವದು. ಹೆಂಡತಿ ಬಸುರೆಂದು ಹೇಳುವದಕ್ಕೆ "ಪ್ರೆಸ್ಸಿನಲ್ಲಿ" ಅದೆಯೆಂದು ಒಂದೇ ಸಲ ಉಪಯೋಗಿಸಿದ್ದರೆ ನಗಬಹುದಿತ್ತು. ಆದರೆ ತುಲನೆಯನ್ನು ಹರಿಯುವ ವರೆಗೆ ಜಗ್ಗಿ "ಮಶಿನ್ ಬಂದು ಇದು" ಎಂದು ಅದನ್ನು ಹಾಳುಮಾಡಿರುವರು. ಕಡೆ ಭಾಗದಲ್ಲಿ ಪ್ರಿಂಟಿಂಗ ಪ್ರೆಸ್ಸಿಗೂ ವಿಶ್ವಕ್ಕೂ ಸಾಮ್ಯವನ್ನು ತೋರಿಸಲು ಯತ್ನಮಾಡಿರುವರು. ಯಾವುದಕ್ಕೆ ಯಾವುದನ್ನು ಹೋಲಿಸಬೇಕೆಂಬುದರ ಕಲ್ಪನೆಯೆ ಇವರಿಗೆ ಇದ್ದಂತೆ ತೋರುವದಿಲ್ಲ. ಹಾಸ್ಯವು ಗಂಗಾಜಲದಂತೆ ತಿಳಿಯಾಗಿಯೂ ರುಚಿಯಾಗಿಯೂ ಇರಬೇಕು. ಹಾಸ್ಯ ವಿಡಂಬನೆಗಳು ಕಾದಂಬರಿಯಲ್ಲಿ ಇವೆಯೆಂದು ಮುನ್ನುಡಿಯಲ್ಲಿ ಬರೆದರೆ ಸಾಲದು; ಅವು ಕಾದಂಬರಿಯಲ್ಲಿ ಇರಬೇಕು. ಮುನ್ನುಡಿಯೆಂದರೆ ಲಾಹೋರದ ಜಾಹೀರಾತಲ್ಲ.

"ಬಳಕೆಯ ಮಾತು ಮತ್ತು ಸುಸಂಸ್ಕೃತ ಮಾತು ಗಂಗಾಜಮುನಾ ಸಂಗಮದಂತೆ ಇದರಲ್ಲಿ ಇವೆ'' ಎಂದು ಹೇಳಿರುವರು. ಓದುಗರಿಗೆ ಮಾತ್ರ ಈ ಸಂಗಮವು ಭತ್ತ-ವೊಸರು ಕಲಸಿದಂತೆ ಕಾಣುವದು.

ಕಾದಂಬರಿ

ಮುದುಕ ಗಂಡ — ಹರೆಯದ ಹೆಂಡತಿ— ಕುಲಮಗ ಈ ವಸ್ತುವಿನ ಸುತ್ತಲೂ ಕುಣಿಯುವವು ಉಳಿದ ಸನ್ನಿವೇಶಗಳು.

ಅತಿ ವಿಚಿತ್ರವೆನ್ನಿಸುವದೆಂದರೆ ಅಸಂಬದ್ಧ ಗಣಪತರಾಯರ ಕಾಗದಗಳು. ಕತೆ ಹೇಳುವಾಗ ಈ ಮಾದರಿಯ ಪ್ರಯೋಗಗಳು (Stunts) ಕತೆಗಾರನ ಸೋಲಿನ ದ್ಯೋತಕಗಳು. ಇವು ವೀರಗಲ್ಲಿನಂತೆ ಕಾದಂಬರಿಯ ತುಂಬ ನಿಂತಿರುವವು. ಮುಂದಿನ ಆವೃತ್ತಿಯಲ್ಲಿ ಈ ಪತ್ರಗಳನ್ನು ಬೇರುಕಿತ್ತಿ ಹಾಕುವರೆಂದು ಹಾರೈಸುತ್ತೇವೆ.

ಹೆಜ್ಜೆ ಹೆಜ್ಜೆಗೆ ದೆವ್ವ- ಅಥವಾ ದೈವಿಶಕ್ತಿಯ ಉಪಯೋಗ ಮಾಡಿಕೊಂಡಿರುವರು. ಇದು ಆಧುನಿಕ ಕಾದಂಬರಿಯ ಲಕ್ಷಣವನ್ನು ಅವಿಶ್ವಾಸ ಹುಟ್ಟಿಸುವ ಈ ದಾರಿಯನ್ನು ಬಿಟ್ಟು ಬೇರೆ ದಾರಿಯನ್ನು ಹುಡುಕಬೇಕಿತ್ತು. ಅಲ್ಲಿ ಸಾವಿರಾರು ದಾರಿಗಳಿವೆ. ಹೆಂಡತಿ ವ್ಯಭಿಚಾರ ಮಾಡಿ ಮಗನನ್ನು ಹಡೆದಳೆಂದು ಗಂಡನಿಗೆ ತಿಳಿಸುವದೇ ಆದರೆ "ಅಯ್ಯೋ ಪಿಶಾಚಿ" ಎಂಬ ಪ್ರಕರಣವು ಬೇಕಿಲ್ಲ. ಭೂತ ಬಂದು ಆತನಿಗೆ ತಿಳಿಸಿತೆಂದು ಹೇಳಿದರೆ ಕಲಿಯುಗದಲ್ಲಿ ಯಾರೂ ನಂಬಲಾರರು. "ಆಚಾರ್ಯರು ಇನ್ನೂ ತಮ್ಮಲ್ಲಿ ಸಾಮರ್ಥ್ಯವಿದೆಯೆಂದು ತೋರಿಸಲಿಕ್ಕೆ ಹೆಣಗಾಡುತ್ತಿದ್ದರು. ಅವರೆ ಅವರು ರಮಾಬಾಯಿಯನ್ನು ಹೇಗೆ ವಂಚಿಸಬದುದು'' ಈ ವಾಕ್ಯದ ಅರ್ಥವು ಆಚಾರ್ಯರು ಪಿತನಾಗುವದು ಸಾಧ್ಯವಿದ್ದಿಲ್ಲವೆಂದು ತಿಳಿಯಬೇಕಾಗುತ್ತದೆ. ಆದರೆ ಮುಂದೆ ರಮಾಬಾಯಿಯವರು ವ್ಯಂಗವಾಗಿ ಬೆಣ್ಣೆ-ಬೋಣಿಗೆ ಮಾತು ನಡೆದಾಗ "ನಾ....ಅವರೆ ಬಂದಿದ್ದರು ಅಂತ ತಿಳಕೊಂಡಿದ್ದೆ" (ಪುಟ-೩೦೦) ಎಂಬುದರ ಅರ್ಥವೇನು? ಆ ಪಿಶಾಚಿ ಪ್ರಕರಣವು ಅಪ್ರಸ್ತುತ ಹೆಂಡತಿ ಹಾದರ ಮಾಡಿದಳೆಂದು ತಿಳಿಸುವದಾದಕೆ ಬೇಕಾದಷ್ಟು ಮಾರ್ಗಗಳಿದ್ದವು.

ಬಹಳ ಶ್ರಮಪಟ್ಟು ಅಶ್ಲೀಲ ಅರ್ಥವಾಗುವಂತೆ ವರ್ಣನೆಗಳನ್ನು ಕೊಟ್ಟಿರುವರು. ನಡುನಡುವೆ ಆ ಹೇಯವಾದ ವರ್ಣನೆಗೆ ಸಮಾಜ ಸುಧಾರಣೆಯ ಹೊದಿಕೆ ಹಾಕಹೋಗಿರುವರು. ಧೈರ್ಯದಿಂದ ಶುದ್ಧ ರತಿವಿಷಯವನ್ನು ಬರೆದರೆ ಪರಿಣಾಮವು ಒಳ್ಳೆಯದಾಗುವದು. ಆದರೆ ಈ "ಅರ್ಧನಾರೀ ನಟೇಶ್ವರ"ನ ರೀತಿ ಅಸಹ್ಯವನ್ನು ಹುಟ್ಟಿಸುತ್ತದೆ. ಮೈನೆರೆದ ಹುಡುಗಿಯ ಸಲುವಾಗಿ ಇವರು ತೆಗೆದ ಉದ್ಗಾರಗಳನ್ನು ನೋಡಿರಿ (ಪುಟ— ೮೦) "ಭೋ! ಪುರನಿವಾಸಿಗಳಿರಾ! ಇಲ್ಲಿ ನೋಡಿರಿ! ಈ ಹುಡಿಗಿಯು ಮೈನೆರೆದಿದ್ದಾಳೆ! ಮಾನವನ ಭೋಗ್ಯವಸ್ತುವಾದ ಸ್ತ್ರೀಜಾತಿಯಲ್ಲಿ ಇನ್ನೊಂದು ಕುಸುಮವರಳಿತು! ಮನ್ಮಥನು ಇನ್ನೊಂದು ಮಹಾಸ್ತ್ರವನ್ನು ಕೊಟ್ಟನು! ಆದರೆ ಇದು ನಿಮಗಲ್ಲ! ಓರ್ವ ವ್ಯಕ್ತಿಗೆಂದು ನಿರ್ಮಿತವಾಗಿದೆ! ತಜ್ಞರಾದ ನಿಮಗೆ ನವೋನವವಾದ ಕುಸುಮದ ಬೆಲೆಯು ತಿಳಿಯುವದೆಂದು ಮಾತ್ರ ಒಂದು ಕ್ಷಣ ಹೊತ್ತು ಹೊರಗೆ ತಂದಿದ್ದೇವೆ! ನೋಡಿ ಸಂತೋಷಪಡಿರಿ!'' ಇಂತಹ ಉದ್ಗಾರಗಳನ್ನು ಯಾರ ಲಗ್ನದ ಕಾಲದಲ್ಲಿಯೂ ತೆಗೆಯುಬಹುದು ಅಲ್ಲಿಯೂ ಅಲಂಕೃತಳಾದ ಕನ್ಯೆಯು ಕೇವಲ ಒಬ್ಬನ ಸಲುವಾಗಿ ಇರುವಳು. ಗರ್ಭಿಣಿಯಾದ ಸ್ತ್ರೀಯರಿಗೆ ಮಾಡುವ ಶ್ರೀಮಂತದ ಉತ್ಸವದ ಬಗ್ಗೆ ಈ ರೀತಿ ಬರೆಯಬಹುದೋ? "ಭೋ ಭೋ ಪುರಜನರಿರಾ! ನೋಡಿರಿ! ಒಬ್ಬನೇ ಗಂಡನು ಇವಳನ್ನು ಬಸುರು ಮಾಡಿರುವನು. ಇವಳು ಕೇವಲ ಅವನ ಸಲುವಾಗಿರುವ ಮೀಸಲುವಸ್ತು. ಅವನ ಪೌರುಷವನ್ನು ತೋರಿಸುವದಕ್ಕಾಗಿ ಇವಳನ್ನು ಮೆರೆಯಿಸಿ, ಆರತಿ ಮಾಡುವೆವು.''

ಶ್ರೀ ಗೋಕಾಕರು ಸುಶಿಕ್ಷಿತರು. ಸಾವಿರಾರು ಜನರಿಗೆ ಮಾರ್ಗದರ್ಶಕರು. ತರುಣ ತರುಣಿಯರಿಗೆ ಗುರುಗಳು. ಅಖಂಡ ಭರತಖಂಡದಲ್ಲಿ ಯಾರಿಗೂ ದೊರೆಯದ ಮರ್ಯಾದೆಯನ್ನು ಇವರು ಆಕ್ಸಫರ್ಡ (Oxford) ದಲ್ಲಿ ದೊರಕಿಸಿರುವರು. ಇಂತಹರು ಈ ತರದ ವರ್ಣನೆಯನ್ನು ಬರೆಯಬಹುದೆ? ಸಾವಿರಾರು ಜನ ನಮ್ಮ ಅಕ್ಕತಂಗೆಂದಿರು ಶ್ರೀ ವಿನಾಯಕರ ಪುಸ್ತಕ ಓದಬಹುದು. ಅವರ ಮೇಲೆ ಯಾವ ಪರಿಣಾಮವಾಗುವದೆಂಬುದರ ಕಲ್ಪನೆ ಇವರಿಗಿಲ್ಲವೆ? ವಿಲಾಯತಿಯಲ್ಲಿ ಇವರು 'ಲೇಡಿ ಚಾಟರ್ಲೀಜ ಲವ್ಹರ' (Lady Chatterly's Lover) ಓದಿ ಅವನಂತೆ ತಾವೂ ಬರೆಯಬೇಕೆಂದು ಹವಣಿಸಿದಂತೆ ಕಾಣುತ್ತದೆ. 'ನೈವೇದ್ಯ' ಎಂಬ ಪ್ರಕರಣವು ಇವರಿಂದ ಬರೆಯಲ್ಪಟ್ಟಿರುವದೆ ಎಂದು ಸಂಶಯ ಪಡುವಷ್ಟು ಕೀಳಾಗಿರುವದು. ಲೇಡಿ ಚಾಟರ್ಲೀಜ ಲವ್ಹರದಲ್ಲಿ ಶುದ್ಧ ಮತ್ತು ತಿಳಿಯಾದ ರತಿ ಇರುವದು. ಅದರಲ್ಲಿ ಇಲ್ಲದ ಕಲ್ಪನೆಗೆ ಅನುವಿಲ್ಲ. ಆದರೆ ಇವರ ವ್ಯಂಗ ಅಶ್ಲೀಲದಿಂದ ಕೊಳಚೆಯಲ್ಲಿ ಕಲ್ಲು ಒಗೆದರೆ ಹೊಲಸೇಳುವಂತೆ ಕುಹಕ ವಿಚಾರಗಳು ತರುಣ ತರುಣಿಯರಲ್ಲಿ ಹುಟ್ಟುತ್ತವೆ. ಗಂಡು ಹೆಣ್ಣಿನ ಸಂಗಮ ಹೇಸಿಯಲ್ಲ. ಆದರೆ ಅದನ್ನು ಹೇಳುವ ರೀತಿ ಸರಳವಿರಬೇಕು. ಇವರಿಂದ ನಿರ್ಮಿತಳಾದ ಆ ರಂಗಾಸಾನಿಯು ಕೂಡ ಆ ಬ್ರಾಹ್ಮಣ ವಿಧವೆಯಂತೆ ಮಾತನಾಡುವದಿಲ್ಲ. ಪೇಟಿಯಲ್ಲಿಯ ಬಾಗವಾನಬೂಬು ಜನರನ್ನು ನಾಚಿಸುವಷ್ಟು ಹೇಸಿ ರೀತಿಯಿಂದ ಈ ಪ್ರಕರಣವನ್ನು ಬರೆದಿರುವರು. ಕಾದಂಬರಿ ಓದಿ ಮುಗಿಸಿದ ಮೇಲೆ ಆ 'ನೈವೇದ್ಯ' ವಿಚಾರವು ಪಿಶಾಚಿಯಂತೆ ಎಲ್ಲರ ತಲೆಯಲ್ಲಿ ಕುಣಿಯುವದು. 'ನೈವೇದ್ಯ' ಎಂಬ ಪವಿತ್ರ ಶಬ್ದಕ್ಕೆ ಅವಮಾನ ಮಾಡಿರುವರು. ಇದು ಕನ್ನಡಕ್ಕೆ ಕುಂದು; ಬ್ರಾಹ್ಮಣರಿಗೆ [illegible]ಮಾನ; ವೈಷ್ಣವರ ವಧೆಯಂತೆ ಇರುವದು.

ಪಾತ್ರರಚನೆ: ಪುಸ್ತಕವು ಮುಗಿದ ಮೇ[illegible] ವಿಚಾರ ಮಾಡಿದರೆ ಯಾವ ಪಾತ್ರವೂ ನಮ್ಮೆದುರಿಗೆ ಎದ್ದು ನಿಲ್ಲುವದಿಲ್ಲ. ಯಾವ ಪಾತ್ರವನ್ನೂ ಇವರೇ ಚನ್ನಾಗಿ— ಸ್ಪಷ್ಟವಾಗಿ ಕಂಡಂತೆ ತೋರುವದಿಲ್ಲ. ಅಂದಮೇಲೆ ಅವನ್ನು ಚಿತ್ರಿಸುವದೆಂತು? ದೇಸಾಯರನ್ನು ಯಾವಾಗಲೂ ರಂಗಾಸಾನಿಯ ಮನೆಗೆ ಓಡಿಸುವದು. ದೇಸಾಯರ ಪರಿಚ

(೧೬ ನೇ ಪುಟ ನೋಡಿರಿ)

ಸಂಪಾದಕೀಯ

ಟೀಕೆ-ಟಿಪ್ಪಣಿಗಳು

ಮಹಾರಾಷ್ಟ್ರ ಸಾಹಿತ್ಯ ಸಮ್ಮೇಲನ

ಮಹಾರಾಷ್ಟ್ರ ಸಾಹಿತ್ಯ ಸಮ್ಮೇಲನವು ಬೆಳಗಾವಿಯಲ್ಲಿ ಶ್ರೀ ಮಾಡಖೋಲಕರರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಆಯಾ ಜನರು ತಮ್ಮ ಮಾತೃಭಾಷೆಯ ಅಭಿವೃದ್ಧಿಗಾಗಿ ಹೆಣಗುವದು ನ್ಯಾಯಸಮ್ಮತವಾದುದು. ತಾವು ಎಲ್ಲಿಯೇ ಇರಲಿ ಆ ಭಾಗದಲ್ಲಿಯ ಪ್ರಚಲಿತ ಭಾಷೆಯನ್ನು ಕಲಿತುಕೊಂಡು ಅಲ್ಲಿನ ಜನರೊಡನೆ ಸಮರಸರಾಗಿ ಮಾತೃಭಾಷೆಯ ಉನ್ನತಿಗಾಗಿ ಪ್ರತಿಯೊಬ್ಬನು ಪ್ರಯತ್ನಿಸಬಹುದು. ಇದು ನ್ಯಾಯ್ಯವಾದುದು. ಆದರೆ ಮಾತೃಭಾಷೆಯ ಮೇಲಿನ ಪ್ರೇಮದ ನೆಪವೊಂದೆ ಮಾಡಿ ಸ್ಥಳಿಕ ಭಾಷೆಯನ್ನು ಅಲಕ್ಷಿಸುವದು ಇಲ್ಲವೆ ಅದರ ಅಭಿವೃದ್ಧಿಗೆ ಅಡೆತಡೆಯನ್ನುಂಟು ಮಾಡುವದು ಯಾವ ರೀತಿಯಿಂದಲೂ ನ್ಯಾಯ್ಯವಾಗಲಾರದು. ಅಂತೆಯೆ ಸಾಹಿತ್ಯ ಸಮ್ಮೇಲನ ಜರಗಿಸುವಾಗ ಸಾಹಿತ್ಯಾಭಿವೃದ್ಧಿಯ ಧೋರಣವನ್ನೆ ಇಟ್ಟುಕೊಳ್ಳುವುದವಶ್ಯವಾಗಿದೆ. ಈ ದೃಷ್ಟಿಯಿಂದಲೆ ಕನ್ನಡಿಗರು ಕರ್ನಾಟಕ ಸಾಹಿತ್ಯ ಸಮ್ಮೇಲನವೆಂಬ ಹೆಸರು ಬದಲಿಸಿ ಕನ್ನಡ ಸಾಹಿತ್ಯ ಸಮ್ಮೇಲನವೆಂದು ಮಾರ್ಪಡಿಸಿರುವರು. ಮಹಾರಾಷ್ಟ್ರ ಸಾಹಿತ್ಯ ಸಮ್ಮೇಲನದ ಹೆಸರನ್ನು ಕೂಡ ಮರಾಠಿ ಸಾಹಿತ್ಯ ಸಮ್ಮೇಲನವೆಂದು ಮಾರ್ಪಡಿಸಿಕೊಳ್ಳುವದವಶ್ಯವೆಂದು ಶ್ರೀ ಮಾಮಾ ವರೇರಕರರಂಥ ಪ್ರಮುಖ ಸಾಹಿತಿಗಳೂ ಕೂಡ ಅಭಿಪ್ರಾಯ ಕೊಡುತಿರುವರು. ಸಾಹಿತ್ಯೋನ್ನತಿಗಾಗಿ ಹೆಣಗುವ ಸಂಸ್ಥೆಯ ಹೆಸರು ಸಾಹಿತ್ಯವಾಚಿಯಾಗಿರಬೇಕಲ್ಲದೆ ದೇಶವಾಚಿಯಾಗಿರಬಾರದು. ಮರಾಠಿಗರು ಈ ಮಾತನ್ನು ಮನದಂದು ತೀವ್ರವೇ ಸಾಹಿತ್ಯ ಸಮ್ಮೇಲನದ ಹೆಸರನ್ನು ಬದಲಿಸಿಕೊಳ್ಳುವದವಶ್ಯವೆಂದು ಹೇಳದಿರಲಾರೆವು. ಆದರೆ ಮರಾಠಿಗರು ಈ ಧ್ಯೇಯದಿಂದ ಎಲ್ಲಿಯವರೆಗೆ ಕಾರ್ಯ ಮಾಡುವದಿಲ್ಲವೊ ಅಲ್ಲಿಯವರೆಗೆ ಬೆಳಗಾವಿಯಲ್ಲಿ ಸಾಹಿತ್ಯ ಸಮ್ಮೇಲನವನ್ನು ಕೂಡಿಸುವದು ಸರಿಯಲ್ಲೆಂದು ಕನ್ನಡಿಗರು ಅದನ್ನು ವಿರೋಧಿಸುವದು ಸ್ವಾಭಾವಿಕವಾಗಿದೆ. ಪ್ರಾಂತೀಯ ಭಾವನೆಗಳನ್ನುದ್ದೀಪ್ತಗೊಳಿಸಿ ಆಯಾ ಜನರಲ್ಲಿ ಆಕ್ರಮಣ ವೃತ್ತಿಯನ್ನು ನಲಸಲು ಪ್ರಯತ್ನಿಸುತಿರುವ ಈ ಸಾಹಿತ್ಯ ಸಮ್ಮೇಲನದ ಧೋರಣವನ್ನು ಕನ್ನಡಿಗರು ಖಂಡಿಸುವದು ಅತ್ಯಂತ ನ್ಯಾಯ್ಯವಾಗಿದೆ. ಇದನ್ನು ಮನದಂದು ಮರಾಠಿಗರು ಆಕ್ರಮಣಧೋರಣವನ್ನು ಬಿಟ್ಟುಗೊಡುವದು ಹಿತಕರವಾಗಿದೆ.

ಆಕ್ರಮಣ ಧೋರಣ

ಭಾಷಾನ್ವಯ ಪ್ರಾಂತ ರಚನೆ ಅವಶ್ಯಕ ಮತ್ತು ಆಯಾ ಭಾಗಗಳ ಬೆಳವಣಿಗೆಗೆ ಉಪಯುಕ್ತವಾಗಿದೆ. ಇದರಿಂದ ಪ್ರಾಂತೀಯ ಭಾವನೆ ಹೆಚ್ಚು ಬೆಳೆದು ಏಕರಾಷ್ಟ್ರೀಯತ್ವಕ್ಕೆ ವಿಘಾತಕವಾಗುವದೆಂದು ಹಲವರು ಹೇಳುವದೂ ಉಂಟು. ಆದರೆ ಆಯಾ ಪ್ರಾಂತೀಯರು ಸಮಂಜಸ ದೃಷ್ಟಿಯನ್ನು ಇಟ್ಟುಕೊಂಡು ತಮ್ಮ ಪ್ರಾಂತಾಭಿವೃದ್ಧಿಗಾಗಿ ಪ್ರಯತ್ನಿಸಿದ್ದಾದರೆ ಏಕರಾಷ್ಟ್ರೀಯತೆಗೆ ಯಾವ ಬಾಧೆಯೂ ಬರಲಾರದು. ಬೆಳಗಾವಿ ಸಾಹಿತ್ಯ ಸಮ್ಮೇಲನದಲ್ಲಿ ಈ ಒಗೆಯ ಉದಾತ್ತ ಭಾವನೆಯಿಂದ ಕೆಲಸ ನಡೆಯದೆ ಕೇವಲ ಆಕ್ರಮಣ ವೃತ್ತಿಯಿಂದ ಕಾರ್ಯಕಲಾಪಗಳು ನಡೆದುವು ತುಂಬ ಶೋಚನೀಯವಾಗಿದೆ. ಸಾಹಿತ್ಯ ಸಮ್ಮೇಲನದಲ್ಲಿ ಮಹಾರಾಷ್ಟ್ರ ಏಕೀಕರಣ ಗೊತ್ತುವಳಿಯೊಂದು ಪಾಸಾಗಿದೆ ಮಹಾರಾಷ್ಟ್ರದ ಎಲ್ಲ ಭಾಗಗಳನ್ನು ಒಟ್ಟುಗೂಡಿಸಿ ಸ್ವತಂತ್ರ ಸಂಯುಕ್ತ ಪ್ರಾಂತ ಮಾರ್ಪಡಿಸಬೇಕೆಂದಿಷ್ಟೇ ಗೊತ್ತುವಳಿಯನ್ನು ಸಾಹಿತ್ಯ ಸಮ್ಮೇಲನದಲ್ಲಿ ಪಾಸ ಮಾಡಿದ್ದರೆ ಯಾರದೂ ಆಕ್ಷೇಪವಿರಲಿಲ್ಲ. ಆದರೆ ಆದರ ಸೀಮೆಯನ್ನು ವಿವರಿಸುವಾಗ ಬೆಳಗಾವಿ ಜಿಲ್ಲೆಯ ಬಹುಭಾಗವನ್ನು, ಹಳ್ಯಾಳ, ಯಲ್ಲಾಪುರ ಸುಪಾ ಹೊನ್ನಾವರದ ಭಾಗಗಳನ್ನು ಈ ಸಂಯುಕ್ತ ಮಹಾರಾಷ್ಟ್ರದಲ್ಲಿ ಸೇರಿಸಬೇಕೆಂದು ಕೇಳಿಕೊಂಡಿರುವರು. ಯಾವ ಭಾಗವನ್ನು ಯಾವ ಪ್ರಾಂತದಲ್ಲಿ ಸೇರಿಸಬೇಕೆಂಬುದನ್ನು ನಿರ್ಣಯಿಸುವದು ಗಡಿ ನಿರ್ಣಾಯಕ ಸಮಿತಿಯ ಕಾರ್ಯ. ಹೀಗಿರುವಾಗ ಈಗಲೆ ಆ ಬಗ್ಗೆ ಗೊತ್ತುವಳಿ ಪಾಸು ಮಾಡಿ ಕರ್ನಾಟಕ ಮಹಾರಾಷ್ಟ್ರ ವಿವಾದವನ್ನು ಎಬ್ಬಿಸುವದು ನ್ಯಾಯ್ಯವಲ್ಲ. ಸಾಹಿತ್ಯ ಸಮ್ಮೇಲನದಲ್ಲಿ ಸ್ಫೋಟಕವಾದ ಇನ್ನೊಂದು ಗೊತ್ತುವಳಿ ಅತ್ಯಂತ ಆಕ್ಷೇಪಾರ್ಹವಾಗಿದೆ. ಬೆಳಗಾವಿ ಸುದ್ದಿಗಳನ್ನು ಕರ್ನಾಟಕದ ಕಾಲಮಿನಲ್ಲಿ ಪ್ರಸಿದ್ಧಿಸದಿರಲು ವೃತ್ತಪತ್ರ ಸಂಪಾದಕರಿಗೆ ಬೇಡಿಕೊಳ್ಳಬೇಕೆಂಬುದ ಆ ಗೊತ್ತುವಳಿ. ಬೆಳಗಾವಿಯು ಸರಕಾರದ ಮತ್ತು ಕಾಂಗ್ರೆಸ್ಸಿನ ಆಡಳಿತೆಯಲ್ಲಿ ಕರ್ನಾಟಕಕ್ಕೆ ಒಳಪಟ್ಟ ನಗರವು. ಕರ್ನಾಟಕದ ಪ್ರಮುಖ ನಗರಗಳಲ್ಲಿ ಒಂದು. ಇಂಥ ನಗರದ ಸುದ್ದಿಯನ್ನು ಕರ್ನಾಟಕದ ಸುದ್ದಿಗಳಲ್ಲಿ ಹಾಕುತಿರುವದು ಅತ್ಯಂತ ನ್ಯಾಯ್ಯವು ಮತ್ತು ಸಮಂಜಸವು. ಸಾಹಿತ್ಯ ಸಮ್ಮೇಲನದವರು ಈ ಸಂಬಂಧದಲ್ಲಿ ಮಾಡಿದ ಗೊತ್ತುವಳಿಯನ್ನು ನಾವು ಪೂರ್ಣ ನಿಷೇಧಿಸುತ್ತೇವೆ. ಮರಾಟಿಗರು ಈ ಬಗೆಯ ಆಕ್ರಮಣಧೋರಣವನ್ನಿಟ್ಟುಕೊಂಡು ಕಾರ್ಯ ಮಾಡುತ್ತ ನಡೆದರೆ ಕನ್ನಡ ಮರಾಠಿ ವಾದವು ಹೆಚ್ಚು ಬೆಳೆದು ಆದರಿಂದ ವಿಘಾತಕ ಪರಿಣಾಮವುಂಟಾಗದಿರದು. ಮರಾಠಿಗರು ಇನ್ನಾದರೂ ಈ ಬಗೆಯ ಧೋರಣ ಬಿಟ್ಟುಗೊಡುವದು ಅವಶ್ಯವೆಂದು ನಾವು ಸ್ಪಷ್ಟ ಅಭಿಪ್ರಾಯಪಡುತ್ತೇವೆ.

ಒಕ್ಕಲತನ ಕಾಲೇಜ

ಕರ್ನಾಟಕವು ಹರಿದು ಹಂಚಿಹೋದ್ದರಿಂದ ಅದರ ಬೆಳವಣಿಗೆಗೆ ಎಷ್ಟೊಂದು ಅಡಚಣಿಯಾಗಿದೆಂಬುದು ಸ್ಪಷ್ಟವಾಗಿದೆ. ಸ್ವತಂತ್ರ ಪ್ರಾಂತವಿಲ್ಲ, ಸ್ವತಂತ್ರ ವಿಶ್ವವಿದ್ಯಾಲಯವಿಲ್ಲ, ಒಕ್ಕಲತನ, ಎಂಜಿನಿಯರಿಂಗ, ವೈದ್ಯಕೀಯ ಮೊದಲಾದ ಯಾವ ಕಾಲೇಜುಗಳೂ ಇಲ್ಲ. ಈ ಶಿಕ್ಷಣಪಡೆಯುವುದಕ್ಕಾಗಿ ನಮ್ಮ ಮಕ್ಕಳು ಪುಣೆ, ಮುಂಬಯಿಗಳಿಗೆ ಹೋಗಬೇಕು, ಕಾಲೇಜ ಪ್ರವೇಶಕ್ಕಾಗಿ ಬಗೆಬಗೆಯ ಕಷ್ಟನಷ್ಟಗಳನ್ನನುಭವಿಸಬೇಕು ಎಷ್ಟೋ ಸಲ ಕಾಲೇಜಗಳಲ್ಲಿ ಪ್ರವೇಶ ಕೂಡ ದೊರೆಯುವದಿಲ್ಲ. ಈ ಪರಿಸ್ಥಿತಿ ಹೋಗಿ ಕನ್ನಡ ವಿದ್ಯಾರ್ಥಿಗಳಿಗೆ ಎಲ್ಲ ಬಗೆಯ ಶಿಕ್ಷಣ ದೊರೆಯುವ ಏರ್ಪಾಡ ಮಾಡುವದು ಸರಕಾರದ ಕರ್ತವ್ಯವಾಗಿದೆ. ಆದರೆ ಪರಕೀಯ ಸರಕಾರದವರು ಕನ್ನಡಿಗರ ಈ ಬೇಡಿಕೆಯನ್ನು ಈ ವರೆಗೆ ಮನ್ನಿಸಲಿಲ್ಲ. ಈಗ ನಮ್ಮ ಪ್ರತಿನಿಧಿಗಳೇ ಅಡಳಿತವನ್ನು ವಹಿಸಿಕೊಂಡಿರುವರು. ಕನ್ನಡಿಗರು ಈ ಬೇಡಿಕೆಗಳನ್ನು ಪೂರೈಸಿರೆಂದು ಅವರನ್ನು ಒತ್ತಾಯಪಡಿಸುವದು ಅತ್ಯವಶ್ಯವಾಗಿದೆ. ಕರ್ನಾಟಕದಲ್ಲಿ ವೈದ್ಯಕೀಯ ಕಾಲೇಜು, ಒಕ್ಕಲತನ ಕಾಲೇಜು, ಮತ್ತು ಎಂಜನಿಯರಿಂಗ ಕಾಲೇಜು ಸ್ಥಾಪಿಸಿರೆಂದು ಕನ್ನಡಿಗರು ಎಂದಿನಿಂದಲೂ ಕೇಳಿಕೊಳ್ಳುತ್ತಿರುವರು. ವೈದ್ಯಕೀಯ ಕಾಲೇಜು ಹೆಚ್ಚು ವೆಚ್ಚದ್ದಾಗುವದೆಂಬ ನೆವ ಮುಂದೆ ಬಂದರೆ ವೈದ್ಯಕೀಯ ಶಾಲೆಯನ್ನಾದರೂ ಸ್ಥಾಪಿಸುವದವಶ್ಯವಾಗಿದೆ. ಒಕ್ಕಲತನ ಕಾಲೇಜ ಸ್ಥಾಪಿಸುವದಕ್ಕೆ ಕೂಡಲೆ ಸರಕಾರದವರು ಅಣಿಯಾಗಬೇಕು. ಕರ್ನಾಟಕ ಒಕ್ಕಲತನದ ನಾಡು. ಕನ್ನಡ ವಿದ್ಯಾರ್ಥಿಗಳು ಒಕ್ಕಲತನದಲ್ಲಿ ಶಿಕ್ಷಣ ಪಡೆದು ಆಧುನಿಕ ಪದ್ಧತಿಯಿಂದ ಒಕ್ಕಲತನವನ್ನು ಸಾಗಿಸಿದ್ದಾದರೆ ಇಲ್ಲಿನ ಉತ್ಪನ್ನ ಹೆಚ್ಚುವದೆಂಬದನ್ನು ಬೇರೆ ಹೇಳಬೇಕಿಲ್ಲ. ಒಕ್ಕಲತನ ಕಾಲೇಜನ್ನು ಸ್ಥಾಪಿಸಿರೆಂದು ಲೋಕ ಪ್ರಾತಿನಿಧಿಕ ಸರಕಾರಕ್ಕೆ ಕನ್ನಡಿಗರು ಒತ್ತಾಯ ಪಡಿಸುತ್ತಿರುವರು. ಒಕ್ಕಲತನ ಮಂತ್ರಿಗಳಾದ ಮಾನ್ಯ ಪಾಟೀಲ ಮಲ್ಲನಗೌಡರು ಮೊನ್ನೆ ಗದಗ, ಬಾಗಲಕೋಟೆಗಳಿಗೆ ಬಂದಾಗ ಜನತೆಯು ಕೇಳಿದ ಪ್ರಶ್ನೆಗೆ ಉತ್ತರ ಕೊಡುವಾಗ ಒಕ್ಕಲತನ ಕಾಲೇಜ ಸ್ಥಾಪಿಸಲು ಪ್ರಯತ್ನಿಸ್ವವೆನು. ಆ ಬಗ್ಗೆ ವಿಚಾರ ನಡೆಸಿರುವೆನು ಎಂದು ಆಶ್ವಾಸನ ಕೊಟ್ಟದ್ದುಂಟು. ಆದರೆ ಬರಿ ಆಶ್ವಾಸನದಿಂದ ಕನ್ನಡಿಗರು ಸ್ವಸ್ಥ ಕೂಡ್ರಬಾರದು. ಈ ಬಗ್ಗೆ ಜೋರಾದ ಚಳವಳಿಯನ್ನು ಹೂಡಬೇಕು. ಮಾನ್ಯ ಮಂತ್ರಿಗಳಾದರೂ ಈ ಬಗ್ಗೆ ಮಂತ್ರಿಮಂಡಳದಲ್ಲಿ ತಮ್ಮ ವರ್ಚಸ್ಸನ್ನು ಪಯೋಗಿಸಿ ಅದನ್ನು ಬೇಗನೆ ಸಾಧಿಸಿಕೊಳ್ಳಬೇಕು. ಒಕ್ಕಲತನ ಕಾಲೇಜಿನಂತೆ ಅರಣ್ಯ ಕಾಲೇಜನ್ನು ಸ್ಥಾಪಿಸುವದೂ ಅತ್ಯಂತ ಅವಶ್ಯವಾಗಿದೆ. ಕರ್ನಾಟಕದಲ್ಲಿ ಅರಣ್ಯ ವಿಪುಲವಾಗಿದ್ದು ಪ್ರಾತ್ಯಕ್ಷಿಕ ಪ್ರಾಯೋಗಿಕ ಶಿಕ್ಷಣಕೊಡಲು ಬೇಕಾದಷ್ಟು ಅನುಕೂಲತೆಗಳಿವೆ ಅರಣ್ಯಶಿಕ್ಷಣ ನಮ್ಮ ಮಕ್ಕಳಿಗೆ ಸಿಕ್ಕುವದು ಅತ್ಯವಶ್ಯವಾಗಿದೆ. ಆದುದರಿಂದ ಮುಂಬಯಿ ಸರಕಾರದವರು ಕೂಡಲೆ ಈ ಕಾಲೇಜುಗಳನ್ನು ಸ್ಥಾಪಿಸಿ ಬಹು ದಿನಗಳಿಂದ ಇದ್ದ ಕನ್ನಡಿಗರ ಬೇಡಿಕೆಯನ್ನು ಪೂರಯಿಸಬೇಕೆಂದು ಆಗ್ರಹಪೂರ್ವಕವಾಗಿ ಬಿನ್ನವಿಸುತ್ತೇವೆ

ಲಂಚಗುಳಿತನದ ನಿರ್ಮೂಲನ

ಯುದ್ಧ, ಆಹಾರಾಭಾವ, ನಿಯಂತ್ರಣ ಮೊದಲಾದ ಕಾರಣಗಳ ಮೂಲಕ ಲಂಚಗುಳಿತನ, ಕಳ್ಳಪೇಟೆ ದೇಶದಲ್ಲೆಲ್ಲ ತಲೆಯೆತ್ತಿವೆ. ಪರಕೀಯ ಸರಕಾರವಾದರೂ ಇತ್ತ ಸಾಕಷ್ಟು ಲಕ್ಷ ಪೂರೈಸದಿದ್ದುದರಿಂದ ಅದು ಮತ್ತಷ್ಟು ತಾಂಡವ ನೃತ್ಯವಾಡಹತ್ತಿತ್ತು. ಇದೀಗ ದೇಶದಲ್ಲೆಲ್ಲ ಲೋಕಪ್ರಾತಿನಿಧಿಕ ಸರಕಾರಗಳು ಅಸ್ತಿತ್ವದಲ್ಲಿ ಬಂದುದರಿಂದ ಈ ಲಂಚಗುಳಿತನ ಮತ್ತು ಕಳ್ಳಪೇಟೆ ಹೋಗಲಾಡಿಸಲು ಅಣಿಯಾಗಿವೆ. ಮುಂಬಯಿ ಸರಕಾರದವರು ಈ ಬಗ್ಗೆ ಹೊಸದೊಂದು ಸಂಸ್ಥೆಯನ್ನೇ ಸ್ಥಾಪಿಸಲಿರುವರು. ಸರಕಾರದ ಗೃಹಮಂತ್ರಿಗಳಾದ ಮಾನ್ಯ ಮುರಾರಜಿಯವರು ಪತ್ರಿಕಾ ಪರಿಷತ್ತಿನಲ್ಲಿ ಇದರ ಬಗ್ಗೆ ಹೀಗೆ ಹೇಳಿದರು: ಲಂಚಗುಳಿತನದ ನಿರ್ಮೂಲನ ಮತ್ತು ಕಳ್ಳಪೇಟೆಗಳ ನಿರ್ಮೂಲನಕ್ಕಾಗಿ ಸರಕಾರದವರು ಒಂದು ಸಂಸ್ಥೆಯನ್ನು ನಿರ್ಮಿಸಲಿರುವರು. ಈ ಸಂಸ್ಥೆಯ ಸ್ವರೂಪವೆಂತಹದು ಮತ್ತು ಅದು ಹೇಗ ಕೆಲಸ ಮಾಡುವದು ಎಂಬುದನ್ನು ಈಗ ಹೇಳಲಾಗುವದಿಲ್ಲ. ಈಗ ಅದನ್ನು ತಿಳಿಸಿದರೆ ಸರಕಾರದ ಉದ್ದೇಶ ಸಿದ್ಧಿಸಲಾರದು. ಆದರೆ ಜನರು ಈ ಸಂಸ್ಥೆಯ ಕಾರ್ಯಕಲಾಪಗಳ ಪರಿಣಾಮಕ್ಕಾಗಿ ದಾರಿಕಾಯಬೇಕು. ಸಮಾಜವಿರೋಧಿಗಳನ್ನು ಎದುರಿಸಲು ಸರಕಾರಕ್ಕೆ ಸಹಾಯ ಮಾಡಬೇಕು ಎಂದು ಮುಂತಾಗಿ ಅವರು ಹೇಳಿರುವರು. ಮಾನ್ಯ ಮಂತ್ರಿಗಳ ಈ ಹೇಳಿಕೆ, ಆಶ್ವಾಸನ ಅತ್ಯಂತ ಮಹತ್ವದ್ದಾಗಿವೆ. ಲಂಚಗುಳಿತನ, ಕಳ್ಳಪೇಟೆ ಹಾವಳಿಯಿಂದ ಜನವೆಷ್ಟೊಂದು ಜರ್ಜರಿತವಾಗಿದೆಂಬುದನ್ನು ವಿವರಿಸಲಳವಿಲ್ಲ. ಇದೆಲ್ಲ ಎಂದು ಮಾಯವಾಗುವದೊ ಎಂದು ಅವರು ದಾರಿಕಾಯುತ್ತಿರುವರು. ಸರಕಾರ ಮತ್ತು ಸಾರ್ವಜನಿಕರು ಕೂಡಿಯೆ ಈ ಹಾವಳಿಯನ್ನು ತಪ್ಪಿಸಲು ಪ್ರಯತ್ನಿಸಬೇಕು. ಸರಕಾರದ ಸಿ ಆಯ್,ಡಿ. ಖಾತೆಯವರೂ ಈ ಸಂದರ್ಭದಲ್ಲಿ ಒಳ್ಳೆ ಸಹಾಯಕರಾಗಬಲ್ಲರು. ಇವರೆಲ್ಲರ ಪ್ರಯತ್ನದಿಂದ ಲಂಚಗುಳಿತನ ಮತ್ತು ಕಳ್ಳಪೇಟೆ ಬೇಗನೆ ನಿರ್ಮೂಲವಾಗಲೆಂದು ಹಾರೈಸುತ್ತೇವೆ.

ಆಹಾರ ರಂಗ

ಆಹಾರ ರಂಗದ ಪರಿಸ್ಥಿತಿ ದಿನ ದಿನಕ್ಕೆ ಭೀಕರವಾಗಹತ್ತಿದೆ. ಅಮೇರಿಕೆ ಸರಕಾರದ ಪ್ರತಿನಿಧಿಗಳೆಂದು ಹಿಂದುಸ್ತಾನದಲ್ಲೆಲ್ಲ ಸಂಚರಿಸಿ ಹೋದ ಹರ್ಬರ್ಟ ಹೂವರರು ಅಧ್ಯಕ್ಷ ಟ್ರೂಮನ್‌ರಿಗ ವರದಿಯನ್ನೊಪ್ಪಿಸಿರುವರು. ಅವರು ಒಟ್ಟು ೩೦ ಸಾವಿರ ಮೈಲು ಪ್ರವಾಸ ಮಾಡಿ ೨೨ ದೇಶಗಳನ್ನು ಸುತ್ತಿಬಂದಿರುವರು. ಹಿಂದೀ ಮಹಾಸಾಗರ ಪ್ರದೇಶದಲ್ಲಿ ಮೇ ತಿಂಗಳ ೧ ನೇ ತಾರೀಖಿನಿಂದ ಸಪ್ಟಂಬರ ೩೦ ರ ವರೆಗೆ ೨೮೮೬೦೦೦ ಟನ್ ಆಹಾರ ಪದಾರ್ಥಗಳ ಅವಶ್ಯಕತೆಯಿದೆಂದು ಅವರು ಅಭಿಪ್ರಾಯ ಪಟ್ಟಿರುವರು. ಹಿಂದುಸ್ತಾನದ ಬೇರೆ ಬೇರೆ ಪ್ರಾಂತಗಳಿಗೆ ಬೇಕಾದ ಆಹಾರ ಪದಾರ್ಥಗಳ ಅಂಕೆ ಸಂಖ್ಯೆಗಳನ್ನು ವಿವರಿಸುತ್ತ ಹಿಂದುಸ್ತಾನದ ಉಳಿಕೆ ಪ್ರಾಂತಗಳಿಂದ ೨ ಲಕ್ಷ ಟನ್ ಗೋದಿ ಪಡೆಯಬಹುದು. ಇನ್ನೆರಡು ಲಕ್ಷ ಟನ್ ಕಡ ತೆಗೆದುಕೊಳ್ಳಬಹುದು. ಸಯಾಮವು ೩ ಲಕ್ಷ ಟನ್ ಹೆಚ್ಚು ಅಕ್ಕಿ ಕಳಿಸಬಹುದೆಂದೂ ಅವರು ತಮ್ಮ ವರದಿಯಲ್ಲಿ ಬರೆದಿರುವರು. ಹಿಂದೀ ಮಹಾಸಾಗರ ಪ್ರದೇಶದಲ್ಲಿ ಉಂಟಾದ ಬರಗಾಲದ ವಿಚಾರಣೆಯ ಹೊಣೆ ಕೇವಲ ಅಮೇರಿಕೆಯ ಮೇಲಿದೆಂಬದನ್ನು ಹೂವರರು ಒಪ್ಪುವದಿಲ್ಲ. ನೆರೆಯ ನಾಡುಗಳಿಂದ ಸಾಧ್ಯವಿದ್ದಷ್ಟು ಆಹಾರ ಮೊದಲು ತರಿಸಿಕೊಳ್ಳಬೇಕೆಂದ ಅವರು ಸೂಚಿಸಿರುವರು. ಹೊಣೆ ಯಾರ ಮೇಲೆಯೇ ಇರಲಿ ಹಿಂದುಸ್ತಾನ ಉಪವಾಸ ಸಾಯದಂತೆ ನೋಡಿಕೊಳ್ಳುವುದು ಎಲ್ಲ ಉಳಿಕೆ ದೇಶಗಳ ಧರ್ಮವಾಗಿದೆ. ಅಧ್ಯಕ್ಷ ಟ್ರೂಮನ್ನರು ಲಾರ್ಡ ವೇವೆಲ್ಲರಿಗೆ ಕೊಟ್ಟ ಸಂದೇಶದಲ್ಲಿ ಹಿಂದುಸ್ತಾನದಲ್ಲಿಯ ಆಹಾರ ಪರಿಸ್ಥಿತಿ ತಮಗೆ ಚೆನ್ನಾಗಿಯೆ ತಿಳಿದಿದ್ದು ಅತ್ಯಂತ ಸಹಾನುಭೂತಿಪೂರ್ವಕವಾಗಿ ಅದನ್ನು ವಿಚಾರಿಸುತಿರುವರೆಂದು ಆಶ್ವಾಸಿಸಿರುವರು. ಈ ಆಶ್ವಾಸನದಂತೆ ಅಧ್ಯಕ್ಷ ಟ್ರೂಮನ್ನರು ಆದಷ್ಟು ಬೇಗ ಹಿಂದುಸ್ತಾನಕ್ಕೆ ಆಹಾರ ಪದಾರ್ಥಗಳನ್ನು ಕಳಿಸಿಕೊಡಬೇಕು. ಯಾವದೇ ಕಾರಣದಿಂದ ಈ ಆಹಾರ ಪದಾರ್ಥಗಳು ಬರಲು ತಡವಾದರೆ ಪರಿಸ್ಥಿತಿ ಭೀಕರವಾಗಿ ಲಕ್ಷಾವಧಿ ಜನ ಉಪವಾಸ ಮಾರಿಗೆ ಬಲಿಯಾಗಬೇಕಾದ ಪ್ರಸಂಗ ಬರಬಹುದು. ಹೊರಗಿನಿಂದ ಆಹಾರ ಪದಾರ್ಥ ಬಂದ ಬಳಿಕ ಅವು ಯೋಗ್ಯರೀತಿಯಿಂದ ಸಕಾಲದಲ್ಲಿ ಕೊರತೆ ಪ್ರದೇಶಗಳಲ್ಲೆಲ್ಲ ಹಂಚುವ ವ್ಯವಸ್ಥೆ ಹಿಂದುಸ್ತಾನ ಮತ್ತು ಪ್ರಾಂತಿಕ ಸರಕಾರಗಳು ಒಳ್ಳೆ ದಕ್ಷತೆಯಿಂದ ಮಾಡಬೇಕು ಅಂದರೇನೇ ಪರಿಸ್ಥಿತಿ ಸಮಾಧಾನಕರ ಉಳಿಯಬಹುದು.

ಮಾತೃಭಾಷೆಯ ಮಾಧ್ಯಮ

ಲಖನೌ ವಿಶ್ವವಿದ್ಯಾನಿಲಯದವರು ಹಿಂದುಸ್ತಾನಿಯ ಮುಖಾಂತರ ಶಿಕ್ಷಣ ಕೊಡಬೇಕೆಂಬ ಮಹತ್ವದ ಗೊತ್ತುವಳಿಯನ್ನು ಪಾಸಮಾಡಿ ಹಿಂದುಸ್ತಾನದಲ್ಲಿಯ ಉಳಿದ ವಿಶ್ವವಿದ್ಯಾಲಯಗಳಿಗೆ ಒಳ್ಳೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿರುವರು. ಮಾತೃಭಾಷೆಯ ಮೂಲಕವೆ ವಿದ್ಯಾರ್ಥಿಗಳಿಗೆ ಶಿಕ್ಷಣ ದೊರೆತದ್ದಾದರೆ ವಿಶೇಷ ತೊಂದರೆಯಿಲ್ಲದೆ ಅವರು ಜ್ಞಾನಾರ್ಜನೆ ಮಾಡುವರೆಂಬುದು ಅನುಭವದ ಮಾತು. ಆದರೆ ಪರಕೀಯ ಆಂಗ್ಲ ಸರಕಾರದವರು ನವಕರಿಗಾಗಿಯೆ ಎಂದು ಆಂಗ್ಲ ಶಿಕ್ಷಣ ಕೊಡುವುದನ್ನು ಪ್ರಾರಂಭಿಸಿ ಆ ಮಾಧ್ಯಮದಿಂದಲೇ ಶಿಕ್ಷಣ ಪ್ರಾರಂಭಿಸಿದರು. ಈಗಲೂ ಅದೇ ಪ್ರಘಾತವಿದೆ. ಆದರೆ ಇತ್ತೀಚೆ ಭಾರತೀಯರಲ್ಲಿ ಆತ್ಮಜ್ಞಾನ ಹೆಚ್ಚಿದುದರಿಂದ ಅವರು ಮಾತೃಭಾಷೆಯ ಮೂಲಕವೆ ಎಲ್ಲ ವ್ಯವಹಾರ ಸಾಗಿಸಲಣಿಯಾಗಿದ್ದಾರೆ. ಆಂಗ್ಲ ಭಾಷೆಯ ಮುಖಾಂತರ ಶಿಕ್ಷಣ ಕೊಡದಿದ್ದರೆ ಶಿಕ್ಷಣದ ತಳಹದಿಯು ಕುಸಿದು ಬೀಳುವುದೆಂಬ ಭ್ರಮಾತ್ಮಕ್ಕೀಗ ಎಡೆಯಿಲ್ಲದಂತಾಗಿದೆ. ಅಂತೆಯೆ ಲಖನೌ ವಿಶ್ವವಿದ್ಯಾನಿಲಯದವರು ಹಿಂದುಸ್ತಾನಿ ಮಾಧ್ಯಮ ಮೂಲಕ ಶಿಕ್ಷಣ ಕೊಡಬೇಕೆಂಬ ನಿರ್ಣಯ ಪಾಸು ಮಾಡಿರುವರು. ದೇಶೀಯ ಭಾಷೆಗಳಲ್ಲಿ ಆಧುನಿಕ ವೈಜ್ಞಾನಿಕ ಮೊದಲಾದ ಸಾಹಿತ್ಯವಿಲ್ಲದ್ದರಿಂದ ಶಿಕ್ಷಣ ಕಾರ್ಯ ಚೆನ್ನಾಗಿ ಸಾಗದೆಂಬ ನೆವ ಯಾವಾಗಲೂ ಮುಂದೆ ಮಾಡಲಾಗುತ್ತಿದೆ. ಆದರೆ ಮಾಧ್ಯಮವನ್ನು ಬದಲು ಮಾಡದೆ ದೇಶಭಾಷೆಗಳಲ್ಲಿ ಅವಶ್ಯಕ ಸಾಹಿತ್ಯ ಪ್ರಕಟವಾಗಲಾರದು. ತಮ್ಮ ಪುಸ್ತಕಗಳ ಅವಶ್ಯಕತೆ ವಿದ್ಯಾರ್ಥಿಗಳಿಗಿದೆಂದು ಮನವರಿಕೆಯಾದರೆ ಮಾತ್ರ ಆಯಾ ತಜ್ಞರು ದೇಶಭಾಷೆಗಳಲ್ಲಿ ಪುಸ್ತಕ ಬರೆಯುವರು. ಆದುದರಿಂದ ಪುಸ್ತಕವಿಲ್ಲದಿದ್ದರೂ ಚಿಂತೆಯಿಲ್ಲ, ಮೊದಲು ಮಾತೃಭಾಷೆಯ ಮಾಧ್ಯಮದ ಪ್ರಯೋಗ ಪ್ರಾರಂಭಿಸಬೇಕು. ಲಖನೌ ವಿಶ್ವವಿದ್ಯಾಲಯದವರು ಈ ಸಂದರ್ಭದಲ್ಲಿ ಉಳಿದ ವಿಶ್ವವಿದ್ಯಾಲಯಗಳಿಗೆ ಮಾದರಿ ಹಾಕಿ ಕೊಟ್ಟಿರುವರು. ಮುಂಬಯಿ, ಮದ್ರಾಸ, ಮೈಸೂರು ಮೊದಲಾದ ವಿಶ್ವವಿದ್ಯಾನಿಲಯಗಳು ಲಖನೌ ವಿಶ್ವವಿದ್ಯಾನಿಲಯದ ಅನುಕರಣೀಯ ಗೊತ್ತುವಳಿಯನ್ನು ಪಾಸಮಾಡಿಕೊಂಡು ಮಾತೃಭಾಷೆಯ ಮೂಲಕವೆ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡುವ ಸೌಲಭ್ಯವೊದಗಿಸಿಕೊಡಬೇಕೆಂದು ಆಗ್ರಹಪೂರ್ವಕ ಸೂಚಿಸುತ್ತೇವೆ.

ರಾಷ್ಟ್ರೀಯ ಆಹಾರದಲ್ಲಿ ಒಂದು ಪ್ರಯೋಗ

ಡೆನ್ಮಾರ್ಕದಲ್ಲಿ ಕಳೆದ ಮಹಾಯುದ್ಧದ ಕಾಲಕ್ಕೆ ಒಳ್ಳೆ ಆಕರ್ಷಕವಾದ ಪ್ರಯೋಗ ಮಾಡಲ್ಪಟ್ಟಿತು. ಸದ್ಯದ ಆಹಾರ ಕೊರತೆಯ ಕಾಲದಲ್ಲಿ ನಮಗೆ ಅದರಿಂದ ಒಳ್ಳೆ ನೈತಿಕ ಬೋಧೆಯುಂಟಾಗುವಂತಿದೆ. ಡೇನರು ಮೊದಲು ಹೆಚ್ಚು ಪ್ರಮಾಣದಲ್ಲಿ ದುಗ್ಧ—ಸಸ್ಯಾಹಾರಿಗಳು. ಅನಂತರ ಸುಮಾರು ೧೮೭೦-೧೮೮೦ ರಲ್ಲಿ ಅಮೇರಿಕೆಯಿಂದ ಗೋದಿ ಮತ್ತು ಸಾಗಾಗದ ಪ್ರೇರೀ ಭೂಮಿಗಳಿಂದ ಜವೆಗೋದಿ ಹೆಚ್ಚು ಪ್ರಮಾಣದಲ್ಲಿ ಬರಹತ್ತಿತು. ಇದರಿಂದ ಡೇನರು ಬೇಗನೆ ತಮ್ಮ ಒಕ್ಕಲತನ ಪದ್ಧತಿಯನ್ನು ಬದಲು ಮಾಡಬೇಕಾಯಿತು. ಅವರು ಹಂದಿ ಮತ್ತು ಕೋಳಿಗಳನ್ನು ಸಾಕಹತ್ತಿದರು. ತತ್ತಿ ಹಂದಿ ಮಾಂಸ ಮತ್ತು ಬೆಣ್ಣೆಯನ್ನು ಇಂಗ್ಲಂಡಿಗೆ ನಿರ್ಯಾತ ಮಾಡಹತ್ತಿದರು. ತಾವ್ಯಾರೂ ತತ್ತಿ ಮತ್ತು ಮಾಂಸ ದೊಡ್ಡಪ್ರಮಾಣದಲ್ಲಿ ತಿನ್ನಹತ್ತಿದರು.

ಅಮೇರಿಕೆ ಯುದ್ಧದಲ್ಲಿ ಬಿದ್ದನಂತರ ಉಂಟಾದ ದಿಗ್ಬಂಧನದಿಂದ ಡೇನರು ಒಳ್ಳೆ ಪೇಚಿನಲ್ಲಿ ಬಿದ್ದರು. ಅವರಿಗೆ ಗಂಭೀರ ಪರಿಸ್ಥಿತಿ ಬಂದಿತು. ಡೆನ್ಮಾರ್ಕದ ಜನಸಂಖ್ಯೆ ೩೫೦೦,೦೦೦ ಪಶುಸಂಖ್ಯೆ ೫೦೦೦,೦೦೦ ಅಮೇರಿಕೆಯಿಂದ ಧಾನ್ಯ ಮತ್ತು ಮೇವು ಬರುತ್ತಲಿದ್ದಿತು. ಆದರೆ ಈ ಪದಾರ್ಥಗಳು ಅಮೇರಿಕೆಯಿಂದ ಬರುವದು ಒಮ್ಮೆಲೆ ನಿಂತ ಕೂಡಲೆ ಅವುಗಳ ಕೊರತೆ ವಿಶೇಷ ಎನಿಸಹತ್ತಿತು. ಸರಕಾರದ ಆಹಾರ ಸಂಶೋಧನ ಖಾತೆಯ ಸುಪರಿಂಟೆಂಡೆಂಟ ಪ್ರೊಫೇಸರ ನಿಕ್ಲೆಲ್ ಹಿಂಧೆಡೆ ಇವರನ್ನು ಈ ಗಂಡಾಂತರವನ್ನೆದುರಿಸಲು ಡೇನ ಸರಕಾರದ ಆಹಾರ ಸಲಹೆಗಾರರನ್ನಾಗಿ ನೇಮಿಸಲಾಯಿತು. ಈ ಪ್ರಶ್ನೆಯನ್ನು ಬಿಡಿಸುವ ಕೆಲಸವನ್ನು ಅವರಿಗೆ ಒಪ್ಪಿಸಲಾಯಿತು. ಈವರೆಗೆ ಇಂಗ್ಲೀಶ ಮತ್ತು ಡೇನರಿಗೆ ಕೂಡಿಯೇ ಹಂದಿಗಳ ಮಾಂಸವನ್ನು ಪೂರೈಸುತ್ತಿದ್ದರು. ಹಂದಿಗಳನ್ನು ಹೊರಗಟ್ಟಿ ಅವು ತಿನ್ನುತ್ತಿದ್ದ ಧಾನ್ಯಗಳನ್ನು ಜನರಿಗೆ ಕೊಡಬೇಕೊ? ಹಾಗೆ ಮಾಡುವದು ವಿಹಿತವೆಂದು ಹಿಂಧೆಡೆಯವರು ನಿರ್ಧರಿಸಿದರು. ಅವರ ನಿರ್ಧಾರದಂತೆ ನಾಲ್ಕೈದಾಂಶದಷ್ಟು ಹಂದಿಗಳು ಕೊಲ್ಲಲ್ಪಟ್ಟವು, ಒಂದಾಂಶ ದನಕರುಗಳು ಸಂಹರಿಸಲ್ಪಟ್ಟವು. ಈ ರೀತಿ ಹಂದಿಗಳ ಸಂಹಾರವಾಗಿದ್ದರಿಂದ ಅವುಗಳಿಗೆ ಕೊಡುತ್ತಿದ್ದ ತವುಡನ್ನು ಕೂಡಿಸಿ ಇಡೀ ರೊಟ್ಟಿಯನ್ನು ಮಾಡಲು ಪ್ರಾರಂಭಿಸಿದರು. ಇದೇ ಇತಿಹಾಸಪ್ರಸಿದ್ಧ ಕ್ಲಿಯೆ ಬ್ಲಾಟ ಇಡೀ ಡೆನ್ಮಾರ್ಕದಲ್ಲಿ ಅಧಿಕೃತ ಆಹಾರವಾಯಿತು. ಇದರ ಹೊರತಾಗಿ ಡೇನರು ಅಂಬಲಿ, ತೊಪ್ಪಲಪಲ್ಲೆ, ಹಾಲು, ಬೆಣ್ಣೆ ಮತ್ತು ಹಣ್ಣುಹಂಪಲಗಳನ್ನು ತಿನ್ನಹತ್ತಿದರು ಮಾದಕ ಪದಾರ್ಥಗಳಿಗಾಗಿ ಯಾವನೇ ಬಗೆಯ ಧಾನ್ಯ ಅಥವಾ ಬಟಾಟೆಯ ಉಪಯೋಗ ಮಾಡಲು ಅವಕಾಶವಿಲ್ಲದ್ದರಿಂದ ಯಾರಿಗೂ ಮಾದಕ ಪದಾರ್ಥ ಸಿಕ್ಕದಂತಾಯಿತು. ಮೊದಲು ಅರ್ಧದಷ್ಟು ಮಾತ್ರ ಮದ್ಯ ಕೊಡಹತ್ತಿದರು. ಫಾರ್ಮುಗಳಲ್ಲಿ ಕೆಲಸ ಮಾಡುವವರಿಗೆ ಮಾತ್ರ ಮಾಂಸ ದೊರೆಯಹತ್ತಿತು. ನಗರಗಳಲ್ಲಿಯ ಜನರಿಗೆ ಅಂದರೆ ನೂರಕ್ಕೆ ಸುಮಾರು ನಾಲ್ವತ್ತರಷ್ಟು ಜನರಿಗೆ ಸ್ವಲ್ಪೇ ಮಾಂಸ ದೊರೆಯಹತ್ತಿತು ಕೇವಲ ಶ್ರೀಮಂತರು ಮಾತ್ರ ಗೋಮಾಂಸ ತಿನ್ನುತ್ತಿದ್ದರು.

೧೯೧೭ ರಲ್ಲಿ ಆಹಾರ ನಿಯಮಗಳು ಜಾರಿಯೇ ಬಂದವು. ೧೯೧೭ ನೇ ಇಸ್ವಿಯ ಅಕ್ಟೋಬರದಿಂದ ೧೯೧೮ ನೇ ಅಕ್ಟೋಬರದ ವರೆಗೆ ಈ ನಿಯಮಗಳು ಒಳ್ಳೆ ಜೋರಿನಿಂದ ಅಮಲಿನಲ್ಲಿ ತರಲಾದವು.

ಈ ರಾಷ್ಟ್ರೀಯ ಪಥ್ಯವನ್ನು ಜಾರಿಯಲ್ಲಿ ತಂದದ್ದರಿಂದ ಒಳ್ಳೆ ಆಶ್ಚರ್ಯಕರ ಪರಿಣಾಮವುಂಟಾಯಿತು. ೧೯೧೭-೧೮ ರಲ್ಲಿ ಮರಣಪ್ರಮಾಣ ಸಾವಿರಕ್ಕೆ ೧೨.೫ ಇದ್ದುದು ೧೦.೪ ಕ್ಕಿಳಿಯಿತು. ಯಾವದೇ ಯುರೋಪಿಯನ ರಾಷ್ಟ್ರದಲ್ಲಿ ಯಾವದೇ ಕಾಲಕ್ಕೆ ಇಷ್ಟು ಕಡಿಮೆ ಮರಣಸಂಖ್ಯೆ ಇರಲಿಲ್ಲೆಂದು ಹಿಂಧೆಡೆಯವರು ಅಭಿಪ್ರಾಯಪಟ್ಟಿರುವರು. ೧೯೦೬ ರಿಂದ ೧೯೧೬ ರ ವರೆಗೆ ಮರಣದ ಸರಾಸರಿ ಸಂಖ್ಯೆ ೧೬೦ ಇದೆಂದು ತಿಳಿದರೆ ಅಕ್ಟೋಬರದಿಂದ ಅಕ್ಟೋಬರದ ವರೆಗಿನ ಅವಧಿಯಲ್ಲಿ ಈ ಮರಣ ಸಂಖ್ಯೆ ಸರಾಸರಿ ೬೦ ಕ್ಕಿಳಿಯಿತು. ೬೫ ವರುಷಕ್ಕಿಂತ ಹೆಚ್ಚು ವಯಸ್ಸಿನ ವೃದ್ಧರ ಮರಣಸಂಖ್ಯೆಯೂ ೭೬ ಕ್ಕಿಳಿಯಿತು.

ಇದಕ್ಕಿಂತ ಮೊದಲು ಡೇನರು ತವುಡು ತೆಗೆದಿದ್ದ ಹಿಟ್ಟಿನ ರೊಟ್ಟಿಯನ್ನು ಮತ್ತು ತವುಡು ಸಹಿತವಾದ ಹಿಟ್ಟಿನ ರೊಟ್ಟಿಯನ್ನು ತಿನ್ನುತ್ತಿದ್ದರು ಆದರೆ ಕೇವಲ ತವುಡು ಸಹಿತವಾದ ಹಿಟ್ಟಿನ ರೊಟ್ಟಿಯನ್ನು ಹಿಂಧೆಡೆಯವರು ಅವರಿಗೆ ತಿನ್ನಹಚ್ಚಿದರು. ಈ ರೊಟ್ಟಿಯಲ್ಲಿ ೬೭ ರೈ, ೨೧ ಓಟು ಮತ್ತು ೧೨ ತವುಡು ಈ ರೀತಿ ಪ್ರಮಾಣವಿದ್ದಿತು

"ಈ ರೊಟ್ಟಿಯಲ್ಲಿದ್ದ ತವುಡಿನಿಂದ ಮಾಂಸ ಸಿಕ್ಕದೆ ಇದ್ದ ಜನರಿಗೆ ಒಂದು ಬಗೆಯ ಶಾಕಾಹಾರ ಮಾಂಸ ಸಿಕ್ಕಹತ್ತಿತು. ಇದನ್ನು ಬಿಟ್ಟರೆ ಡೇನರಿಗೆ ಅಮೇರಿಕೆಯಿಂದ ಗೋದಿ ಬರುವ ಮೊದಲು ಯಾವ ಬಗೆಯ ರೊಟ್ಟಿ ಸಿಕ್ಕುತ್ತಿದ್ದಿತೋ ಅದೇ ಬಗೆಯ ರೊಟ್ಟಿ ಸಿಕ್ಕಹತ್ತಿತು. ಶತಮಾನಗಳಿಂದ ಡೆನ್ಮಾರ್ಕದ ರಾಷ್ಟ್ರೀಯ ರೊಟ್ಟಿಯು ಇದೇ ಬಗೆಯದಾಗಿದ್ದಿತು." ಎಂದು ಮುಂತಾಗಿ ಹಿಂದೆಡೆಯವರು ಅಭಿಪ್ರಾಯ ಪಟ್ಟಿರುವರು.

ಈ ರೀತಿ ಡೇನರ ರಾಷ್ಟ್ರೀಯ ಆರೋಗ್ಯ ಸುಧಾರಣೆ ಇಷ್ಟೊಂದು ದೊಡ್ಡಪ್ರಮಾಣದಲ್ಲಿ ಆದುದಕ್ಕೆ- ೧) ಮಿತಮಾಂಸ ಮತ್ತು ೨) ಮಿತಮದ್ಯ ಇವೇ ಕಾರಣಗಳೆಂದು ಹಿಂಧೆಡೆಯವರು ಅಭಿಪ್ರಾಯ ಪಟ್ಟಿರುವರು. ಅಲ್ಪಮಾಂಸ ಇಲ್ಲವೆ ಮಾಂಸಾಭಾವದ ಸ್ಥಳವನ್ನು ತವುಡು ಹೆಚ್ಚು ಪ್ರಮಾಣದಲ್ಲಿ ತುಂಬಿತು. ಏಕೆಂದರೆ ತವುಡಿನಲ್ಲಿ ಶಾಕಾಮಾಂಸದ ಸತ್ವ ಹೆಚ್ಚು ಪ್ರಮಾಣದಲ್ಲಿರುವದು. ತಮ್ಮೀ ಪ್ರಯೋಗ ಮೊದಲಿನ ಶಿಕ್ಷಣದ ಪ್ರಚಂಡ ವಿಜಯವೆಂದು ಹಿಂಧೆಡೆಯವರು ತಿಳಿದುಕೊಂಡರು. ೧೯೨೦ ನೇ ಇಸ್ವಿಯ ಮಾರ್ಚ ತಿಂಗಳದ ಡಚ್ ಪತ್ರಿಕೆಯಲ್ಲಿ ಅವರು ಈ ರೀತಿ ಬರೆದರು. 'ಈ ದುಗ್ಧ-ಶಾಕಾಹಾರದ ಪ್ರಯೋಜನದ ಬಗ್ಗೆ ನಾನು ಎಷ್ಟೊಂದು ಒತ್ತಿಹೇಳಿರುವೆನೆಂಬುದನ್ನು ವಾಚಕನು ನೋಡಬಹುದು. ನಾನೇನು ತತ್ವತಃ ಶಾಕಾಹಾರಿಯಲ್ಲ. ಆದರೆ ಆಹಾರದಲ್ಲಿ ಹೆಚ್ಚು ಪ್ರಮಾಣದಲ್ಲಿ ಮಾಂಸ ಮತ್ತು ತತ್ತಿಗಳು ಇದ್ದರೆ ಆರೋಗ್ಯಕ್ಕೆ ಅಪಾಯಕಾರಕವೆಂಬದನ್ನು ನಾನು ತೋರಿಸಿಕೊಟ್ಟಿರುವೆನೆಂದು ನಾನು ನಂಬುವೆ.'

ದಿಲ್ಲಿ, ೯-೫-೪೬ ಪ್ಯಾರೇಲಾಲ

ಕಾಂಗ್ರೆಸ್ ಮಂತ್ರಿಗಳಿಗೊಂದು ಯೋಜನೆ

ಈಗ ಕಾಂಗ್ರೆಸ್ಸು ಮತ್ತೆ ಪ್ರಾಂತಗಳಲ್ಲಿ ಅಧಿಕಾರ ಗ್ರಹಣಮಾಡಿದೆಯೆಂದ ಮೇಲೆ ಮಂತ್ರಿಗಳು ಕಾಂಗ್ರೆಸ್ ಚುನಾವಣೆ ಘೋಷಣೆಯನ್ನು ಅನುಸರಿಸಿ, ರಚನಾತ್ಮಕ ಕಾರ್ಯದ ನಿರ್ದಿಷ್ಟ ಯೋಜನೆಯನ್ನು ಮುಂದಿಟ್ಟುಕೊಂಡು ಕೆಲಸ ಮಾಡುವದು ಅತ್ಯಂತ ಅವಶ್ಯವಾಗಿದೆ. ಈ ಯೋಜನೆ ಕನಿಷ್ಠ ಆರು ತಿಂಗಳಲ್ಲಾದರೂ ಪೂರ್ಣವಾಗಬೇಕು. ಆಗ ಮಂತ್ರಿಗಳು ಅವಶ್ಯ ಬಿದ್ದರೆ, ಬಿಟ್ಟಾಗ, ಇನ್ನೊಂದು ಹೋರಾಟದಲ್ಲಿ ಧುಮ್ಮುಕಲು ಸ್ವತಂತ್ರರಾಗುವರು. ಕಾಂಗ್ರೆಸ್ ಕಾರ್ಯಸಮಿತಿಯಾಗಲಿ ಕೇಂದ್ರ ಪಾರ್ಲಮೆಂಟರಿ ಮಂಡಲವಾಗಲಿ ಮಂತ್ರಿಗಳಿಗಾಗಿ ಅಂಥದೊಂದು ಯೋಜನೆಯನ್ನು ರೇಖಿಸಿದ್ದರೆ ಬಹಳ ಉಚಿತವಾಗುತ್ತಿತ್ತು. ಸದ್ಯ ಭವಿಷ್ಯತ್ತಿನಲ್ಲಿ ಅಂಥ ಸಂಭಾವ್ಯತೆ ಕಾಣುವದಿಲ್ಲವಾಗಿ ನಾನು ಅತ್ಯಂತ ನಮ್ರತೆಯಿಂದ ಮಂತ್ರಿಗಳ ಮುಂದೆ ರಾಷ್ಟ್ರೀಯ ಪುನರ್ಘಟನೆಯ ನಿರ್ದಿಷ್ಟ ಯೋಜನೆಯೊಂದನ್ನು ಇಡಬಯಸುತ್ತೇನೆ. ಈ ಕೆಳಗಿನ ಅಂಶಗಳು ಆ ಯೋಜನೆಯ ಅತ್ಯಂತ ಸೂಕ್ಷ್ಮವಾದ ಸಾರಾಂಶವಾಗಿವೆ:

೧. ಗ್ರಾಮಪಂಚಾಯತಿಗಳಿಗೆ ಪರಮಾವಧಿ ಸ್ಥಾನಿಕ ಸ್ವಾಯತ್ತತೆ ದೊರಕುವಂತೆ ಮಾಡುವ ಮೂಲಕ ಹಳ್ಳಿಗಳನ್ನು ಪುನರುಜ್ಜೀವಿಸಿ ಅವುಗಳಲ್ಲಿ ಚೈತನ್ಯ ಸಂಚಾರ ಮಾಡಬೇಕು. ವಿಕೇಂದ್ರೀಕರಣದ ಧೀರ ಯೋಜನೆಯೊಂದನ್ನು ತತ್ತದ್ದೇಶೀಯ ಪರಿಸ್ಥಿತಿಯನ್ನು ನೋಡಿಕೊಂಡು ಜಾಗರೂಕತೆಯಿಂದ ಸಿದ್ಧಗೊಳಿಸಬೇಕು.

೨. ಹಳ್ಳಿಗಳು ಆಹಾರ, ವಸ್ತ್ರ ಮತ್ತು ಇತರ ಜೀವನಾವಶ್ಯಕತೆಗಳ ಮಟ್ಟಿಗೆ ಸ್ವಾವಲಂಬಿಗಳಾಗುವಂತೆ ಮಂತ್ರಿಗಳು ವ್ಯವಸ್ಥೆ ಮಾಡಬೇಕು ಈ ಉದ್ದೇಶದಿಂದ ನೂಲುವದು, ನೇಯುವದು, ಕಾಗದ ತಯಾರಿ, ಭತ್ತ ಕುಟ್ಟುವದು, ಎಣ್ಣೆ ತೆಗೆಯುವದು ಮೊದಲಾದ ಮನೆ ಕೈಗಾರಿಕೆಗಳನ್ನು ಪುನರುಜ್ಜೀವಿಸಲು ಅವುಗಳಿಗೆ ಸಹಾಯಧನವೀಯುವ ತುರುಸಿನ ಧೋರಣೆಯನ್ನು ಕೈಕೊಳ್ಳಬೇಕು. ಮಂತ್ರಿಗಳು ಒಡನೆ ಅ. ಭಾ. ಚರಕಾ ಸಂಘ, ಅ. ಭಾ. ಗ್ರಾಮೋದ್ಯೋಗ ಸಂಘಗಳ ಮಾರ್ಗದರ್ಶನವನ್ನು ಕೋರಬೇಕು.

೩. ಸಹಕಾರಿ ಒಕ್ಕಲತನವನ್ನೂ ಸಹಕಾರಿ ಮಾರಾಟವನ್ನೂ ಪ್ರಾರಂಭಿಸಿ ಜನಪ್ರಿಯವಾಗಿ ಮಾಡಲು ತೀವ್ರ ಪ್ರಯತ್ನಗಳನ್ನು ಕೈಕೊಳ್ಳಬೇಕು ದೀರ್ಘ ಮತ್ತು ಅಲ್ಪಾವಧಿಗಳೆರಡರಲ್ಲಿಯೂ ಅಗ್ಗ ಬಡ್ಡಿಯ ಪತ್ತು ದೊರಕುವ ವ್ಯವಸ್ಥೆ ಮಾಡತಕ್ಕದು.

ಹಳ್ಳಿಗರ ಸಾಲಗಳನ್ನು ಇಳಿಸಲು ತೀಕ್ಷ್ಣ ಕ್ರಮಗಳನ್ನು ಕೈಕೊಳ್ಳಬೇಕು.

೪. ಒಕ್ಕಲಿಗರಿಗೆ ಪೂರ್ಣ ಭದ್ರತೆಯಿರುವಂತೆ ಈಗಿರುವ ಲಾವಣಿ ಪದ್ಧತಿಯಲ್ಲಿ ತೀಕ್ಷ್ಣವಾದ ಬದಲಾವಣೆಗಳನ್ನು ಮಾಡಬೇಕು. ಎಲ್ಲ ಪ್ರಾಂತಗಳಲ್ಲಿಯೂ ಆಯಾ ದೇಶ ಪರಿಸ್ಥಿತಿಯನ್ನನುಸರಿಸಿ ಕೆಲ ಬದಲಾವಣೆಗಳೊಡನೆ ಮೌಜಾವಾರಿ (ಗ್ರಾಮ ಪದ್ಧತಿ) ಲಾವಣಿ ಪದ್ಧತಿಯನ್ನು ಪ್ರಚಾರಕ್ಕೆ ತರುವದೊಳಿತೆಂದು ನನ್ನ ಅಭಿಪ್ರಾಯ. ಮೌಜಾವಾರ ಪದ್ಧತಿಯ ವಿವರಗಳಿಗಾಗಿ "Gandhian Plan for Economic Development for India" ಪುಸ್ತಕವನ್ನು ನೋಡಿರಿ.)

೫. ಔಷಧಗಳಿಗೋಸ್ಕರ ಹೊರತು ಎಲ್ಲ ಬಗೆಯ ಮಾದಕ ದ್ರವ್ಯ ಮತ್ತು ಪೇಯಗಳನ್ನು ಸಂಪೂರ್ಣವಾಗಿ ಪ್ರತಿಬಂಧಿಸಬೇಕು

೬. ಮೂಲ ಶಿಕ್ಷಣ ಅಥವಾ "ನಯೀತಾಲೀಮು" ಪದ್ಧತಿಗೆ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಕ್ಷೇತ್ರದಲ್ಲಿ ಪೂರ್ಣ ಅವಕಾಶವನ್ನು ಕೊಡಬೇಕು. ಮಧ್ಯ ಕಾಲದಲ್ಲಿ ಕೂಡ ಈಗಿನ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಕ್ರಮದಲ್ಲಿ ಮಹತ್ತರವಾದ ಬದಲಾವಣೆಗಳು ಅವಶ್ಯವಾಗಿವೆ.

೭. ವಿದ್ಯಾಭ್ಯಾಸದ ಎಲ್ಲ ಅವಸ್ಥೆಗಳಲ್ಲಿಯೂ ಶಿಕ್ಷಣದ ಮಾಧ್ಯಮ ಆಯಾ ಪ್ರದೇಶದ ಪ್ರಮುಖ ಭಾಷೆ ಅಥವಾ ಭಾಷೆಗಳೇ ಆಗಿರತಕ್ಕದ್ದು. ಇಂಗ್ಲಿಷ ಮಾಧ್ಯಮಕ್ಕೂ ಒಂದು ಕಾಲವಿತ್ತು ಆದೀಗ ಪರಿಸಮಾಪ್ತವಾಗಬೇಕಾಗಿದೆ. ಶಿಕ್ಷಣ ಮಂತ್ರಿಗಳು ಒಡನೆ ಹಾಯಸ್ಕೂಲ ಅವಸ್ಥೆಯ ವರೆಗೆ ಇಂಗ್ಲಿಷ ಮಾಧ್ಯಮವನ್ನು ಕಿತ್ತುಹಾಕಬೇಕು. ಕಾಲೇಜ ಶಿಕ್ಷಣವನ್ನೂ ಪ್ರಾಂತಿಕ ಭಾಷೆ ಅಥವಾ ಭಾಷೆಗಳಲ್ಲಿಯೇ ಕೊಡುವ ವಿಷಯದಲ್ಲಿ ನಿರ್ದಿಷ್ಟ ಧೋರಣೆಯೊಂದನ್ನು ಸಾರಬೇಕು. ದೇಶಭಾಷೆಗಳಲ್ಲಿ ಯೋಗ್ಯ ಪಠ್ಯ ಪುಸ್ತಕಗಳನ್ನು ಸಿದ್ಧಗೊಳಿಸಿ ಪ್ರಕಟಿಸುವದಕ್ಕೆ ಕೂಡಲೆ ವ್ಯವಸ್ಥೆಗಳನ್ನು ಮಾಡಬೇಕು.

ಈ ಸಂಬಂಧದಲ್ಲಿ, ನಾಗಪುರ ವಿಶ್ವವಿದ್ಯಾನಿಲಯದವರು ನಾಗಪುರ ಮತ್ತು ವರ್ಧಗಳಲ್ಲಿರುವ ಸಕ್ಸೇರಿಯಾ ವಾಣಿಜ್ಯ ಕಾಲೇಜುಗಳಿಗೆ ಮುಂಬರುವ ಅಧಿವೇಶನದಿಂದಲೇ ಹಿಂದುಸ್ತಾನಿ ಮತ್ತು ಮರಾಠಿ ಮಾಧ್ಯಮಗಳಲ್ಲಿ ಪಾಠ ಹೇಳಲು ಅವಶ್ಯಕ ಅನುಜ್ಞೆಯನ್ನು ಕೊಟ್ಟಿರುವದು ಅಭಿನಂದನೀಯವಾಗಿದೆ.

೮. ಪ್ರಾಥಮಿಕ ಮತ್ತು ಮೂಲ ಶಿಕ್ಷಣಗಳನ್ನು ಸಾಧ್ಯವಿದ್ದ ಮಟ್ಟಿಗೆ ಪ್ರಾಂತಿಕ ಸರಕಾರಗಳೇ ನೇರವಾಗಿ ನಿಯಂತ್ರಿಸಬೇಕು. ಸರಕಾರಿ ಹಾಯಸ್ಕೂಲುಗಳನ್ನೂ ಕಾಲೇಜುಗಳನ್ನೂ ಖಾಸಗಿ ಸಂಸ್ಥೆಗಳಿಗೋ ವಿಶ್ವವಿದ್ಯಾಲಯಗಳಿಗೋ ಒಪ್ಪಿಸುವ ಪ್ರಯತ್ನ ಮಾಡಬೇಕು.

ಉಚ್ಚ ಶಿಕ್ಷಣದ ರಂಗದಲ್ಲಿ ಕೇವಲ ತಾಂತ್ರಿಕ ಮತ್ತು ಸಂಶೋಧನ ಸಂಸ್ಥೆಗಳನ್ನು ಮಾತ್ರ ಸರಕಾರ ತನ್ನ ಹೊಣೆಯಿಂದ ನಡೆಸಬೇಕು

೯. ಮಂತ್ರಿಮಂಡಲಗಳು ತಂತಮ್ಮ ಪ್ರಾಂತಗಳಲ್ಲಿರುವ ಪ್ರಾಕೃತಿಕ ಮತ್ತು ಖನಿಜ ಸಂಪತ್ತಿಯನ್ನು ಪ್ರಯೋಜನಕ್ಕೆ ತರಬೇಕು. ಸಾಧ್ಯವಿದ್ದಲ್ಲೆಲ್ಲ ಮೂಲಭೂತ ಉದ್ಯೋಗಗಳನ್ನು ಬೆಳೆಸಬೇಕು. ಆ ಉದ್ಯೋಗಗಳು ಸರಕಾರದ ಒಡೆತನಕ್ಕೇ ಸೇರಿರತಕ್ಕದ್ದು.

೧೦ ವಿಶೇಷವಾಗಿ ಹಳ್ಳಿಗಾಡಿನಲ್ಲಿ ಸಾರ್ವಜನಿಕ ಆರೋಗ್ಯವನ್ನು ಸುಧಾರಿಸುವ ಸಲುವಾಗಿ ದೇಶೀಯ ವೈದ್ಯ ಪದ್ಧತಿಗಳೂ ನಿಸರ್ಗ ಚಿಕಿತ್ಸೆಯ ಪದ್ಧತಿಯೂ ಜನಪ್ರಿಯವಾಗುವಂತೆ ಪ್ರೋತ್ಸಾಹಿಸಬೇಕು. ಸಾಧ್ಯವಾದಷ್ಟು ಮಟ್ಟಿಗೆ ಪ್ರತಿ ಹಳ್ಳಿಯಲ್ಲಿಯೂ ಮನೆ ಔಷಧಾಲಯಗಳನ್ನೂ ಹೆರಿಗೆಯ ಕೇಂದ್ರಗಳನ್ನೂ ತೆರೆಯಬೇಕು ಹಳ್ಳಿಗಾಡುಗಳಿಗಾಗಿ ಡಾಕ್ಟರುಗಳನ್ನೂ ಸೂಲಗಿತ್ತಿಯರನ್ನೂ ತರಬೇತುಗೊಳಿಸುವ ವಿಶೇಷ ವೈದ್ಯಕೀಯ ಪ್ರತಿಷ್ಠಾನಗಳನ್ನು ಪ್ರಾರಂಭಿಸಬೇಕು.

೧೧. ಸಾರ್ವಜನಿಕ ತೆರಿಗೆಯೆತ್ತುವಳಿಯ ಪದ್ಧತಿಯನ್ನು ಪುನರ್ವ್ಯವಸ್ಥಿತಗೊಳಿಸಿ ತೆರಿಗೆ ಹೆಚ್ಚು ಪ್ರತ್ಯಕ್ಷವೂ ನ್ಯಾಯವೂ ಆಗುವಂತೆ ಮಾಡಬೇಕು. ಅವಶ್ಯವಿದ್ದಾಗಲೆಲ್ಲ ಪ್ರಾಂತಿಕ ಸರಕಾರಗಳು ಸಾರ್ವಜನಿಕ ಸಾಲಗಳನ್ನು ಎತ್ತಬೇಕಾಗುವದು. ಆಯ ವ್ಯಯ ಪತ್ರಿಕೆಗಳಲ್ಲಿ ಆಯವ್ಯಯಗಳನ್ನು ಸರಿತೂಗಲೇಬೇಕೆಂಬ ಹವ್ಯಾಸಕ್ಕೆ ಅವು ಬೀಳಬಾರದು.

೧೨. ಕೂಲಿಗಾರ ಹಿತಕ್ಕಾಗಿ ವಿಶೇಷ ಲಕ್ಷ್ಯವೀಯಬೇಕು.

೧೩. ಉಭಯ ಲಿಪಿ ಶೈಲಿಗಳಲ್ಲಿ ಹಿಂದುಸ್ತಾನಿಯ ಪ್ರಚಾರಕ್ಕೆ ಉತ್ತೇಜನ ಕೊಡಲು ಮಂತ್ರಿಗಳು ಬದ್ಧರಾಗಿದ್ದಾರೆ.

೧೪. ಈಗಿನ ನ್ಯಾಯದಾನ ಪದ್ಧತಿ ಅನವಶ್ಯಕ ವ್ಯಾಜ-ವ್ಯವಹಾರಗಳಿಗೆ ಉತ್ತೇಜನ ಕೊಡುತ್ತಿದೆ. ಅದನ್ನು ವಿಕೇಂದ್ರೀಕರಿಸಿ ನ್ಯಾಯದಾನ ಹೆಚ್ಚು ಅಗ್ಗವೂ ನ್ಯಾಯಪರವೂ ಕ್ಷಿಪ್ರವೂ ಆಗುವಂತೆ ಮಾಡಬೇಕು. ಸ್ಥಾನಿಕ ಪಂಚಾಯತಿಗಳ ಮೂಲಕ ವಿವಾದಗಳನ್ನು ಮಧ್ಯಸ್ಥಿಕೆಯಿಂದ ಬಗೆಹರಿಸುವದೇ ಸಾಮಾನ್ಯ ಪದ್ಧತಿಯಾಗಬೇಕು.

೧೫. ಬ್ರಿಟಿಶ ಸೆರೆಮನೆಗಳು ರಾಕ್ಷಸೀ ಸಂಸ್ಥೆಗಳೇ ನಿಜ. ಅವು ಪಾತಕಗಳ ಉಗಮಸ್ಥಾನವಾಗಿವೆ. ಈಗಿರುವ ಸೆರೆಮನೆಗಳು ನಿಜವಾಗಿ ಸ್ವಭಾವ ಸುಧಾರಣೆಯ ಸಂಸ್ಥೆಗಳಾಗಬೇಕು.

ಮೇಲಿನ ಯಾದಿ ಪರಿಪೂರ್ಣವಾದುದಲ್ಲ. ತತ್ತದ್ದೇಶೀಯ ಸ್ಥಿತಿ ಅವಶ್ಯಕತೆಗಳನ್ನನುಸರಿಸಿ ಅವುಗಳನ್ನು ಹೆಚ್ಚಿಸಿಕೊಳ್ಳಬೇಕು. ಇದೇ ಬರಲಿರುವ ಆಹಾರ ಬರಗಾಲ, ಮಂತ್ರಿಗಳ ಮೊದಲ ಚಿಂತ್ಯ ವಿಷಯವಾಗಬೇಕೆಂದು ಹೇಳುವದೇ ಅವಶ್ಯವಿಲ್ಲ. ಆದರೆ ಹಿಂದುಸ್ತಾನದ ಬಡತನ ಅಧೋಗತಿಗಳ ಮೂಲಭೂತ ಸಮಸ್ಯೆಯನ್ನು ತುಡುಕಿದ ಹೊರತು ಶಾಶ್ವತ ಸುಪರಿಣಾಮಗಳನ್ನು ನಿರೀಕ್ಷಿಸುವದು ವ್ಯರ್ಥ. ಆದುದರಿಂದಲೇ ರಾಷ್ಟ್ರೀಯ ಜೀವನದ ವಿವಿಧ ಅಂಗಗಳಲ್ಲಿಯೂ ತೀವ್ರ ರಚನಾತ್ಮಕ ಕಾರ್ಯವನ್ನು ತುರುಸಿನಿಂದ ಸಾಗಿಸುವದು ಇನ್ನಷ್ಟು ಅವಶ್ಯವಾಗಿದೆ.

ವರ್ಧಾ, ಮೇ ೬, ೧೯೪೬ ಶ್ರೀಮನ್ನಾರಾಯಣ ಅಗ್ರವಾಲ

ಬೆಂಗಳೂರಲ್ಲಿ ಸಹಗಲರು

ಅಝಾದ ಹಿಂದ ಸೈನ್ಯದ ಪ್ರಸಿದ್ಧ ಅಧಿಕಾರಿಗಳಾದ ಕ್ಯಾ ಸಹಗಲರು ಬೆಂಗಳೂರಿಗೆ ತಾ ೧೫ ಕ್ಕೆ ಆಗಮಿಸಿದ್ದರು. ಕಾಂಗ್ರೆಸ ಭುವನದಲ್ಲಿ ಕೂಡಿದ್ದ ಪ್ರಚಂಡ ಜನಸಮೂಹಕ್ಕೆ ಭಾಷಣ ಮಾಡುತ್ತ ಅವರು ಅಝಾದ ಸೈನಿಕರ ಪರಿಹಾರ ನಿಧಿಗೆ ಜನರು ಯಥಾಶಕ್ತಿ ಸಹಾಯ ನೀಡಬೇಕೆಂದು ಮನಮುಟ್ಟುವಂತೆ ವಿನಂತಿ ಮಾಡಿದರು.

ದಾಸ ಜನಾಂಗವೊಂದರ ಸ್ವಾತಂತ್ರ್ಯ ಪಿಪಾಸೆಯೇ ಅಝಾದ ಸೇನೆಯ ನಿರ್ಮಾಣಕ್ಕೆ ಕಾರಣವಾಯಿತೆಂದು ಸಹಗಲರು ಅಭಿಪ್ರಾಯಪಟ್ಟರು. ಅಝಾದ ಹಿಂದ ಸೇನೆಯಲ್ಲಿದ್ದ ಸಂಪೂರ್ಣ ಒಗ್ಗಟ್ಟನ್ನು ಕುರಿತು ಅವರು "ನಮ್ಮೆಲ್ಲರಲ್ಲಿ ಕೃತಿಯಲ್ಲಿ ಮಾತ್ರವಲ್ಲ ವಿಚಾರದಲ್ಲಿಯೂ ಐಕ್ಯವಿತ್ತು." ಎಂದರು. ಅಝಾದ ಸೈನ್ಯದಿಂದುಂಟಾದ ಜನಜಾಗ್ರತಿಯೇ ಬ್ರಿಟಿಶರು ಹಿಂದೀ ಜನತೆಯೊಡನೆ ಮಾತುಕತೆ ನಡೆಸುವಂತೆ ಮಾಡಿತೆಂದು ಅವರ ಅಭಿಪ್ರಾಯವಾಗಿತ್ತು.

ಸಹಗಲರು ಈಗ ಬೆಂಗಳೂರಲ್ಲಿರುವ ಆ. ಹಿಂ. ಸೈನ್ಯದ ಮೇಜರ್ ಜನರಲ್ ಲೋಕನಾಥನ್ನರೊಡನೆ ಮಾತುಕತೆ ನಡೆಸಿದರಲ್ಲದೆ ಆ ಹಿಂ. ಸೇನೆಯ ಮರಳಿದ ಸೈನಿಕರೊಡನೆ ಅವರ ಪುನರ್ನೆಲಸಿಕೆಯನ್ನು ಕುರಿತು ಚರ್ಚಿಸಿದರು.

ನಿಮ್ಮ ಕಣ್ಣಿನ ಆರೋಗ್ಯ

ಸಾಧಾರಣವಾಗಿ ಪ್ರತಿಯೊಂದು ಮಗುವೂ ಹುಟ್ಟುವಾಗ ಅದರ ಕಣ್ಣು ಸರಿಯಾಗಿಯೆ ಇರುತ್ತದೆ. ಆದರೆ ಮೊನ್ನೆ ಯುದ್ಧದಲ್ಲಿ ಭರತಿ ಮಾಡಿಕೊಳ್ಳಲು ಜನರನ್ನು ಪರೀಕ್ಷಿಸಿದಾಗ ಲಕ್ಷಾಂತರ ಜನರು ಕಣ್ಣಿನ ಅಸಮರ್ಥತೆಯಿಂದ ಬಳಲುತ್ತಿರುವದು ಕಂಡು ಬಂತು. ಇವುಗಳಲ್ಲಿ ಹೆಚ್ಚಿನ ತೊಡಕುಗಳನ್ನು ಮುಂಜಾಗ್ರತೆಯಿಂದ ಬರಗೊಡದಿರಬಹುದಾಗಿತ್ತು. ಅದುದರಿಂದ ಈ ಕೆಳಗಿನ ಪ್ರಶ್ನೋತ್ತರಗಳಿಂದ ನಿಮ್ಮ ಕಣ್ಣಿನ ವಿಷಯದಲ್ಲಿ ಅರಿವು ದೊರಕಿಸಿಕೊಳ್ಳಿರಿ.

೧ ಸಾಕಷ್ಟು ಬೆಳಕಿಲ್ಲದೆ ಓದುವದಕ್ಕಿಂತ ಕೆಟ್ಟ ಅಭ್ಯಾಸ ಬೇರೊಂದಿಲ್ಲ.

ಸುಳ್ಳು. ಕಣ್ಣು ಕೋರೈಸುವ ಪ್ರಕಾಶದಿಂದ ಕಣ್ಣಿಗಾಗುವ ಶ್ರಮ ಬೆಳಕು ಕಡಮೆ ಇದ್ದಲ್ಲಿ ಓದುವದರಿಂದಾಗುವದಕ್ಕಿಂತಲೂ ಹೆಚ್ಚು. ಹೊಳೆಯುವ ಗೋಡೆಗಳು, ಹೊಳಪಿನ ಕಾಗದ ಅಥವಾ ಬೆಳಕು ನೇರವಾಗಿ ಕಣ್ಣಿನೊಳಗೆ ನುಗ್ಗುವುದರಿಂದ ಕಣ್ಣು ಕೋರೈಸುತ್ತದೆ.

೨. ೨೦।೨೦ ರ ದೃಕ್ಶಕ್ತಿ ನಿಮಗಿದ್ದರೆ ನಿಮ್ಮ ಕಣ್ಣುಗಳು ನಿರ್ದೋಷವಾಗಿವೆಯೆಂದರ್ಥ.

ಸುಳ್ಳು. ದೃಷ್ಟಿ ಪಂಡಿತರು ೨೦ ಅಡಿದೂರದಿಂದ ಯಾವುದು ನಿಮಗೆ ಕಾಣಿಸಬೇಕೆಂದು ಹೇಳುತ್ತಾರೋ ಅದು ನಿಮಗೆ ಅಷ್ಟು ದೂರದಿಂದ ಕಾಣಿಸಿದರೆ ನಿಮಗೆ ೨೦/೨೦ರ ದೃಶ್ಯಶಕ್ತಿಯಿದೆಯೆಂದಾಗುತ್ತದೆ ಆದರೂ ನಿಮ್ಮಲ್ಲಿಯ ದೂರದೃಷ್ಟಿಯ (Long Sight) ದೋಷವಿರಬಹುದು. ಮತ್ತು ೨೦ ಅಡಿ ದೂರದಿಂದ ನೀವು ವಸ್ತುವನ್ನು ಸರಿಯಾಗಿಯೇ ಕಂಡರೂ ಅದಕ್ಕಾಗಿ ನಿಮ್ಮ ಕಣ್ಣಿನ ಮಾಂಸಖಂಡಗಳು ನಿಮ್ಮ ಕಣ್ಣಿನ ಭೂತಕನ್ನಡಿಯನ್ನು ಹುದುಗಿಸಿರಬಹುದು. ಹೀಗೆ ಮಾಡುವಲ್ಲಿ ಕಣ್ಣಿಗೆ ಆಯಾಸವಾಗುವದು.

೩. ಚಿಕ್ಕ ಮಕ್ಕಳಲ್ಲಿರುವ ಓರೆಕಣ್ಣು (Cross Eyes) ಕಾಲಾಂತರದಲ್ಲಿ ನೆಟ್ಟಗಾಗಿ ಸರಿಯಾಗುವದು.

ಸುಳ್ಳು. ಇದೊಂದು ಆತ್ಮವಂಚನೆ. ಇದರಿಂದ ಹೆತ್ತವರು ಓರೆ ಕಣ್ಣನ್ನು ದುರ್ಲಕ್ಷಿಸುವಂತಾಗುತ್ತದೆ. ಓರೆ ಕಣ್ಣನ್ನು ಒಡನೆ ಚಿಕಿತ್ಸೆ ಮಾಡಿಸಬೇಕು. ಶಸ್ತ್ರಕ್ರಿಯೆ, ಯೋಗ್ಯ ಕನ್ನಡಕ ಹಾಕುವದು ಮತ್ತು ದುರ್ಬಲ ಕಣ್ಣಿನ ಮಾಂಸ ಖಂಡಗಳಿಗೆ ತರಬೇತಿ ಕೊಡುವದು ಚಿಕಿತ್ಸೆಯಲ್ಲಿ ಸೇರಬಹುದು.

೪. ದೃಷ್ಟಿ ಶಾಸ್ತ್ರಜ್ಞನು ನಿಮ್ಮ ಕಣ್ಣುಗಳನ್ನು ಪರೀಕ್ಷಿಸಿ ನಿಮ್ಮ ಹಲ್ಲುಗಳಲ್ಲಿರುವ ಸಂಭಾವ್ಯ ರೋಗಗಳನ್ನು ಕಂಡುಹಿಡಿಯಬಲ್ಲನು.

ನಿಜ. ಎಷ್ಟೋ ವೇಳೆ ಹಲ್ಲಿನಲ್ಲಿರುವ ತೊಂದರೆಯ ಪರಿಣಾಮವಾಗಿಯೆ ಕಣ್ಣುಗಳಿಗೆ ಉಪದ್ರವವಾಗುವದುಂಟು. ಹಲ್ಲುಗಳು ತೀರ ರೋಗಗ್ರಸ್ತವಾಗಿದ್ದರೆ ಅದರಿಂದ ಕಣ್ಣು ಕುರುಡಾಗುವದು ಕೂಡ ಸಾಧ್ಯವಿದೆ.

೫. ನಿಮ್ಮ ಕಣ್ಣುಗಳಲ್ಲಿ ಯಾವ ಶಾಶ್ವತ ದೋಷವಿರದಿದ್ದರೂ ತಾತ್ಕಾಲಿಕ ಕಣ್ಣು ನೋವುಂಟಾಗುವದು ಸಾಧ್ಯವಿದೆ.

ನಿಜ. ನಿಮಗೆ ನೋಡಲು ಕಷ್ಟವಾಗಬಹುದು. ನಿಮ್ಮ ಕಣ್ಣುಗಳು ಬಹಳ ಬೇಗನೆ ಆಯಾಸಗೊಳ್ಳಬಹುದು. ಇದಕ್ಕೆಲ್ಲ ನಿಮ್ಮ ದೇಹದಲ್ಲಿರುವ ಸಾಧಾರಣ ಅನಾರೋಗ್ಯ, ಆಯಾಸ ಅಥವಾ ನರದೌರ್ಬಲ್ಯವೇ ಕಾರಣವಾಗಿರಬಹುದು. ಪೌಷ್ಟಿಕ ಆಹಾರದ ಅಭಾವ ಕಣ್ಣಿನ ಉಪದ್ರವಕ್ಕೆ ಕಾರಣವಾಗಬಲ್ಲದು.

೬. ನಿಮ್ಮ ದೇಹದ ಸತ್ವದಲ್ಲಿ ಕಾಲು ಅಂಶ ನೋಡುವದರಲ್ಲಿ ವೆಚ್ಚವಾಗುತ್ತದೆ.

ನಿಜ. ಮೇಯೋ ಕ್ಲಿನಿಕ್ಕಿನ ಡಾ. ಶರ್ಡರ ಹೇಳಿಕೆ ಹಾಗಿದೆ. ನಿಮ್ಮ ಕಣ್ಣಿನ ಅನಾರೋಗ್ಯದಿಂದ ದೇಹದ ಸಾಮಾನ್ಯ ಆರೋಗ್ಯದ ಮೇಲೆ ಹೇಗೆ ದುಷ್ಪರಿಣಾಮವಾಗಬಹುದೆಂದು ಇದು ತೋರಿಸುತ್ತದೆ.

— ರೀಡರ್ಸ ಡಾಯಜೆಸ್ಟ

ಆಂತರ್ ರಾಷ್ಟ್ರೀಯ

ಇನ್ನೊಬ್ಬ ಅರಸನ ಸಿಂಹಾಸನತ್ಯಾಗ

ಇಟಲಿಯ ಅರಸ ವಿಕ್ಟರ್ ಇಮಾನ್ಯುಯೆಲ್ಲನು ಕಳೆದ ಶುಕ್ರವಾರ [ತಾ ೧೦] ಮಧ್ಯಾಹ್ನ ಸಮಯದಲ್ಲಿ ಸಿಂಹಾಸನ ತ್ಯಾಗದ ಕಾಗದಕ್ಕೆ ಅಂಕಿತವನ್ನಿರಿಸಿ ತನ್ನ ರಾಣಿಯೊಡನೆ "ಡ್ಯೂಡೆಗ್ಲಿ ಅಬ್ರುಝಿ" ಹಡಗಿನಲ್ಲಿ ದೇಶತ್ಯಾಗ ಮಾಡಿ ಹೊರಟು ಹೋದನು. ಮುಸೋಲಿನಿಯ ಅಧಿಕಾರಗ್ರಹಣ ಮತ್ತು ಯುದ್ಧದಲ್ಲಿ ಪರ್ಯವಸಾನ ಹೊಂದಿದ ಇಟಾಲಿಯನ್ ಧೋರಣೆಗಳಲ್ಲಿ ವಿಕ್ಟರನ ಕೈವಾಡಗಳಿದ್ದುದರಿಂದ ಅವನು ರಾಜ್ಯತ್ಯಾಗ ಮಾಡಬೇಕೆಂಬ ಹುಯಿಲು ಇಟಲಿಯ ಶರಣಾಗತಿಯಿಂದಾರಂಭಿಸಿಯೇ ಇತ್ತು. ಅಂದಿನಿಂದ ಈ ವರೆಗೂ ಅವನು ನಾಮಪತ್ರ ದೊರೆಯಾಗಿದ್ದು ಅವನ ಮಗ ರಾಜಕುಮಾರ ಅಂಬರ್ಟೋನೇ ರಾಜ್ಯದ ತಲೆಯಾಳಾಗಿ ವರ್ತಿಸುತ್ತಿದ್ದ. ಅವನೀಗ ರಾಜ್ಯತ್ಯಾಗ ಮಾಡಿರುವದರಿಂದ ಅಂಬರ್ಟೋನೇ ರಾಜಪದಕ್ಕೆ ಬಂದಿದ್ದಾನೆ.

ಇಮಾನ್ಯುಯೆಲ್ಲನು ಗೆಲ್ಲುವ ಉದ್ದೇಶದಿಂದಲೇ ಸೋತಿದ್ದಾನೆ. ಇಟಲಿಯಲ್ಲಿ ರಾಜಸತ್ತೆ ಬೇಕೋ ಬೇಡವೊ ಎಂಬುದನ್ನು ಜನಾಭಿಪ್ರಾಯ ಸಂಗ್ರಹದಿಂದಲೇ ನಿರ್ಣಯಿಸಬೇಕೆಂಬುದಕ್ಕೆ ಅವನು ಒಪ್ಪಿದನು. ಅವನ ಕೃತಿಗಳ ಕಲಂಕ ಪ್ರಜೆಗಳನ್ನು ನಿಶ್ಚಯವಾಗಿ ರಾಜಸತ್ತೆಯಿಂದ ಪರಾಙ್ಮುಖರಾಗಿ ಮಾಡುತ್ತಿದ್ದಿತು. ರಾಜಸತ್ತೆಯ ಸಂಸ್ಥೆಯನ್ನಾದರೂ ಉಳಿಸಿಕೊಳ್ಳೋಣವೆಂದು "ಅರ್ಧಂ ತ್ಯಜತಿ ಪಂಡಿತಃ" ನೀತಿಯನ್ನನುಸರಿಸಿ ತಾನು ಕಣ್ಣೆದುರಿನಿಂದ ಸರಿದು ಹೋದರೆ ತನ್ನ ಮಗನಾದರೂ ಆಳುವ ಆಸೆಯುಂಟೆಂದು ಅವನೀ ದಾರಿ ಹಿಡಿದಿದ್ದಾನೆ. ಆದರೆ ಇಟಲಿಯ ಮುಖ್ಯ ಮಂತ್ರಿ ಗಾಸ್ಪೇರಿ, ರಾಜಸತ್ತೆಯ ಪ್ರಶ್ನೆ ಜನಾಭಿಪ್ರಾಯದಿಂದಲೇ ನಿರ್ಣಯಿಸಲ್ಪಡಬೇಕೆಂಬ ವಾಗ್ದಾನ ಹಾಗೆಯೆ ಇದೆಯೆಂದು ನನಪಿಗೆ ತಂದುಕೊಟ್ಟಿದ್ದಾನೆ. ಸಾಮ್ಯವಾದಿಗಳು ಹೊಸ ದೊರೆಯ ಹಳೆಯ ಫ್ಯಾಸಿಸ್ಟ ಕೃತಿಗಳನ್ನು ಕೆದರಿ ಜನರನ್ನು ಅವನಿಗೆ ಪ್ರತಿಕೂಲರಾಗಿ ಮಾಡಲು ಈಗಾಗಲೇ ಆರಂಭಿಸಿದ್ದಾರೆ. ಅಂಬರ್ಟೋನ ಮತ್ತು ರಾಜಸತ್ತೆಯಲ್ಲೆ ತಮ್ಮ ಕೊನೆಯ ಆಶೆಯನ್ನು ಇರಿಸಿರುವ ಪ್ರತಿಗಾಮಿಗಳ ದೈವ ಹೇಗೆ ವರ್ತಿಸುವದೋ ನೋಡಬೇಕು.

ಇಮಾನ್ಯುಯೆಲ್ ಅರಸ ಈಗ ಇಜಿಪ್ತಿಗೆ ಹೋಗಿದ್ದಾನೆ. ಅಲ್ಲೇ ಅವನು ನಿರ್ವಾಸಿತನಾಗಿ ಉಳಿಯುಬಹುದು.

ಗ್ರೀಕ್ ಅರಸನ ಭವಿತವ್ಯ

ಇನ್ನೊಬ್ಬ ಯುದ್ಧ ಕಾಲದ ಅರಸ—ಗ್ರೀಸಿನ ಜಾರ್ಜ—ನ ಭವಿತವ್ಯವನ್ನೂ ಪ್ರಜಾಭಿಪ್ರಾಯ ಸಂಗ್ರಹದಿಂದಲೇ ನಿರ್ಣಯಿಸಬೇಕಾಗಿದೆ. ಗ್ರೀಸಿನಲ್ಲಿ ಬ್ರಿಟಿಶರ ಕೈಕೊಂಡ ತಂತ್ರಗಳ ಫಲವಾಗಿ ಈಗ ಅಲ್ಲಿ ಮೊನ್ನಿನ ಚುನಾವಣೆಯಲ್ಲಿ ಅರಸು ಪಕ್ಷದವರೇ ಅಧಿಕಾರಕ್ಕೆ ಬಂದಿರುವದರಿಂದ ಗ್ರೀಕ್ ಅರಸನ ಹಣೆಬರೆಹ ಇಮಾನ್ಯುಯೆಲ್ಲನದಕಿಂತ ಸ್ವಲ್ಪ ಆಶಾದಾಯಕವಾಗಿದೆಯೆಂದು ಹೇಳಬಹುದು. ಹೊಸದಾಗಿ ಅಧಿಕಾರಕ್ಕೆ ಬಂದ ಪಾಪ್ಯುಲಿಸ್ಟರು ಅರಸೊತ್ತಿಗೆಯ ಪ್ರಶ್ನೆಯನ್ನು ಅಷ್ಟು ಬೇಗ ತೀರ್ಮಾನಿಸಿದರೆ ಪರಿಣಾಮ ತಮಗೆ ಅನುಕೂಲವಾಗಬಹುದೆಂದು ಊಹಿಸಿ ಸಪ್ಟೆಂಬರ ೧ ಕ್ಕೆ ಜನಾಭಿಪ್ರಾಯ ಗಣನೆಯ ದಿನವೆಂದು ನಿರ್ಧರಿಸಿರುವರು. ಈ ನಡುವೆ ಗ್ರೀಸಿನಲ್ಲಿ ಫ್ಯಾಸಿಸ್ಟ ಸ್ವರೂಪದ ಸತ್ತೆಯೊಂದು ಬಹಳ ವೇಗವಾಗಿ ಬೆಳೆಯುತ್ತಿದೆಯೆಂದು ಬ್ರಿಟಿಶ ಪಾರ್ಲಿಮೆಂಟಿನ ಮೂವರು ಸಭಾಸದರೇ ೧೫ ದಿನ ಗ್ರೀಸಿನಲ್ಲಿ ಪರ್ಯಟನ ಮಾಡಿ ಅಭಿಪ್ರಾಯಪಟ್ಟಿದ್ದಾರೆ. ಅತಿ ಪ್ರತಿಗಾಮಿಗಳು ಎಲ್ಲ ಬಗೆಯ ಪ್ರಜಾತಂತ್ರಾಭಿಲಾಷಿ ಸತ್ವಗಳನ್ನು ನಿರ್ನಾಮ ಮಾಡುವ ಎತ್ತುಗಡೆ ನಡೆಸಿದ್ದಾರೆಂದು ಅವರು ಹೇಳಿರುವರು. ಈ ಸ್ಥಿತಿಯಲ್ಲಿ ಅರಸೊತ್ತಿಗೆಯ ನಿರ್ಣಯದ ಮತಸಂಗ್ರಹವಾದರೆ ಗ್ರೀಸಿನಲ್ಲಿ ಯಾದವೀ ಯುದ್ಧ ಅನಿವಾರ್ಯವೆಂದು ಎಚ್ಚರಿಕೆ ಕೊಡಲಾಗಿದೆ. ಜಾರ್ಜ ಅರಸನ ಕಾಲದಲ್ಲಿ ಗ್ರೀಕ್ ಜನತೆಯ ಮೇಲಾದ ಅತ್ಯಂತ ಕರಾಳ ದಬ್ಬಾಳಿಕೆಗೆ ಜರ್ಮನ ಫ್ಯಾಸಿಸ್ಟ ದಬ್ಬಾಳಿಕೆಯೊಂದೆ ಸರಿತೂಗಬಲ್ಲದಾಗಿತ್ತು. ಅಂಥವನನ್ನು ಮರಳಿ ತರಿಸುವ ಪ್ರಯತ್ನಕ್ಕೆ ಪ್ರಚಂಡ ವಿರೋಧ ಕಟ್ಟಿಟ್ಟಿದ್ದು.

ವಿದೇಶಮಂತ್ರಿಗಳ ಅನುಕೂಲಸಿಂಧು

ಇಟಲಿಯಗೂಡ ಮಾಡಿಕೊಳ್ಳಬೇಕಾದ ಶಾಂತಿಯ ಸಂಬಂಧದಲ್ಲಿ ಯಾವುದೊಂದು ಮುದ್ದೆಯ ಬಗೆಗೂ ಒಮ್ಮತಕ್ಕೆ ಬರಲಾರದ ವಿದೇಶಮಂತ್ರಿಗಳು ಕಳೆದ ವಾರಾಂತ್ಯದಲ್ಲಿ ಸಭೆ ಮುರಿದು ಹೊರಟು ಹೋಗುವರೆಂದು ನಂಬಲಾಗಿತ್ತು. ಆದರೆ ಕಳೆದ ವಾರಾಂತ್ಯದಲ್ಲಿ ತಮ್ಮ ಸಹಯೋಗಿಗಳೊಡನೆ ವಿಚಾರ ವಿನಿಮಯಕ್ಕಾಗಿ ಇಂಗ್ಲಂಡಿಗೆ ಬಂದಿದ್ದ ಬ್ರಿಟಿಶ ವಿದೇಶ ಮಂತ್ರಿ ಬೆವಿನ್ನರು ಮರಳಿ ಪ್ಯಾರೀಸಿಗೆ ಹೋಗಿ ಚರ್ಚೆ ಮುಂದೆ ಸಾಗಿಸಿರುವರು. ಯಾವ ಪ್ರಶ್ನೆಯ ಮೇಲೂ ಒಮ್ಮತವಾಗದೆ ಹೋದರೆ ಕೂಡ ವಿಷಯ ನಿಯಾಮಕ ಪತ್ರಿಕೆಯಲ್ಲಿದ್ದ ಎಲ್ಲ ಅಂಶಗಳನ್ನೂ ಚರ್ಚಿಸಿ ಮುಗಿಸುವವರೆಗೆ ಅವರು ಸಭೆ ಸಾಗಿಸುವ ನಿರ್ಣಯಕ್ಕೆ ಬಂದಂತಿದೆ.

ವಿಚಿತ್ರ ಸಂಗತಿಗಳು ಅಂದಿನಿಂದೀಚೆಗೆ ಹೊರಬೀಳತೊಡಗಿವೆ. ಲೀಬಿಯಾದಪ್ರಶ್ನೆಯಲ್ಲಿ ಒಂದು ಬಗೆಯ ಒಡಂಡಿಕೆಗೆ ಬರಲಾಗಿದೆಯೆಂದು ತಿಳಿಯುತ್ತದೆ. ಟ್ರಿಪೋಲಿಯ ಮೇಲಿನ ವಿಶ್ವಸ್ತಿಕೆಯ ಅಧಿಕಾರವನ್ನು ರಶಿಯಾಕ್ಕಾಗಿ ಬೇಡಿದ್ದರು ಮಲಟೋವರು. ಲೀಬಿಯಾಕ್ಕೆ "ಸ್ವಾತಂತ್ರ್ಯ" ಕೊಡಲು ತಾವು ಬದ್ಧರಾಗಿರುವದಾಗಿ ಬೆವಿನ್ನರು ವಾದಿಸಿದ್ದರು. ಆದರೆ "ಬ್ರಿಟಿಶ ಛಾಪಿನ" ಸ್ವಾತಂತ್ರ್ಯ ಲೀಬಿಯಾಕ್ಕೆ ಕೊಡಲು ಮೊಲಟೋವರ ವಿರೋಧವಿತ್ತು! ಹೀಗೆ ಅವರಿಬ್ಬರಲ್ಲಿದ್ದ ಮತಭೇದ ಈಗ ಅಳಿದು ಹೋಗಿ, ಟ್ರೀಸ್ಟ ಬಂದರವನ್ನು ಯುಗೊಸ್ಲಾವಿಯಾಕ್ಕೆ ಇಟಲಿಯಿಂದ ಕೊಡಿಸಲು ಆತುರರಾಗಿರುವ ಮಲಟೋವರು ಇಟಲಿಯ ಪ್ರೀತಿ ಸಂಪಾದನೆಯನ್ನು ಇಚ್ಛಿಸಿ ಟ್ರಿಪೋಲಿಯ ವಿಶ್ವಸ್ತಿಕೆಯನ್ನು ಇಟಲಿಗೇ ಕೊಡಬೇಕೆಂದರು ಲೀಬಿಯಾಕ್ಕೆ (ಟ್ರಿಪೋಲಿ, ಸಿರೆನಿಕಾ ಪ್ರಾಂತಗಳು ಸೇರಿ) ಸ್ವಾತಂತ್ರ್ಯ ಕೊಡಲು ನಾಲ್ಕೇ ದಿನ ಮೊದಲು ಕಟ್ಟಾತುರರಾಗಿದ್ದ ಬ್ರಿಟಿಶ ವಿದೇಶ ಮಂತ್ರಿ ಬೆವಿನ್ನರು ಇದಕ್ಕೆ ಒಪ್ಪಿದರು— ಸಿರೆನಿಕಾದ ಮೇಲಿನ ವಿಶ್ವಸ್ತಿಕೆ ಬ್ರಿಟನಿಗೆ ಇಟ್ಟುಕೊಂಡರು ಮತ್ತು ಟ್ರಿಪೋಲಿಯ ವಿಶ್ವಸ್ತಿಕೆ ಇಟಲಿಗೆ ಕೊಟ್ಟರು. ಹೀಗೆ ಲೀಬಿಯಾದ ಸ್ವಾತಂತ್ರ್ಯಕ್ಕೆ ವಾಗ್ಬದ್ಧರಾಗಿದ್ದ ಬೆವಿನ್ನರೂ "ದೀನ ದಲಿತ ವಸಾಹತು ಪ್ರಜೆಗಳ" ಹೆಸರಲ್ಲಿ ಕೂಗಿಕೊಳ್ಳುತಿರುವ ಮಾಲಟೋವರೂ ಸ್ವಾತಂತ್ರ್ಯದ ಪರಮಭಕ್ತ ಬಾಯರ್ನ್ಸರೂ ಸೇರಿ ಲೀಬಿಯಾದ ಒಂದು ಭಾಗವನ್ನು ವಸಾಹತು ಪ್ರಜೆಗಳ ಮೇಲೆ ಅತ್ಯಂತ ಅಮಾನುಷ ಅತ್ಯಾಚಾರ ಮಾಡಿ ಪ್ರಸಿದ್ಧವಾಗಿರುವ ಇಟಲಿಗೆ ಕೊಡಿಸಿದರು! ಟ್ರಿಪೋಲಿಯ ಅರಬ ಪ್ರಜೆಗಳು ಜೀವಹೋದರೂ ಇಟಾಲಿಯನ್ನರನ್ನು ಪುನಃ ಬರಗೊಡಿಸಲಿಕ್ಕಿಲ್ಲವೆಂದು ಪಣ ತೊಟ್ಟಿರುವದಾಗಿ ಸಾರಿದ್ದಾರೆ.

ಇಜಿಪ್ತದಿಂದ ಹೊರಡುವದು

ಬ್ರಿಟಿಶ ಪಡೆಗಳನ್ನು ಇಜಿಪ್ತದಿಂದ ಹಿಂತೆಗೆದುಕೊಳ್ಳುವ ವಿಷಯದಲ್ಲಿ ಪ್ರಧಾನ ಮಂತ್ರಿ ಅಟ್ಲಿಯವರಿಗೆ ವಿರೋಧಿ ಪಕ್ಷದ ವಿರೋಧವೆದುರಾದುದರಲ್ಲಿ ಆಶ್ಚರ್ಯವಿಲ್ಲ. ಆದರೆ ಅಟ್ಲಿಯವರು ಅದಕ್ಕೆ ಸೊಪ್ಪು ಹಾಕದೆ ಇಜಿಪ್ಶನ್ ಸರಕಾರದೊಡನೆ ಈಗಾಗಲೆ ಈ ಸಂಬಂಧದಲ್ಲಿ ಮಾತುಕತೆ ನಡೆಸಿದ್ದು ಅದು ನಿರ್ಣಾಯಕ ಮಟ್ಟಕ್ಕೆ ಮುಟ್ಟಿದೆಯೆಂದು ತಿಳಿದುಬಂದಿದೆ. ಆದರೆ ಆಸ್ಟ್ರೇಲಿಯಾ ಮೊದಲಾದ ಬ್ರಿಟಿಶ ಸಾಮ್ರಾಜ್ಯದ ತುಣುಕುಗಳಿಗೆ ಇಜಿಪ್ತದಿಂದ ಸೈನ್ಯ ಹಿಂತೆಗೆದುಕೊಳ್ಳುವದು ಸಮ್ಮತಿಯಿಲ್ಲವೆಂದು ತೋರುತ್ತದೆ. ಇದರಲ್ಲಿ ಸಾಮ್ರಾಜ್ಯ ದೇಶಗಳ ಸಮ್ಮತಿ ತೆಗೆದುಕೊಳ್ಳಲಾಗಿದೆಯೆಂದು ಪಾರ್ಲಮೆಂಟಿನಲ್ಲಿ ಹೇಳಿದ ಅಟ್ಲಿಯವರು ಮುಂದೆ ಅದನ್ನು ಹಿಂತೆಗೆದುಕೊಂಡರು. ಇಜಿಪ್ತನ್ನು ರಕ್ಷಿಸಲು ತಾವು ಸಹಾಯ ಮಾಡಿರುವವರಿಂದ ಆದರಿಂದ ಸೈನ್ಯ ಹಿಂತೆಗೆದುಕೊಳ್ಳಲು ತಮ್ಮ ಸಮ್ಮತಿ ಬೇಕಿತ್ತೆಂದೂ ಆಸ್ಟ್ರೇಲಿಯನ್ ಸೇನಾಧಿಕಾರಿಯೊಬ್ಬ ಹೇಳಿದ್ದಾನಂತೆ. ಅಂತೂ ಬಿಳಿಯರ ಸ್ವಾತಂತ್ರ್ಯವೇ ಸ್ವಾತಂತ್ರ್ಯವೆಂದು ಇವರ ಭಾವನೆ

ಅರಬರ ಉಗ್ರಾವತಾರ

ಪಾಲಿಸ್ತಾನವನ್ನು ಕುರಿತು ಆಂಗ್ಲೋ-ಅಮೇರಿಕನ್ ಸಮಿತಿ ಹೊರಡಿಸಿದ ವರದಿಯಿಂದ ಅರಬರು ಉಗ್ರಾವತಾರ ತಾಳಿದ್ದಾರೆ. ಅರಬ ರಾಷ್ಟ್ರಗಳ ಅರಸರೆಲ್ಲರೂ ಇದರ ವಿರುದ್ಧ ಪ್ರತಿಭಟಿಸಿದ್ದಾರೆ. ಅರಬ ಲೀಗ್ ಸೋವಿಯೆಟ್ ಸರಕಾರಕ್ಕೆ ಈ ವಿಷಯದಲ್ಲಿ ದೂರಿಟ್ಟಿದೆ. ಪಾಲಿಸ್ತಾನದ ಪ್ರಶ್ನೆಯನ್ನು ಭದ್ರತಾ ಮಂಡಲದ ಮುಂದೆ ತಂದರೆ ತಾವು ಖಂಡಿತವಾಗಿ ಅರಬರ ಪಕ್ಷದಲ್ಲಿ ನಿಂತು ವಾದಿಸುವದಾಗಿ ಸೋವಿಯೆಟ್ ಸರಕಾರ ಭರವಸೆ ಕೊಟ್ಟಿದೆಯೆಂಬ ಅನಧಿಕೃತ ಸುದ್ದಿ ಬಂದಿದೆ. ಈ ನಡುವೆ ಅರಬ ರಾಷ್ಟ್ರಗಳು, ಈ ವರದಿಯಲ್ಲಿ ಹೇಳಿರುವ ಕ್ರಮಗಳನ್ನು ಬ್ರಿಟಿಶ ಸರಕಾರ ಕೈಕೊಳ್ಳಲು ಮುಂದಾದರೆ, ಪ್ರತೀಕಾರೋಪಾಯಗಳನ್ನು ಕೈಕೊಳ್ಳುವುದಾಗಿಯೂ ಎಚ್ಚರಿಕೆಯಿತ್ತಿವೆ. ಅಂತರ್ರಾಷ್ಟ್ರೀಯ ವಿಮಾನ ಸಂಗೆಯ ವಿಮಾನಗಳಿಗೆ ಅರಬ ರಾಷ್ಟ್ರಗಳಲ್ಲಿ ತಂಗಲು ಅಪ್ಪಣೆ ನಿರಾಕರಿಸುವದೂ ಈ ಪ್ರತೀಕಾರೋಪಾಯಗಳಲ್ಲೊಂದಾಗಬಹುದು. ಮಧ್ಯಪೂರ್ವದಲ್ಲಿ ಇಳಿದು ಪುನಃ ಎಣ್ಣೆ ತುಂಬಿಕೊಂಡ ಹೊರತು ಈ ವಿಮಾನ ಮಾರ್ಗಗಳು ಸರಾಗ ಸಾಗಲಾರವು. ದಂಡೋಪಾಯಕ್ಕೂ ಅರಬರು ಸಿದ್ಧರಿರುವಂತಿದೆ. ಈ ಅವತಾರವನ್ನು ಕಂಡು ಬ್ರಿಟಿಶರು ಪಾಲಿಸ್ತಾನ ವರದಿಯ ಸೂಚನೆಗಳನ್ನು ಒಡನೆ ಆಚರಣೆಗೆ ತರುವ ವಿಚಾರವನ್ನು ಬಿಟ್ಟುಕೊಟ್ಟರುವರೆಂದು ತಿಳಿಯುತ್ತದೆ.

ಇರಾಣದಲ್ಲಿ ಯಾದವಿ ?

ಅಝುರಬೈಜಾನ "ಪ್ರಧಾನ ಮಂತ್ರಿ" ಜಾಫರ ಪಿಶೆವಾರಿಗೂ ಇರಾಣದ ಕೇಂದ್ರ ಸರಕಾರದ ಪ್ರಧಾನಮಂತ್ರಿ ಘವಾಮ ಸುಲ್ತಾನೆಗೂ ನಡೆದ ಒಪ್ಪಂದ ಮಾತುಕತೆಗಳು ಅಯಶಸ್ವಿಯಾಗಿ ಪಿಶೆವಾರಿ ತನ್ನ ರಾಜಧಾನಿಯಾದ ತಾಬ್ರಿಝಕ್ಕೆ ಮರಳಿದ್ದಾನೆ. ಈ ನಡುವೆ ಕೇಂದ್ರ ಸರಕಾರದ ಸೈನ್ಯಗಳು ಅಝುರಬೈಜಾನದ ಗಡಿ ಮುಟ್ಟಿ ಅಝುರಬೈಜಾನದ "ರಾಷ್ಟ್ರೀಯ ಸರಕಾರ"ವನ್ನು ಮುರಿಯುವ ಸಲುವಾಗಿ ಮುತ್ತಿಗೆಯ ಸಿದ್ಧತೆ ನಡೆಸಿವೆಯೆಂದು ತಿಳಿದು ಬರುತ್ತದೆ. ಪಿಶೆವಾರಿ ಮಾಡಿದ ಆಕಾಶವಾಣಿ ಭಾಷಣದಲ್ಲಿ, ಅಝುರಬೈಜಾನು ಸ್ವಾಯತ್ತತೆಯನ್ನು ಕೂಡ ಬೇಡುವದಿಲ್ಲೆಂದೂ ಇರಾಣದಲ್ಲಿ ನಿಜವಾದ ಪ್ರಜಾಸತ್ತಾತ್ಮಕ ಘಟನಾತ್ಮಕ ಆಡಳಿತೆ ಸ್ಥಾಪಿತವಾದರೆ ಅದು ತನ್ನ ಪ್ರತ್ಯೇಕ ಪಾರ್ಲಮೆಂಟನ್ನು ಕೂಡ ವಿಸರ್ಜಿಸಿ ಇರಾಣಿ ಪಾರ್ಲಮೆಂಟಿನಲ್ಲೆ ಸೇರುವದಾಗಿಯೂ ಹೇಳಿದ್ದಾನೆ. ಆದರೆ ಸುಲ್ತಾನೆ ಮಾತ್ರ ಚುನಾವಣೆಯಾದಾಗ ಎಲ್ಲ ಸರಿ ಹೋಗುವದೆಂದಿಷ್ಟೇ ಹೇಳಿ ಮತ್ತೇನನ್ನೂ ಮಾಡಲೊಪ್ಪದ್ದರಿಂದ ಮಾತುಕತೆ ಮುರಿಯಿತಂತೆ. ಕೇಂದ್ರ ಸರಕಾರದ ಪಡೆಗಳು ಏರಿ ಬಂದರೆ ಅಝುರಬೈಜಾನ ಸೈನ್ಯ ಅದನ್ನು ಎದುರಿಸಿ ಹೋರಾಡುವದೆಂದು ಅವನು ಹೇಳಿದ್ದಾನೆ.

ಕರ್ನಾಟಕಕ್ಕೆ ಅಗ್ಗದರದಲ್ಲಿ ಆಹಾರ ಧಾನ್ಯಗಳು

ಮುಂಬಯಿ ಸರಕಾರದ ಯೋಜನೆ

ಮುಂಬಯಿ ತಾ ೧೪— ಮುಂಬಯಿ ಸರಕಾರದ ಪೂರೈಕೆ ಮಂತ್ರಿಗಳಾದ ಶ್ರೀ ದಿನಕರರಾವ ದೇಸಾಯಿಯವರು ಸುದ್ದಿಗಾರರ ಸಭೆಯಲ್ಲಿ ಈ ರೀತಿ ಹೇಳಿದರು.

ಅಹಮ್ಮದನಗರ, ವಿಜಾಪುರ, ಧಾರವಾಡ, ಸಾತಾರಾ, ಪುಣೆ, ಬೆಳಗಾವಿ ಹಾಗು ಕೊಲ್ಲಾಪುರ ಈ ೬ ಕುಟಾಗ್ರತೆ ಜಿಲ್ಲೆಗಳಲ್ಲಿ ಆಹಾರ ಧಾನ್ಯಗಳನ್ನು ಜನರಿಗೆ ಅಗ್ಗ ದರದಿಂದ ಹಂಚಲು ಅಕ್ಟೋಬರವರೆಗೆ ೮೦ ಲಕ್ಷ ರೂಪಾಯಿ ಯೋಜನೆ ಸರಕಾರವು ತಯಾರಿಸಿದೆ. ಈ ಇಳಿಸಿದ ದರದಲ್ಲಿ ಕೊಳ್ಳಲು ಸಹ ಅಸಮರ್ಥರಾದವರಿಗೆ ಕಾವಗಾರಿ ತೆರೆಯಲಾಗಿರುವದು. ನಾವು ಬಟ್ಟೆ ಪೂರೈಸಿದರೆ ಸಿಂಧ ಸರಕಾರದವರು ೪೦ ಸಾವಿರ ಟನ್ ನೇಪಾಳ ಸಂಸ್ಥಾನದವರು ೨೫ ಲಕ್ಷ ಮಣ ಅಕ್ಕಿ ನವಗೆ ಪೂರೈಸಲಿರುವರು. ಈ ಸಂಬಂಧದ ಬಟ್ಟೆ ಬಗ್ಗೆ ಕೇಂದ್ರ ಸರಕಾರಕ್ಕೆ ಬರೆಯಲಾಗಿದೆ. ಉತ್ತಮ ಮಳೆಯಾಗಿ ಬೆಳೆ ಚನ್ನಾಗಿ ಬಂದರೆ ನವೆಂಬರ ತಿಂಗಳದಲ್ಲಿ ಆಹಾರ ಪರಿಸ್ಥಿತಿ ಸುಧಾರಿಸುವದು. ಈಗ ಆಹಾರ ಕೊರತೆ ತೀಕ್ಷ್ಣವಾಗಿದ್ದರೂ ಕೇಂದ್ರ ಸರಕಾರವು ಸ್ವಲ್ಪ ಸಹಾಯ ಮಾಡಿದರೆ ತೊಂದರೆ ನೀಗಿಸಬಲ್ಲೆವು.

ಸುದ್ದಿಗಳು

ಚಿತ್ರದುರ್ಗ ಕ್ಷಾಮ ನಿವಾರಣ ಸಮಿತಿಯವರು ಗರ್ಭಿಣಿಯರಿಗೆ ಸಹಾಯ ಮಾಡಲು ಪೋಷಣಾಲಯವೊಂದು ತೆರೆದಿದ್ದಾರೆ.

ಬಂಗಾಲಕ್ಕೆ ಈ ವರ್ಷ ೭॥ ಲಕ್ಷ ಟನ್ ಅಕ್ಕಿ ಕೊರತೆ ಬೀಳುವದೆಂದು ಪೂರೈಕೆ ಕಮೀಶನರರು ಹೇಳಿರುವರು.

AC 50 —K

"ಏನು ಮಾಡಲಿಕ್ಕೆ ಬೇಕು"

—ಗಾಂಧೀಜಿ

"ಕಾರಣವೇನೇ ಇರಲಿ, ಸರಕಾರವು ಮತ್ತು ಜನತೆಯು ಆಹಾರದ ಕೊರತೆಯ ದುರ್ಧರ ಪ್ರಸಂಗವನ್ನು ಧೈರ್ಯಸ್ಥೈರ್ಯಗಳಿಂದ ಎದುರಿಸದಿದ್ದಲ್ಲಿ ಸರ್ವನಾಶವಾಗುವುದರಲ್ಲಿ ಸಂಶಯವಿಲ್ಲ. ಕೇವಲ ಇದೊಂದೇ ರಂಗವನ್ನು ಬಿಟ್ಟು ಉಳಿದ ಯಾವತ್ತೂ ರಂಗಗಳಲ್ಲಿ ನಾವು ಈ ಪರದೇಶೀ ಸರಕಾರದೊಡನೆ ಹೋರಾಡತಕ್ಕದ್ದು, ಮತ್ತು ಈ ರಂಗದಲ್ಲಿಯೂ ಕೂಡ ಸಯುಕ್ತಿಕವಾದ ಜನತೆಯ ಮತವನ್ನು ಕಡೆಗಣಿಸಿದರೆ ಇಲ್ಲವೆ ತಾತ್ಸಾರ ಮಾಡಿದರೆ ಈ ರಂಗದಲ್ಲಿಯೂ ನಾವು ಅವರೊಡನೆ ಹೋರಾಡುವೆವು.

—ಫೆಬ್ರುವರಿ ೧೬ನೇ ತಾರೀಖಿಗೆ ಕೊಟ್ಟ ಹೇಳಿಕೆ.

ನಮ್ಮ ಪ್ರತಿಜ್ಞೆ ಮತ್ತು ಬಿನ್ನಹ

ಕೊರತೆಯ ಭಾಗಗಳಲ್ಲಿರುವವರಿಗೆ ನಾವು ಸಂಪೂರ್ಣ ಬೆಂಬಲವೀಯುವ ಬಗ್ಗೆ ಪ್ರತಿಜ್ಞೆ ಮಾಡುತ್ತೇವೆ. ದೇಶದ ಯಾವತ್ತೂ ಸಾಧನ ಸಾಮಗ್ರಿಯನ್ನು ಒಂದುಗೂಡಿಸಿ ಅವರಿಗೆ ತ್ವರಿತವಾಗಿ ನೆರವನ್ನು ನೀಡಲಾಗುತ್ತಿದೆ. ಅವರಿಗಿರುವ ಆಹಾರದ ಕೊರತೆಯಲ್ಲಿ ದೇಶದ ಉಳಿದ ಭಾಗವು ಪಾಲು ವಹಿಸುವದಲ್ಲದೆ ಸಮಪಾಲು ವಹಿಸುವದು. ಪ್ರತಿಯೊಬ್ಬನಿಗೆ ಯೋಗ್ಯ ಪ್ರಮಾಣದಲ್ಲಿ ಆಹಾರವು ದೊರೆಯುವಂತೆ ಮಾಡುವದಕ್ಕಾಗಿ ಶೀದಾ ಪದ್ಧತಿಯನ್ನು ವಿಸ್ತರಿಸಲಾಗುತ್ತಿದೆ. ಬೆಲೆ ನಿಯಂತ್ರಣವನ್ನು ತಪ್ಪದೆ ಸಾಗಿಸಲಾಗುವುದು. ಶಾಂತತೆ ಮತ್ತು ಆತ್ಮ ವಿಶ್ವಾಸದಿಂದ ನಡೆದುಕೊಳ್ಳಿರಿ. ನಿಮಗೆ ಅವಶ್ಯವಿರುವದಕ್ಕಿಂತ ಹೆಚ್ಚಿಗೆ ಕೊಂಡುಕೊಳ್ಳಬೇಡಿರಿ. ಲಾಭಬಡಕರೊಡನೆ ಯಾವದೇ ತರದ ಸಂಬಂಧವನ್ನಿಟ್ಟುಕೊಳ್ಳಬೇಡಿರಿ.

ಹೆಚ್ಚುಳಿದ ಭಾಗಗಳಲ್ಲಿರುವವರಿಗೆ ಸಂಪೂರ್ಣ ಸಹಾಯವನ್ನು ಒದಗಿಸಬೇಕೆಂದು ನಾವು ಅವರಿಗೆ ಬಿನ್ನವಿಸಿಕೊಳ್ಳುತ್ತೇವೆ. ನಿಮ್ಮಲ್ಲಿ ಹೆಚ್ಚಾಗಿ ಇರುವ ಕಾಳನ್ನು ನೀವು ಕೊಟ್ಟುಬಿಡಬೇಕಾಗಿದ್ದರೂ ನಿಮಗೆ ಸಾಕಷ್ಟು ಕಾಳು ಉಳಿಯುವುದು. ನಿಮ್ಮ ಪಟ್ಟಣದಲ್ಲಿ ಶೀದಾ ಕ್ರಮವನ್ನು ಕಡಿಮೆಮಾಡಿದರೆ ನಿಮ್ಮ ದೇಶಬಾಂಧವರಿಗೆ ನೆರವಾಗುವುದಕ್ಕಾಗಿ ಹೀಗೆ ಮಾಡಲಾಗಿದೆಯೆಂದು ನೆನಪಿನಲ್ಲಿಡಿರಿ. ಇಷ್ಟೆಲ್ಲ ಆಗಿಯೂ ನಿಮ್ಮ ಹತ್ತರ ಸಾಕಷ್ಟು ಉಳಿಯುವುದು. ಸ್ವಲ್ಪಾದರೂ ಕೂಡಿಹಾಕಿ ಇಡಬೇಡಿರಿ. ಅಧಿಕಾರಿಗಳೊಡನೆ ಸಹಕರಿಸಿರಿ.

ಆಹಾರದ ಕೊರತೆಯನ್ನು ಹೋಗಲಾಡಿಸಿರಿ

ಮಿತ್ಯವ್ಯಯದಿಂದ ದುಡಿಯಿರಿ ಎಲ್ಲರೂ ಪಾಲುಗಾರರಾಗಿರಿ

ವ್ಯಾಪಾರಿಗಳಿಗೆ ಮತ್ತು ಬೆಳೆಯುವವರಿಗೆ ಸಂದೇಶ

ನಿಮಗೆ ಶಕ್ಯವಿದ್ದಷ್ಟು ಕಾಳನ್ನೆಲ್ಲ ಹೊರಗೆಡವಿರಿ; ನೀವು ಕೂಡಿಡುವ ಪ್ರತಿಯೊಂದು ಮಣ ಕಾಳು ಒಬ್ಬ ದೇಶಬಾಂಧವನ ಮರಣಕ್ಕೆ ಕಾರಣವಾಗುವುದು. ನಿಯಂತ್ರಿತ ಬೆಲೆಗಳಿಗಷ್ಟೇ ಮಾರಿರಿ-ಅವು ನಿಮಗೆ ಹಾಗೂ ಗ್ರಾಹಕರಿಗೆ ಇಬ್ಬರಿಗೂ ಯೋಗ್ಯವಾಗಿವೆ. ಎರಡನೇಯವರಿಗೆ ದುಃಖ ಕೊಟ್ಟು ಹಣ ಗಳಿಸುವುದು ಪಾಪವೆಂದು ತಿಳಿಯತಕ್ಕದ್ದು.

ಲಾಭಬಡಕರನ್ನು ಮತ್ತು ಕಳ್ಳಪೇಟೆಗಾರರನ್ನು ತಮ್ಮ ಯಾವತ್ತೂ ಶಕ್ತಿಯನ್ನು ಉಪಯೋಗಿಸಿ ಹತ್ತಿಕ್ಕಬೇಕೆಂದು ಸರಕಾರ ಹಾಗೂ ಜನತೆಯು ನಿಶ್ಚಯಿಸಿರುತ್ತದೆ. ಕಳ್ಳಪೇಟೆಯನ್ನು ತಪ್ಪಿಸಿರಿ; ಅದು ಅಪರಾಧವಾಗಿದೆ.

ಹಿಂದುಸ್ಥಾನ ಸರಕಾರದ ಆಹಾರ ಖಾತೆ, ಹೊಸದಿಲ್ಲಿ, ಇವರ ಪ್ರಕಟನೆ.

ಕರ್ಮವೀರ
ಹರಿಜನ ಪುರವಣಿ

ಹಿಂಸೆಯನ್ನು ತಡೆಯುವುದೆಂತು ?

ಪ್ರಶ್ನೆ- ಇಂಗ್ಲಂಡಿಗೆ ಮರಳುತಿದ್ದ ಸೈನ್ಯಾಧಿಕಾರಿಯೊಬ್ಬ ಪುಣೆಯಲ್ಲಿ ಕೆಲ ದಿನಗಳ ಹಿಂದೆ ನನ್ನನ್ನು ಕಂಡಾಗ, ಹಿಂದುಸ್ತಾನದಲ್ಲಿ ಹಿಂಸೆ ಹೆಚ್ಚುತಿದೆ; ಜನ ಅಹಿಂಸಾ ಮಾರ್ಗದಿಂದ ಸಾವಕಾಶ ಪರಾವೃತ್ತವಾಗುತ್ತ ನಡೆದಂತೆ ಹಿಂಸೆ ಇನ್ನೂ ಹೆಚ್ಚುತ್ತ ಹೋಗುವುದು ಎಂದು ಹೇಳಿದನು. "ಪಾಶ್ಚಾತ್ಯರಾದ ನಮಗೆ ಹಿಂಸೆಯಲ್ಲಿ ವಿಶ್ವಾಸವಿರುವುದಿಷ್ಟೇ ಅಲ್ಲ ನಮ್ಮ ಸಮಾಜವೆ ಹಿಂಸೆಯ ತಳಹದಿಯಲ್ಲಿ ರಚಿತವಾಗಿದೆ. ಅನೇಕ ರಾಷ್ಟ್ರಗಳು ಹಿಂಸೆಯ ಮುಖಾಂತರವೆ ತಮ್ಮ ಸ್ವಾತಂತ್ರ್ಯ ಪಡೆದು ಇಂದು ಒಳ್ಳೆ ಶಾಂತಿಯಲ್ಲಿ ಬಾಳುತಿರುವುವು. ಹಿಂಸೆಯನ್ನು ತಡೆಯುವುದಕ್ಕಾಗಿ ನಾವು ಅಣು ಬಾಂಬನ್ನು ಸಂಶೋಧಿಸಿದ್ದೇವೆ. ಕಳೆದ ಮಹಾಯುದ್ಧವೇ ಇದಕ್ಕೆ ಸಾಕ್ಷಿಯಾಗಿದೆ'' ಎಂದು ಅವರು ಮಾತು ಪ್ರಾರಂಭಿಸುತ್ತ ಹೀಗೆ ಮುಂದುವರಿದರು. "ಗಾಂಧೀಜಿಯವರು ನಿಮ್ಮ ಜನರಿಗೆ ಅಹಿಂಸಾ ಮಾರ್ಗವನ್ನು ತೋರಿಸಿಕೊಟ್ಟಿರುವರು. ಜನತೆಯನ್ನು ಅಹಿಂಸಾವಾದಿಗಳನ್ನಾಗಿ ಪರಿವರ್ತಿಸಿ ಶಾಂತತೆಯ ಆಡಳಿತವನ್ನುಂಟು ಮಾಡುವ ಅಣು ಬಾಂಬಿನಂಥ ಯಾವುದಾದರೊಂದು ಶಕ್ತಿಯನ್ನು ಅವರು ಸಂಶೋಧಿಸಿರುವರೊ ? ತಮ್ಮ ವರ್ಚಸ್ಸನ್ನುಪಯೋಗಿಸಿ, ಹಿಂಸಾ ವಿಚಾರವನ್ನೆಲ್ಲ ಬಿಟ್ಟು ತಮ್ಮ ಅಹಿಂಸಾ ಧ್ಯೇಯವನ್ನು ಅನುಸರಿಸುವಂತೆ ನೋಡಿಕೊಳ್ಳಿರೆಂದು ಗಾಂಧೀಜಿಯವರನ್ನು ಕೇಳಿಕೊಳ್ಳಿ. ದೇಶದಲ್ಲೆಲ್ಲ ಹಬ್ಬುತಿರುವ ಭಯಾನಕ ಹಿಂಸಾಪ್ರವೃತ್ತಿಯಿಂದ ಜನರನ್ನು ಪರಾವೃತ್ತ ಮಾಡಲು ಅವರು ಇಂದು ಶಕ್ತರಾಗದಿದ್ದರೆ ಅವರೊಳ್ಳೆ ಭಗ್ನಮನೋರಥರಾಗಿ ಅವರ ಜೀವನಕಾರ್ಯವೇ ಹಾಳಾಗಿ ಹೋಗುವುದು.'' ಎಂದು ಮಾತು ಮುಗಿಸಿದರು.

ಉತ್ತರ— ಈ ಪ್ರಶ್ನೆಯಲ್ಲಿ ವಿಚಾರಗೊಂದಲ ವಿಪರೀತವಾಗಿದೆ. ಪರಮಾಣು ಬಾಂಬು ಹಿಂಸೆಯನ್ನು ನಿಲ್ಲಿಸಿಲ್ಲ ಜನರ ಹೃದಯವು ಹಿಂಸಾಮಯವಾಗಿದೆ. ಮೂರನೇ ಮಹಾಯುದ್ಧದ ಸಿದ್ಧತೆಗಳು ನಡೆದಿವೆಂದೂ ಹೇಳಬಹುದು. ಹಿಂಸೆಯಿಂದ ಮಾನವ ಜಾತಿಗೆ ಶಾಂತಿ ಎಂದಾದರೂ ಬಂದಿದೆಂದು ಹೇಳುವುದು ತೀರ ತಪ್ಪಾಗಬಹುದಾದರೂ ಹಿಂಸೆಯಿಂದ ಎಂದೂ ಯಾವ ಲಾಭವೂ ಆಗಿಲ್ಲೆಂದು ಹೇಳಲಿಕ್ಕೆ ಬರಲಾರದು.

ಹಿಂಸೆಯನ್ನು ನಿಲ್ಲಿಸುವದು ನನ್ನಿಂದಾಗದಿದ್ದರೆ ನಾನು ಪಶ್ಚಾತ್ತಾಪಪಡಬೇಕಾಗುವದು ಎಂಬುದು ನನ್ನ ಅಹಿಂಸಾಚಿತ್ರದಲ್ಲಿ ಸಮಾವಿಷ್ಟವಾಗುವದಿಲ್ಲ. ಯಾವ ಮನುಷ್ಯನೂ ಹಿಂಸೆಯನ್ನು ನಿಲ್ಲಿಸಲಾರನು. ಪರಮಾತ್ಮನಿಗೆ ಮಾತ್ರ ಅದು ಸಾಧ್ಯ. ಮಾನವರು ಅವನ ಕೈಯ್ಯೊಳಗಿನ ಗೊಂಬೆ ಮಾತ್ರ ಕೇವಲ ಭೌತಿಕ ಸಾಧನಗಳು ಹಿಂಸೆಯನ್ನು ನಿಲ್ಲಿಸಲಾರವು. ಆದರೆ ಇದಕ್ಕಾಗಿ ಭೌತಿಕ ಸಾಧನಗಳನ್ನೆ ಉಪಯೋಗಿಸಬಾರದೆಂದು ಇದರಿಂದ ಅರ್ಥವಾಗುವದಿಲ್ಲ. ಪರಮಾತ್ಮನ ಕೃಪೆಯ ನಿರ್ಣಾಯಕವಾದುದು. ಅವನು ತನ್ನ ಸಂಕಲ್ಪದಂತೆ ನಡೆಯುವನು. ಆ ಸಂಕಲ್ಪಾನುಸಾರವಾಗಿಯೆ ಹಿಂಸೆಯನ್ನು ನಿಲ್ಲಿಸಬಹುದು. ಮನುಷ್ಯನಿಗೆ ಪರಮಾತ್ಮನ ಸಂಕಲ್ಪ ಸಂಪೂರ್ಣವಾಗಿ ಎಂದಿಗೂ ತಿಳಿಯದು ತಿಳಿಯುವದು ಶಕ್ಯವಿಲ್ಲ. ಆದುದರಿಂದ ಶಕ್ತಿಯಿದ್ದಷ್ಟು ನಾವು ಪ್ರಯತ್ನಿಸಬೇಕು. ಅಹಿಂಸಾ ಪ್ರಯೋಗವು ಹಿಂದುಸ್ತಾನದಲ್ಲಿ ಬಹಳ ಮಟ್ಟಿಗೆ ಯಶಸ್ವಿಯಾಗಿದೆಂದು ನಾನು ಅಭಿಪ್ರಾಯಪಡುತ್ತೇನೆ. ಆದುದರಿಂದ ಮೇಲಿನ ಪ್ರಶ್ನೆಯಲ್ಲಿಯ ನಿರಾಶೆಯ ನಿಟ್ಟುಸುರಿಗೆ ಅವಕಾಶವಿಲ್ಲ. ಕೊನೆಯದಾಗಿ ಅಹಿಂಸೆ ಜಗತ್ತಿನ ಮಹಾತತ್ವಗಳಲ್ಲಿ ಒಂದಾಗಿದೆ. ಜಗತ್ತಿನಲ್ಲಿಯ ಯಾವ ಶಕ್ತಿಯೂ ಅದನ್ನು ಹಾರಿಸಿ ಬಿಡಲಾರದು. ಆ ಧ್ಯೇಯ ಸಾಧನೆಗಾಗಿ ನನ್ನಂಥ ಸಾವಿರಾರು ಜನ ಮರಣ ಹೊಂದಬಹುದು. ಆದರೆ ಅಹಿಂಸೆ ಅಮರವಾಗಿದೆ. ಅದಕ್ಕೆಂದೂ ಮರಣವಿಲ್ಲ. ಧ್ಯೇಯಕ್ಕಾಗಿ ಮರಣಹೊಂದಲು ಸಿದ್ಧರಿದ್ದ ನಿಷ್ಠಾವಂತ ಜನರಿಂದಲೇ ಅಹಿಂಸೆ ತತ್ವದ ಪ್ರಸಾರವಾಗಬಲ್ಲುದು.

ಸಿಮುಲಾ ಮೋ. ಕ. ಗಾಂಧಿ
೯—೫—೧೯೪೬

[ಹರಿಜನ ಸೇವಕದಿಂದ]

ಆಯುರ್ವೇದ ಮತ್ತು ನಿಸರ್ಗೋಪಚಾರ

ಆಯುರ್ವೇದ ಮತ್ತು ವನಸ್ಪತಿ ಶಾಸ್ತ್ರದ ಪ್ರೊಫೇಸರರಾದ ವೈದ್ಯ ವಲ್ಲಭರಾಮರು ಹೀಗೆ ಬರೆಯುತ್ತಾರೆ-

"ಆಯುರ್ವೇದ ಮತ್ತು ಅಲೋಪಥಿಯನು ಕೂಡಿಸುವದರಿಂದ ಆಯುರ್ವೇದಶಾಸ್ತ್ರದ ಮುಖ್ಯ ತತ್ವಗಳು ನಾಶವಾಗಿ ಹೋಗಿವೆ. ಆಯುರ್ವೇದ ಮೂಲಕ ಚಿಕಿತ್ಸೆ ಪಂಚಭೂತಾತ್ಮಕವಾಗಿದೆ ವಾಯುವಿನ ದುರುಪಯೋಗವಾದರೆ ವಾತವಾಗುವದು, ಅಗ್ನಿಯ ದುರುಪಯೋಗವಾದರೆ ಪಿತ್ತವಾಗುವದು, ಜಲದ ದುರುಪಯೋಗವಾದರೆ ಕಫವಾಗುವದು. ಬೇನೆಯ ಈ ಮೂಲಭೂತ ತತ್ವಗಳನ್ನು ತಿಳಿದುಕೊಳ್ಳುವದನ್ನೆ ಆಯುರ್ವೇದ ಚಿಕಿತ್ಸಾಪದ್ಧತಿ ಅವಲಂಬಿಸುತ್ತದೆ. ಮೇಲೆ ವಿವರಿಸಿದ ಬೇನೆಗಳಿಗೆ ಚಿಕಿತ್ಸೆಯೆಂದರೆ ವಾಯು, ತೇಜ ಮತ್ತು ಜಲದ ಸದುಪಯೋಗವೆ ಎಂದು ಹೇಳಬಹುದು. ಅದೇ ತಕ್ಕದ್ದೆಂದು ಬೇರೆ ಹೇಳಬೇಕಿಲ್ಲ. ನಿಸರ್ಗನಿಯಮಗಳನ್ನು ಅಕ್ಷರಶಃ ಪಾಲಿಸಬೇಕಾದರೆ ಧಾರ್ಮಿಕ ಭಾವನೆಯು ಇರತಕ್ಕದ್ದು ಅವಶ್ಯವಾಗಿದೆ. ಆಯುರ್ವೇದದಲ್ಲಿ ಪಥ್ಯವು ಶಾಸ್ತ್ರೀಯವಾಗಿದ್ದು ಅತ್ಯಂತ ಮಹತ್ವದ ಸ್ಥಾನವನ್ನು ಪಡೆದಿದೆ. ಯಾವದೊಂದು ಬೇನೆಯಿಂದ ಮುಕ್ತರಾಗಬೇಕಾದರೆ ನಿಸರ್ಗ ನಿಯಮಗಳನ್ನು ಯೋಗ್ಯ ರೀತಿಯಿಂದ ಪಾಲಿಸಬೇಕೆಂಬುದೆ ಅದರ ನಿಜಾರ್ಥವಾಗಿದೆ. ವಾಗ್ಭಟ್ಟನು ಹೀಗೆ ಹೇಳುತ್ತಾನೆ-

> ಪಥ್ಯೆ ಸತಿ ಗದಾರ್ತಸ್ಯ ಕಿಮೌಷಧಿ
> ನಿಷೇವಣಮ್ ।
> ಪಥ್ಯೇಽಸತಿ ಗದಾರ್ತಸ್ಯ ಕಿಮೌಷಧಿ
> ನಿಷೇವಣಮ್ ॥

ರಾಮನಾಮದ ಪ್ರಚಾರ ಮತ್ತು ವಿಶುದ್ಧ ಜೀವನವು ರೋಗಪ್ರತಿಬಂಧಕ್ಕೆ ಅತ್ಯಂತ ಮಹತ್ವದ ಮತ್ತು ಶ್ರೇಷ್ಠ ಉಪಾಯವಾಗಿದೆಂಬ ಬಗ್ಗೆ ನನಗೆ ಸ್ವಲ್ಪವೂ ಸಂದೇಹವಿಲ್ಲ. ಆದರೆ ಡಾಕ್ಟರರು, ಹಕೀಮರು ಮತ್ತು ವೈದ್ಯರು ರಾಮನಾಮವು ರಾಮಬಾಣೋಪಾಯವೆಂದು ಭಾವಿಸದಿರುವದು ವಿಷಾದಕರವಾಗಿದೆ. ಪ್ರಚಲಿತ ಆಯುರ್ವೇದ ಸಾಹಿತ್ಯದಲ್ಲಿ ಅದಕ್ಕೆ ಸ್ಥಾನ ಕೊಟ್ಟಿರುವದಿಲ್ಲ. ಅಲ್ಪಸ್ವಲ್ಪ ಸ್ಥಾನವಿದ್ದರೂ ಅದರಿಂದ ಜನರು ಮೂಢಭಾವನೆಯ ಕೂಪದಲ್ಲಿ ಬೀಳದಂತೆ ಪ್ರೇರೇಪಿಸುವದು. ನಿಜವಾಗಿ ಹೇಳಬೇಕಾದರೆ ರಾಮನಾಮಕ್ಕೂ ಮೂಢಭಾವನೆಗೂ ಸಂಬಂಧವಿಲ್ಲ. ನಿಸರ್ಗ ನಿಯಮವದು. ಅದನ್ನು ಪಾಲಿಸುವವರು ರೋಗದಿಂದ ಮುಕ್ತರಾಗುವರು. ಪಾಲಿಸದಿದ್ದವರು ರೋಗಕ್ಕೆ ಬಲಿಬೀಳುವರು. ರೋಗಪ್ರತಿಬಂಧಕ್ಕೆ ಹತ್ತುವ ನಿಯಮವೇ ರೋಗ ನಿದಾನಕ್ಕೂ ಹತ್ತುವದು. ನಿಯಮಿತವಾಗಿ ರಾಮನಾಮ ಜಪಿಸುವವನು ಮತ್ತು ವಿಶುದ್ಧ ಜೀವನವನ್ನು ಸಾಗಿಸುವವನು ಬೇನೆ ಏಕೆ ಬೀಳಬೇಕೆಂಬುದು ಇದಕ್ಕೆ ಯೋಗ್ಯವಾದ ಪ್ರಶ್ನೆಯೆನಿಸಬಹುದು ಮಾನವನು ಸ್ವಭಾವತಃ ಅಪೂರ್ಣನು. ವಿಚಾರವಂತ ಮನುಷ್ಯನು ಪರಿಪೂರ್ಣತೆಗಾಗಿ ಪ್ರಯತ್ನಿಸುವನು. ಆದರೆ ಅದನ್ನೆಂದಿಗೂ ಪಡೆಯುವದಿಲ್ಲ. ಅವನು ದಾರಿಯಲ್ಲಿ ಗೊತ್ತಾಗದೆಯಾದರೂ ಮುಗ್ಗರಿಸುವನು ವಿಶುದ್ಧ ಜೀವನದಲ್ಲಿಯೇ ಪರಮಾತ್ಮನ ಸಂಕಲ್ಪ ಅಡಕವಾಗಿದೆ. ಮೊದಲನೆಯ ಮಾತೆಂದರೆ ಪ್ರತಿಯೊಬ್ಬನು ತನ್ನ ಇತಿಮಿತಿಯನ್ನು ತಿಳಿದುಕೊಳ್ಳತಕ್ಕದ್ದು. ಆ ಮರ್ಯಾದೆಯನ್ನು ಮೀರಿ ಯಾವನಾದರೂ ಮುನ್ನುಗ್ಗಿದ್ದಾದರೆ ಅವನು ಬೇನೆಬೀಳುವರೆಂಬುದು ಸುಸ್ಪಷ್ಟವಾಗಿದೆ. ಆದುದರಿಂದ ಅವಶ್ಯಕತೆಗನುಸಾರವಾಗಿ ಯೋಗ್ಯ ಮತ್ತು ಮಿತ ಪಥ್ಯವನ್ನು ಸ್ವೀಕರಿಸಿದ್ದಾದರೆ ರೋಗದಿಂದ ಮುಕ್ತನಾಗುವನು. ಇದು ಯೋಗ್ಯವಾದ ಪಥ್ಯ ಎಂಬುದು ಮಾನವನಿಗೆ ಎಂತು ತಿಳಿಯತಕ್ಕದ್ದು ? ಇಂಥ ಅನೇಕ ಅಡಚಣೆಗಳು ಮುಂದೆ ಬರಬಹುದು. ಇದರ ಮುಖ್ಯಾರ್ಥವೆಂದರೆ ಪ್ರತಿಯೊಬ್ಬ ಸ್ವತಃ ತಾನೇ ವೈದ್ಯನಾಗಬೇಕು ಮತ್ತು ತನ್ನ ಪರಿಮಿತಿಯನ್ನು ತಿಳಿದುಕೊಳ್ಳಬೇಕು. ಹೀಗೆ ಮಾಡುವವನು ನಿಶ್ಚಯವಾಗಿ ೧೨೫ ವರ್ಷ ಬಾಳಬಲ್ಲನು.

ಮನೆಯಲ್ಲಿದ್ದ ಪ್ರಾಚೀನ ಪ್ರಖ್ಯಾತ ಔಷಧಗಳನ್ನು ಮತ್ತು ಮಸಾಲೆಯನ್ನು ನಿಸರ್ಗೋಪಚಾರದಲ್ಲಿ ಸೇರಿಸಬಹುದೊ ಎಂದು ವೈದ್ಯ ವಲ್ಲಭರಾಮರು ಕೇಳುತ್ತಾರೆ. ನಿಯಮಗಳನ್ನು ಸಂಶೋಧಿಸಿ ತಕ್ಕಮದ್ದಾಗಿ ಅವು ಪರಿಣಮಿಸುವದಕ್ಕಿಂತ ಹೆಚ್ಚಿಗೇನೂ ಮಾಡಲಾರವಾದ್ದರಿಂದ ನಿಸರ್ಗೋಪಚಾರದಲ್ಲಿಯೂ ಅವು ಅತ್ಯುತ್ತಮ ಔಷಧಗಳೆಂದು ಡಾಕ್ಟರ ಮಿತ್ರರು ಅಭಿಪ್ರಾಯ ಪಡುತ್ತಿರುವರು. ಆದರೆ ಇದನ್ನು ಎಲ್ಲ ಬಗೆಯಿಂದ ಖಂಡಿಸಬಹುದಾಗಿದೆ. ರಾಮನಾಮಕ್ಕಿಂತ ಹೆಚ್ಚು ಯಾವದಾದರೂ ಶ್ರೇಷ್ಠವಾದ ಉಪಾಯವಿದೆಂದು ಹೇಳುವದು ನಿಜ ನಿಸರ್ಗೋಪಚಾರಕ್ಕೆ ವಿರೋಧಕವಾಗಿದೆಂದು ನಾನು ಹೇಳಬಲ್ಲೆ. ಈ ಮುಖ್ಯ ತತ್ವವನ್ನು ಬಿಟ್ಟುಗೊಡುತ್ತ ನಡೆದಂತೆ ನಿಸರ್ಗೋಪಚಾರದಿಂದ ಅವನು ದೂರ ಸರಿಯುವನು. ಈ ವಿಚಾರಸರಣಿಯಿಂದಲೇ ನಾನು ನಿಸರ್ಗೋಪಚಾರವನ್ನು ಕೇವಲ ಪಂಚಭೂತಗಳಿಗೆ ಮರ್ಯಾದಿತಗೊಳಿಸುತ್ತೇನೆ. ಆದರೆ ಇದನ್ನು ಮೀರಿ ಯಾವನೊಬ್ಬ ವೈದ್ಯನು ಕೇವಲ ರೋಗಿಗಳ. ಉಪಚಾರಕ್ಕಾಗಿ ತನ್ನ ಸುತ್ತಲೂ ಬೆಳೆದ ಇಲ್ಲವೆ ಬೆಳೆಯಿಸಿದ ವನಸ್ಪತಿಗಳನ್ನು ಹಣ ತೆಗೆದುಕೊಳ್ಳದೆ ಉಪಯೋಗಿಸುವನೋ ಅವನು ನಿಸರ್ಗೋಪಚಾರಿಯೆಂದು ಹೇಳಿಕೊಳ್ಳಬಲ್ಲನು. ಆದರೆ ಇಂಥ ವೈದ್ಯರೆಲ್ಲಿರುವರು ? ಇಂದು ಅವರಲ್ಲಿ ಬಹುಸಂಖ್ಯಾಕರು ಕೇವಲ ಧನಸಂಗ್ರಹದಲ್ಲಿ ತೊಡಗಿರುವರು. ಅವರು ಯಾವದೇ ಬಗೆಯ ಸಂಶೋಧನೆ ನಡೆಸುವದಿಲ್ಲ. ಅವರ ಲೋಭ ಮತ್ತು ಮಾನಸಿಕ ಜಾಡ್ಯದ ಮೂಲಕ ಆಯುರ್ವೇದ ಶಾಸ್ತ್ರಕ್ಕಳಿಗಾಲ ಬಂದಿದೆ. ತಮ್ಮ ಅಶಕ್ತತೆಯನ್ನು ಒಪ್ಪಿಕೊಳ್ಳದೇ ಅವರು ಸರಕಾರ ಮತ್ತು ಸಾರ್ವಜನಿಕರನ್ನು ನಿಂದಿಸತೊಡಗುತ್ತಾರೆ. ತಮ್ಮ ತಪ್ಪಿನಿಂದಲೆ ಅಸಹಾಯಕರಾಗಿ ಆಯುರ್ವೇದವನ್ನು ಕೀಳ್ಗಳೆಯುವವರಿಗೆ ಸರಕಾರದವರು ಯಾವದೇ ಬಗೆಯಿಂದ ಸಹಾಯಮಾಡಲಸಮರ್ಥರಾಗುವರು.

ಸಿಮುಲಾ ಮೋ. ಕ. ಗಾಂಧಿ
ತಾ. ೯-೫-೪೬ (ಗುಜರಾಥಿಯಿಂದ)

ಸ್ವರಾಜ್ಯದ ಉಪೇಕ್ಷೆ ?

ನಾನೊಬ್ಬ ಮಧ್ಯಮ ವರ್ಗದ ಮನುಷ್ಯ ಮುಂಬಯಿಯಲ್ಲಿ ೧೨'×೨೦' ಕೋಣೆಯಲ್ಲಿ ವಾಸಿಸುವೆ. ನನಗೊಬ್ಬ ಹೆಂಡತಿ ಮತ್ತು ಮಗು ಇವೆ. ನನ್ನ ಅಡಿಗೆ ಮನೆ ವಾಸಸ್ಥಳದಲ್ಲಿಯೆ. ಖಾದೀ ವ್ರತವನ್ನು ನಾನು ಸ್ವೀಕರಿಸಿದ್ದು ಈ ವರೆಗೆ ಅದನ್ನು ಪಾಲಿಸುತ್ತ ಬಂದಿದ್ದೇನೆ. ಇಂತಿಷ್ಟು ನೂಲು ಕೊಟ್ಟೇ ಖಾದೀ ಕೊಳ್ಳಬೇಕೆಂಬ ನಿಯಮು ಜಾರಿಯಲ್ಲಿ ಬಂದಂದಿನಿಂದ ನನ್ನಂಥ ಮುಂಬಯಿಯಲ್ಲಿ ಯಾಂತ್ರಿಕ ಜೀವನವನ್ನು ನಡೆಸುವ ಮನುಷ್ಯನಿಗೆ ನೂಲುವುದಕ್ಕಾಗಿ ಅವಶ್ಯಕ ವೇಳೆ ಕೊಡುವುದು ಬಹಳ ಕಠಿಣವಾಗಿದೆ. ಹೀಗಿದ್ದರೂ ನನ್ನ ಪ್ರತಿಜ್ಞೆ ಪಾಲನೆಗಾಗಿ ದಿನಾಲು ೧॥ ಗಂಟೆ ನೂಲುತಿರುವೆನು.

ಮೊನ್ನಿನ ದಿನ ನನ್ನ ಹತ್ತರ ಹಂಜಿಗಳೆ ಇರಲಿಲ್ಲ ಆದುದರಿಂದ ಹಂಜಿಕೊಳ್ಳಲು ಖಾದೀ ಭಾಂಡಾರಕ್ಕೆ ಹೋದೆನು. ಸ್ವಂತದ ಹಂಜಿಯನ್ನು ಮಾಡಿಕೊಳ್ಳುವದಕ್ಕಾಗಿಯಾದರೂ ಖಾದೀಭಾಂಡಾರಕ್ಕೆ ಬನ್ನಿರಿ ಇಲ್ಲವೆ ಇಲ್ಲಿ ಅರಳೆಯನ್ನು ಹಿಂಜಿಕೊಂಡು ಮನೆಯಲ್ಲಿ ಹಂಜಿಮಾಡಿಕೊಳ್ಳಿರೆಂದು ಖಾದೀ ಭಾಂಡಾರದ ಮ್ಯಾನೇಜರರು ನನಗೆ ಹೇಳಿದರು. ನಾನಿರುವ ಮನೆಯಲ್ಲಿ ಸ್ಥಳ ಬಹಳ ಕಡಿಮೆ ಇದ್ದುದರಿಂದ ಮನೆಯಲ್ಲಿ ಹಂಜಿ ಮಾಡಿಕೊಳ್ಳುವುದು ಅಶಕ್ಯವಾಗಿದೆ. ನನ್ನಂಥವನು ಭಾಂಡಾರಕ್ಕೆ ಹೋಗಿ ಹಂಜಿಮಾಡಿಕೊಳ್ಳುವದು ಶಕ್ಯವಿಲ್ಲ. "ಹಂಜಿಗಳನ್ನಾದರೂ ಕೊಡಿರಿ ಇಲ್ಲವಾದರೆ ನೂಲುವುದನ್ನೇ ನಾನು ಬಿಟ್ಟುಕೊಡಬೇಕಾಗುತ್ತದೆ" ಎಂದು ನಾನಂದೆನು. ಯೋಗ್ಯವೆನಿಸಿದ್ದನ್ನು ನೀವು ಮಾಡಬಹುದೆಂದು ನನಗೆ ಉತ್ತರ ದೊರೆಯಿತು. ಮನುಷ್ಯನು ಸ್ವಾವಲಂಬಿಯಾಗಿರತಕ್ಕದ್ದು ಮತ್ತು ತನ್ನ ಹಂಜಿಗಳನ್ನು ತಾನೇ ಮಾಡಿಕೊಳ್ಳತಕ್ಕದ್ದೆಂಬುದು ನನಗೆ ಗೊತ್ತಿದೆ. ಆದರೆ ಮುಂಬಯಿಯಲ್ಲಿರುವ ನನ್ನಂಥವನಿಗೆ ಇದು ಅಶಕ್ಯವೆಂದು ನನಗನಿಸುತ್ತದೆ. ಸಾವಿರಾರು ಜನರ ಪರಿಸ್ಥಿತಿಯೂ ಹೀಗೆಯೇ ಇದೆ. ನಾನೇನು ಮಾಡತಕ್ಕದ್ದು ?

"ಹಂಜಿ ಮಾರಾಟ ನಿಲ್ಲಿಸಿದ್ದರಿಂದ ಖಾದೀ ಭಾಂಡಾರದವರು ಬಡವರ ಉಪಜೀವನ ಸಾಧನವನ್ನು ಕಸಿದುಕೊಂಡಂತಾಗಿದೆ. ಅವರು ನೂಲುವವರಿಂದ ಹಣ ಗಳಿಸುತಿರುವಂತೆ ಹಂಜಿ ಮಾಡಿಯೂ ಹಣ ಗಳಿಸಬಹುದಾಗಿತ್ತು."

ಮೇಲಿನ ಪತ್ರಕ್ಕೆ ಉತ್ತರ ಅವಶ್ಯವಿದೆ. ಮುಂಬಯಿಯಲ್ಲಿಯ ಅನಾರೋಗ್ಯ ಸ್ಥಳಗಳಲ್ಲಿರುವ ಸಾವಿರಾರುಜನರು ಈ ಲೇಖಕರಂತೆ ದುರ್ದೆಸೆಯಲ್ಲಿರುವರು ನಮ್ಮ ಜನರು ಇಷ್ಟೊಂದು ಸುಲಭವಾಗಿ ಸಮಾಧಾನಹೊಂದಿರದಿದ್ದರೆ ಮುಂಬಯಿಯಲ್ಲಿಯ ಮನೆಗಳ ಒಡೆಯರು ಕುಟುಂಬಗಳಿಗಾಗಿ ಒಂದೇ ಕೋಣೆಯ ವಾಸಸ್ಥಳಗಳನ್ನೇರ್ಪಡಿಸುತಿರಲಿಲ್ಲ. ಲಕ್ಷಗಟ್ಟಲೆ ಜನರು ಈ ಬಗೆಯ ಜೀವನ ಸಾಗಿಸುತಿರುವರು. ಮತ್ತು ಮಲಬಾರ ಹಿಲ್ಲ ಮತ್ತು ಚೌಪಾಟಿಯಲ್ಲಿ ಶ್ರೀಮಂತರ ವಾಸವನ್ನು ಅಶಕ್ಯ ಮಾಡುತಿರುವರು.

ಈ ಪರಿಸ್ಥಿತಿಯನ್ನು ಹೋಗಲಾಡಿಸಲುರಾಟೆಯು ಮಾರ್ಗವನ್ನು ತೋರಿಸಿ ಕೊಡುತಿದೆ. ಹಾಗಿರದಿದ್ದರೆ ನನ್ನ ಜೀವನದಲ್ಲಿ ಅದಕ್ಕೆ ಸ್ಥಾನವಿರಲಿಲ್ಲ. ಖಡ್ಗಗಳಿಂದ ಕೆಲ ಜನರು ಮಾತ್ರ ತಮ್ಮ ಮಾರ್ಗವನ್ನು ಹುಡುಕಬಲ್ಲರು. ಆದರೆ ಕೋಟ್ಯವಧಿ ಜನರಿಗೆ ಅದು ಶಕ್ಯವಿಲ್ಲ. ಲಂಡನದಲ್ಲಿ ಇಂಥ ಅನಾರೋಗ್ಯಸ್ಥಳಗಳಿಲ್ಲೆಂದಿಲ್ಲ, ಪ್ಯಾರಿಸ, ನ್ಯೂಯಾರ್ಕಗಳಲ್ಲಿಯೂ ಇಲ್ಲವೆಂದಲ್ಲ ಅಲ್ಲಿಯೂ ಇರುವವು. ರಶಿಯದಲ್ಲಿ ಪರಿಸ್ಥಿತಿಯೇನಿದೆಯೆಂಬುದು ಈಗಲೆ ಹೇಳಲು ಬರುವಂತಿಲ್ಲ.

ಈ ಪರಿಸ್ಥಿತಿಯಲ್ಲಿ ಲೇಖಕನ ಅಡಚಣೆಗೆ ಸಮಾಧಾನವೇನು ? ದಿನಾಲು ಒಂದೂವರೆ ಗಂಟೆ ನೂಲಲಿಕ್ಕೆ ಸಮಯ ಸಿಕ್ಕುತ್ತದೆಂದು ಅವನು ಹೇಳುತಿರುವನು. ಇಷ್ಟು ಸಮಯ ದಿನಾಲು ನೂಲು ತೆಗೆದರೆ ತನ್ನ ಖಾದಿಗೆ ಬೇಕಾಗುವಷ್ಟಕ್ಕಿಂತ ಹೆಚ್ಚುನೂಲು ಅವನು ಸಂಗ್ರಹಿಸಬಹುದು. ಭಾಂಡಾರದಿಂದ ಹಂಜಿ ಕೊಳ್ಳಲಿಕ್ಕೆ ಹೋದುದು ಅವನ ತಪ್ಪು. ಮ್ಯಾನೇಜರರು ಅವನಿಗೆ ಸರಿಯಾದ ಉತ್ತರ ಕೊಟ್ಟರು. ನೂಲು ತೆಗೆಯಲು ಸ್ಥಳವಿದ್ದರೆ ಅರಳೆ ಹೊಡೆದು ಹಂಜಿ ಮಾಡಲಿಕ್ಕೂ ಅವನಲ್ಲಿ ಸ್ಥಳವುಂಟು.

(೮ ನೇ ಪುಟ ನೋಡಿರಿ)

ದಕ್ಷಿಣ ಅಫ್ರಿಕೆಯ ಶಿಷ್ಟಮಂಡಲದೊಡನೆ

ರಾಜಕೀಯ ಆಯುಧದ ರೂಪದಲ್ಲಿ ಸತ್ಯಾಗ್ರಹದ ಶಿಶು ಬೆಳೆದ ತೊಟ್ಟಿಲೇ ದಕ್ಷಿಣ ಆಫ್ರಿಕೆ ತಮ್ಮ ಸಮಾಜವನ್ನು ಅದುಮಿ ಪೀಡಿಸಿ ಹೊರಗಟ್ಟುವ ಬಿಳಿ ಜನಾಂಗದ ಪ್ರಯತ್ನವನ್ನು ಅಹಿಂಸೆಯ ಆಯುಧದ ಬಲದಿಂದ ಈ ವರೆಗೂ ಯಶಸ್ವಿಯಾಗಿ ಪ್ರತಿಭಟಿಸಲು ಹಿಂದೀಯರು ಸಮರ್ಥರಾದ ಸ್ಥಳವೂ ಅದೇ. ಈಗಾಗಲೆ ಕಾಯಿದೆಯಾಗಿ ಪಾಸಾಗಿರುವ ಭೂ ಕಾಯಿದೆಯ ರೂಪದಲ್ಲಿ ಪುನಃ ತಲೆಯೆತ್ತಿರುವ ಅದೇ ಗಂಡಾಂತರವನ್ನು ಎದುರಿಸುವ ಸಲುವಾಗಿ ದಕ್ಷಿಣ ಅಫ್ರಿಕೆಯ ಹಿಂದೀ ಸಮಾಜ ಮತ್ತೊಮ್ಮೆ ಸತ್ಯಾಗ್ರಹಾಯುಧವನ್ನು ಹಿರಿಯಲು ನಿರ್ಧರಿಸಿದೆ.

ದಕ್ಷಿಣ ಆಫ್ರಿಕೆಯ ಹಿಂದೀ ಸಮಾಜದ ಪರವಾಗಿ ಶಿಷ್ಟಮಂಡಲವೊಂದು ಈಗ ಕೆಲ ದಿನಗಳಿಂದ ಹಿಂದುಸ್ತಾನದಲ್ಲಿದೆ. ಸ್ವಾಭಿಮಾನಿ ಸಮಾಜವಾಗಿ ಬಾಳುವ ಹಕ್ಕಿನ ಸಲುವಾಗಿ ಇದೀಗ ಹೂಡಬೇಕಾಗಿರುವ ಹೋರಾಟದಲ್ಲಿ ತಮ್ಮ ದೇಶಬಾಂಧವರ ಸಹಕಾರವನ್ನೂ ಸಕ್ರಿಯ ಬೆಂಬಲವನ್ನೂ ಸಂಗ್ರಹಿಸಲು ಅವರು ಇಲ್ಲಿಗೆ ಬಂದಿರುವರು. ಗಾಂಧೀ—ಆಯರ್ವಿನ್ ಒಪ್ಪಂದದೊಡನೆ ಪರಿಸಮಾಪ್ತವಾದ ಮತ್ತು ಗಾಂಧೀಜಿಯ ಮುಂದಾಳ್ತನದಲ್ಲಿ ಹೋರಲ್ಪಟ್ಟ ಸತ್ಯಾಗ್ರಹ ಸಮರದಲ್ಲಿ ಭಾಗವಹಿಸಿ ನುರಿತ ಅನೇಕ ಸತ್ಯಾಗ್ರಹಿ ಸೈನಿಕರು ಆ ಶಿಷ್ಟಮಂಡಲದಲ್ಲಿದ್ದಾರೆ. ಗಾಂಧೀಜಿಯ "ಸತ್ಯಶೋಧನೆ" ಮತ್ತು "ದಕ್ಷಿಣಾಫ್ರಿಕಾ ಸತ್ಯಾಗ್ರಹದ ಇತಿಹಾಸ"ವೆಂಬ ಪುಸ್ತಕಗಳನ್ನು ಓದಿದವರಿಗೆ ಪರಿಚಯವುಳ್ಳ ಸ್ವರ್ಗವಾಸಿಗಳಾದ ಪಾರ್ಸಿ ಪ್ರಮುಖ ರುಸ್ತುಮಜಿಯವರ ಮಗನಾದ ಶ್ರೀ ಸೊರಾಬಜಿ ರುಸ್ತುಮಜಿಯವರು ಅದರ ಮುಂದಾಳುಗಳಾಗಿದ್ದಾರೆ.

ಸತ್ಯಾಗ್ರಹದ ಗತ್ತುಗಾರಿಕೆ

ಶಿಷ್ಟಮಂಡಲ ಗಾಂಧೀಜಿಯನ್ನು ಅನೇಕ ಸಾರಿ ಕಂಡು ಮಾತಾಡಿತ್ತು. ಅದರ ಕೊನೆಯ ಭೆಟ್ಟಿ ದಿಲ್ಲಿಯ ಭಂಗೀ ವಸತಿಯಲ್ಲಿ ಆಯಿತು. ಯಶಸ್ವಿಯಾಗಬಲ್ಲ ಸತ್ಯಾಗ್ರಹವನ್ನು ಪ್ರಾರಂಭಿಸುವ ಬಗೆಗೆ ಅವರು ಗಾಂಧೀಜಿಯ ಸಲಹೆಯನ್ನು ಕೋರಿದರು. ಮಾಲಿಕತೆಯ ಕಾಲಕ್ಕೆ ಗಾಂಧೀಜಿ ಅವರಲ್ಲಿರುವ ಭಿನ್ನಾಭಿಪ್ರಾಯಗಳ ಮಾತೆತ್ತಿದರು. ಭಿನ್ನಾಭಿಪ್ರಾಯಗಳ ಇರವನ್ನು ಅವರೊಪ್ಪಿಕೊಂಡರೂ ಅವು ಗಾಂಧೀಜಿಯ ಕಾಲದಲ್ಲಿ ಕೂಡ ಇದ್ದೇ ಇದ್ದುವೆಂದು ಸಾಧಿಸಿದರು.

"ಅಂದಿಗೂ ಇಂದಿಗೂ ಒಂದು ಭೇದವುಂಟು" ಎಂದು ಗಾಂಧೀಜಿ ವಿವರಿಸತೊಡಗಿದರು. "ಅಂದಿನ ದಿನಗಳಲ್ಲಿ ಕರಿಗಾಲಿನ ಮನೆಮುರುಕರು ಬಹಳ ಬೇಗನೆ ಮೂಲೆಗೆ ಬಿದ್ದುಬಿಡುತ್ತಿದ್ದರು. ಎಲ್ಲೆಡೆಗಳಲ್ಲಿಯೂ ಪ್ರಚಂಡ ಸಭೆಗಳನ್ನು ಜರಗಿಸಲು ಸಾಧ್ಯವಾಗಿತ್ತು. ಪಾರಸಿ ರುಸ್ತುಮಜಿಯವರು ಕರಾರುಬದ್ಧ ಕೂಲಿಕಾರರೊಡನೆ ಓಡಾಡುತ್ತಿದ್ದರು. ಅದರಿಂದ ಕೊನೆಯ ಹೋರಾಟದಲ್ಲಿ ಅವರೆಲ್ಲ ಒಂದೇ ವ್ಯಕ್ತಿಯೋ ಎಂಬಂತೆ ಎದ್ದು ನಿಂತರು. ಈ ಇತಿಹಾಸವನ್ನು ಪುನರಾವರ್ತಿಸಿರಿ ಅಂದರೆ ನೀವು ಗೆಲ್ಲುವಿರಿ. ಪುನರಾವರ್ತಿಸಲಿಲ್ಲವೋ ನೀವು ಸೋಲುವಿರಿ. ಎಲ್ಲ ಹಿತಸಂಬಂಧಗಳ ಸಹಾನುಭೂತಿ ಸಹಾಯಗಳು ನಿಮಗೆ ಇವೆಯೊ? ವ್ಯಾಪಾರಿ ಸಮಾಜ ನಿಮ್ಮ ಬೆಂಬಲಕ್ಕಿದೆಯೋ? ಗಾಂಧೀಜಿ ಕೇಳಿದರು.

"ವ್ಯಾಪಾರಿ ಸಮಾಜ ಆ ಕಾಲದಲ್ಲಿ ಕೂಡ ನಮ್ಮೊಡನೆ ಸೇರಲಿಲ್ಲ" ಎಂದು ಸೊರಾಬಜಿಯವರ ಉತ್ತರ.

"ಆದರೆ ನಮ್ಮೊಡನೆ ಕಚಾಲಿಯಾ ಇದ್ದರು," ಗಾಂಧೀಜಿ ನೆನಪು ಮಾಡಿಕೊಟ್ಟರು. "ನಿಮ್ಮ ಗೂಡ ಒಬ್ಬ ಕಚಾಲಿಯಾ ಇದ್ದರೆ ಇಡಿ ವ್ಯಾಪಾರಿ ಸಮಾಜವೆ ಇದ್ದಂತೆ."

"ಯಾವನೊಬ್ಬ ವ್ಯಾಪಾರಿಯೂ ಮುಂದೆ ಬರಲಿಲ್ಲವೆಂದು ಎಣಿಸ್ರಿಕೊಳ್ಳಿರಿ. ಆಗ ಹೋರಾಟವೇ ಸಾಧ್ಯವಿಲ್ಲವೆ?" ಸೋರಾಬಜಿ ಕೇಳಿದರು.

"ಹಾಗಾದರೆ ಅದು ಬೇರೆಯೇ ಹಾದಿ ಹಿಡಿದು ಸಾಗುವದು. ಕೊನೆಗೆ ವ್ಯಾಪಾರಿ ಸಮಾಜವೇ ಅಳಿದು ಹೋಗುವದು."

"ಒಮ್ಮೊಮ್ಮೆ ನಮ್ಮ ಸಮಾಜವನ್ನು ಸಂಬಾಳಿಸುವದು ಬಹಳ ತೊಡಕಿನದಾಗಿ ಬಿಡುವದುಂಟು." ಎಂದು ಶಿಷ್ಟಮಂಡಲದ ಸದಸ್ಯರು ಹೇಳಿದರು.

"ಜಗಳಗಂಟ ಸಮಾಜವೂ ಹೌದು?" ಇನ್ನೊಬ್ಬರ ಟೀಕೆ.

"ನನಗೆ ಗೊತ್ತು" ಗಾಂಧೀಜಿಯೆಂದರು "ಇಂದಿನ ದಕ್ಷಿಣ ಆಫ್ರಿಕೆ ನನ್ನರಿಕೆಯ ದಕ್ಷಿಣ ಆಫ್ರಿಕೆಗಿಂತ ಬಹಳೇನೂ ಭಿನ್ನವಾಗಿಲ್ಲ. "ಇಂಡಿಯನ್ ಒಪಿನಿಯನ್" ಪತ್ರಿಕೆಯಲ್ಲಿ ನಾನು ಬರೆದ ಮೊಟ್ಟಮೊದಲ ಲೇಖದಲ್ಲಿಯೇ ನಾನು ಹೇಳಿದ್ದು. ದಕ್ಷಿಣ ಅಫ್ರಿಕೆಯಲ್ಲೆಲ್ಲ ಒಬ್ಬನೇ ಒಬ್ಬ ಸತ್ಯಸಂಧ ಮನುಷ್ಯನಿದ್ದರೂ ಅವನು ಎಲ್ಲರನ್ನು ಸರಿತೂಗಬಲ್ಲನು. ಅವನು ಒಳಗಿಂದಲೇ ಇಡೀ ಕಟ್ಟಡವನ್ನ ಕಟ್ಟುವನು. ವನು' ಎಂದು. 'ಖೊಟ್ಟಿ ನಾಣ್ಯಗಳ ಇಡಿ ರಾಶಿಯಲ್ಲಿ ಒಂದೇ ಒಂದು ಚಿನ್ನದ ಮೊಹರು ಇದ್ದರೆ ಆ ಇಡೀ ರಾಶಿಯ ಬೆಲೆ ಆ ಮೊಹರಿನಷ್ಟೇ ಹೊರತು ಒಂದು ಕವಡೆ ಹೆಚ್ಚಿಗಲ್ಲ' ಎಂದು ನಾನು ಬರೆದಿದ್ದೆ. ಯೋಗ್ಯತಾನಂತರ ಒಂದು ಚಿಕ್ಕ ಯಾದಿಯನ್ನು ಸಿದ್ಧಗೊಳಿಸಬಲ್ಲವರಾದರೆ ನೀವು ಹೇಗಾದರೂ ಸಾಗಿಸಿಕೊಂಡು ಹೋಗಬಲ್ಲಿರಿ. ಆದುದರಿಂದ ಆ ತಿರುಳಿಲ್ಲದಿರುವವರೆಗೆ ನೀವು ಹೋರಾಟಕ್ಕಿಳಿಯಬೇಡಿರಿ. ಬದುಕಲೆಂದೋ ನೀವು ಹೇಗಾದರೂ ಬದುಕಬಲ್ಲಿರಿ. ಆದರೆ ಅದರಿಂದ ನೀವು ತೃಪ್ತರಾಗಬಾರದು. ನೀವು ಸ್ವಾಭಿಮಾನಿ ಸಮಾಜವಾಗಿ ಸಮಾನ ಸ್ಥಾನಮಾನಗಳಿಂದ ಬಾಳಬೇಕಾಗಿದೆ. ಹಿಂದೀಯರು ನಿಜವಾದ ತಿರುಳನ್ನು ತೋರುವ ಮೂಲಕ ಆ ಸ್ಥಾನಮಾನಗಳನ್ನು ಪಡೆಯಬೇಕಾಗಿದೆ"

ಆ ಮೇಲೆ ಮುಂಬರುವ ಸತ್ಯಾಗ್ರಹದ ಗತ್ತುಗಾರಿಕೆಯ ಕಡೆಗೆ ಮಾತು ಹೊರಳಿತು. ರೇಲ್ವೆ ಡಬ್ಬಿಗಳಲ್ಲಿ ಪ್ರತಿಬಂಧಿತ ಆಸನಗಳಲ್ಲಿ ಕೂತುಕೊಳ್ಳುವ ಮೂಲಕ ಸತ್ಯಾಗ್ರಹ ನಡೆಸುವದಕ್ಕೆ ಗಾಂಧೀಜಿ ಸ್ಫುಟವಾಗಿ ವಿರೋಧ ವ್ಯಕ್ತಗೊಳಿಸಿದರು. ಸತ್ಯಾಗ್ರಹವು ಸ್ಪಟ, ನಿಸ್ಸಂದಿಗ್ಧ ಮತ್ತು ವೈಯಕ್ತಿಕವಲ್ಲದ ವಿಷಯದ ಮೇಲೆ ನಡೆಯಬೇಕು. ಅದು ತನ್ನ ಆಶ್ರಯದಲ್ಲಿ ಸಾವಿರಾರು ಜನರನ್ನು ಸೇರಿಸಿಕೊಳ್ಳುವ ಸಾಮರ್ಥ್ಯವುಳ್ಳುದಿರಬೇಕು.

ದೇಶೀಯರೊಡನೆ ಸಂಬಂಧ

ಬಳಿಕ ವಾರ್ತಾಲಾಪ ಹಿಂದೀ ಸಮಾಜಕ್ಕೂ ಆಫ್ರಿಕೆಯ ಮೂಲ ನಿವಾಸಿಗಳಿಗೂ ಇರಬೇಕಾದ ಸಂಬಂಧದತ್ತ ಸರಿಯಿತು. ಕೆಲ ಕಾಲ ಕೆಳಗೆ ಲಂಡನ್ನಿನಲ್ಲಿ ಕೂಡಿದ್ದ ಪಶ್ಚಿಮಾಫ್ರಿಕಾ ಮಂಡಲದ ಸಭೆಯೊಂದಕ್ಕೆ ತಾವು ಸಂದೇಶ ಕಳಿಸಲು ನಿರಾಕರಿಸಿದ ಸಂಗತಿಯನ್ನು ಗಾಂಧೀಜಿ ಹೇಳಿದರು. ಆ ಮಂಡಲದವರು ಯುರೋಪಿಯ ಪದ್ಧತಿಯನುಸರಿಸಿದ ಹೋರಾಟವನ್ನು ಚಿಂತಿಸುತ್ತಿದ್ದರು. "ಬಹುಶಃ ಅವರದು ಅಹಿಂಸಾಮಾರ್ಗವಿರಲಿಕ್ಕಿಲ್ಲ" "ಯಾರಾದರೂ ಕಪ್ಪು ಜನಾಂಗಗಳಿಗೆ ಸತ್ಯಾಗ್ರಹಾಯುಧವನ್ನು ಕೊಡದೆ ಹೋದರೆ ಅವುಗಳು ತಮ್ಮನ್ನು ಕಾಡುತ್ತಿರುವ ಬಿಳಿ ದಬ್ಬಾಳಿಕೆಗಾರರ ವಿರುದ್ಧ ಅತ್ಯಂತ ಹಿಂಸ್ರ ಪ್ರತೀಕಾರ ಮಾಡಲು ಒಂದು ದಿನ ಏಳದಿರವು" ಎಂದು ಗಾಂಧೀಜಿ ಭವಿಷ್ಯ ನುಡಿದರು.

"ನೀವಂದಿದ್ದೀರಿ, ನಾವು ಝುಲು ಮತ್ತು ಬಂಟು ಜನರಲ್ಲಿ ಸಹಾನುಭೂತಿ ತೋರಿಸಬೇಕೆಂದು. ಬಿಳಿಯರನ್ನು ವಿರೋಧಿಸುವ ಉಭಯ ಸಾಮಾನ್ಯ ಹೋರಾಟದಲ್ಲಿ ಅವರೊಡನೆ ನಾವು ಸೇರಿದಂತೆಯೇ ಇದರ ಅರ್ಥವಲ್ಲವೆ?" ಸದಸ್ಯರೊಬ್ಬರು ಕೇಳಿದರು.

"ಹೌದು, ಝುಲು, ಬಂಟು ಮೊದಲಾದ ಜನರಲ್ಲಿ ಸಹಾನುಭೂತಿ ವ್ಯಕ್ತಗೊಳಿಸಬೇಕೆಂದು ನಾನು ಹೇಳಿದ್ದೇನೋ ನಿಜ. ನೀವು ಆ ಅಹಿಂಸಾ ಶಕ್ತಿಯನ್ನು ವಿಕಾಸಗೊಳಿಸಿದ ನಂತರ ಅವರನ್ನು ಅದರ ನೆರಳಿನ ಕೆಳಗೆ ತರಬೇಕೆಂದು ಅದರ ಅರ್ಥ. ಅವರಲ್ಲಿ ಅಹಿಂಸೆಯ ಸ್ಫೂರ್ತಿಯನ್ನು ನೀವು ಹುರಿಗೊಳಿಸಬಲ್ಲಿರಾದರೆ ಒಳಿತಾಯಿತು. ನೀವು ಅವರ ಪರಿತ್ರಾತರಾಗುವಿರಿ. ಬದಲಿಗೆ ನೀವೇ ಹಿಂಸೆಗೆ ಮನಸೋತರೆ ಅದು ನಿಮ್ಮ ಹಾಗೆಯೆ ಅವರ ಸರ್ವನಾಶವೇ ಸರಿ."

ಇಂದು ನಮ್ಮ ಘೋಷಣೆ ಬರಿ "ಏಶಿಯಾಟಿಕರಿಗಾಗಿ ಏಶಿಯಾ" ಅಥವಾ "ಆಫ್ರಿಕನ್ನರಿಗಾಗಿ ಅಫ್ರಿಕಾ" ಎಂದಿರದೆ ಭೂಮಿಯ ಸಮಸ್ತ ಶೋಷಿತ ಜನಾಂಗಗಳ ಐಕ್ಯವೇ ಆಗಿದೆ. ಇಂದು ಎಲ್ಲ ಶೋಷಿತ ಜನಾಂಗಗಳಿಗೆ ದಾರಿ ತೋರುವ ಹೊಣೆ ಹಿಂದುಸ್ತಾನದ ಮೇಲೆ ಬಿದ್ದಿದೆ. ಇಂದಿಗಿಂತಲೂ ಹೆಚ್ಚಾಗಿ ನಮ್ಮಲ್ಲಿ ಅಹಿಂಸೆಯ ಶಕ್ತಿ ಸಂಚಾರವಾಗದಿದ್ದರೆ ಹಿಂದುಸ್ತಾನ ಆ ಭಾರವನ್ನು ಹೊರಲಾರದು. ಆ ಮಹಾ ದೈವೋದ್ದಿಷ್ಟ ಕಾರ್ಯಕ್ಕಾಗಿ ನಾವು ಸಿದ್ಧಸಮರ್ಥರಾಗಬೇಕೆಂದೇ ನಾನು ನಮ್ಮ ಹೋರಾಟಕ್ಕೆ ವಿಶಾಲತರ ಸ್ವರೂಪವನ್ನು ಕೊಡುತ್ತಿದ್ದೇನೆ. ವಿದೇಶಿ ನಿಯಂತ್ರಣದಿಂದ ಬಿಡುಗಡೆಯನ್ನು ಸಂಪಾದಿಸಿದೊಡನೆ ಅಹಿಂಸೆಯನ್ನು ಬದಿಗಿರಿಸದೆ, ತನ್ನ ಸ್ವಂತದ ವಿಷಯದಲ್ಲಿ ಅಹಿಂಸೆಯ ತತ್ವವನ್ನು ಆಚರಣೆಯಲ್ಲಿಟ್ಟುಕೊಂಡರೆ ಮಾತ್ರ ಹಿಂದುಸ್ತಾನ ಜಗತ್ತಿನ ಶೋಷಿತ ಜನಾಂಗಗಳಿಗೆ ದೀವಟಿಗೆ ಹಿಡಿದು ದಾರಿತೋರಬಲ್ಲದು ಎಂದು ಗಾಂಧೀಜಿ ನುಡಿದರು.

"ದಕ್ಷಿಣ ಆಫ್ರಿಕೆಯಲ್ಲೆಲ್ಲ ಸ್ವವರ್ಣಾಭಿಮಾನದ ಜಾಗ್ರತಿಯಾಗತೊಡಗಿದೆ" ಎಂದು ಶಿಷ್ಟಮಂಡಲದ ಇನ್ನೊರ್ವ ಸದಸ್ಯರೆಂದರು. ನಾವು ಹಿಂದೀಯರು ಬಂಟುಗಳ ಪ್ರಯೋಜನ ಪಡೆಯುತ್ತೇವೆ. ನಮ್ಮ ಮಕ್ಕಳನ್ನು ದೇಶೀಯರ ಕಾಲೇಜಗಳಿಗೆ ಕಳಿಸುತ್ತೇವೆ. ಆದರೆ ನಾವು ಸ್ವತಃ ದೇಶೀಯರೆನಿಸಿಕೊಳ್ಳಲು ನಾಚುತ್ತೇವೆ. ಅವರಿಗೆ ನಾವು ಬಹಳ ಅಹಂಕಾರಿಗಳೂ ಮಡಿವಂತರೂ ಇರುವಂತೆ ಭಾಸವಾಗುತ್ತದೆ. ನಾವು ಅವರಿಂದ ಪಡೆದ ಪ್ರಯೋಜನಕ್ಕೆ ಯೋಗ್ಯ ಪ್ರತ್ಯುಪಕಾರವನ್ನು ಮಾಡುವದಿಲ್ಲ. ಇದರಿಂದ ಅವರಲ್ಲಿ ದ್ವೇಷ ಉತ್ಪನ್ನವಾಗುತ್ತಿದೆ. ಅದಕ್ಕೆ ಗಾಳಿ ಹಾಕಿ ಬಿಳಿ ಮನುಷ್ಯನು ಹಬ್ಬಿಸುತ್ತಿದ್ದಾನೆ. ನಮ್ಮ ನಮ್ಮಲ್ಲಿನ ಭೇದಭಾವಗಳನ್ನು ಇನ್ನಷ್ಟು ಅಗಲಿಸಲು ಪ್ರಯತ್ನಿಸುತ್ತಿದ್ದಾರೆ"

"ಇದರಲ್ಲಿ ಅವನು ಯಶಸ್ವಿಯಾದರೆ ಅದೇ ನಿಮ್ಮ ದುರ್ದಿನ" ಎಂದರು ಗಾಂಧಿಜಿ "ತೊಂದರೆಯ ಮೂಲವೆಂದರೆ ನೀವೆಲ್ಲರೂ ಧನಲಕ್ಷ್ಮಿಯ ಪೂಜಕರಾಗಿರುವಿರಿ"

"ಅವಳನ್ನು ನೋಡದೇ ಇರುವ ನಾವು ಅವಳನ್ನು ಹೇಗೆ ಆರಾಧಿಸುವೆವು?" ಎಂದು ನಡುವೆ ನುಡಿದರು ಶ್ರೀ ಕ್ರಿಸ್ಟೋಫರ್

"ಆರಾಧಿಸುವದು ಬೇರೆ, ನೋಡುವದು ಬೇರೆ ದೇವರನ್ನು ನೋಡದಿದ್ದರೂ ನಾವು ಆರಾಧಿಸುವದಿಲ್ಲವೆ?" ಗಾಂಧೀಜಿಯ ಮಾರ್ನುಡಿ

ಮುಂದಾಳುಗಳನ್ನು ನಿರ್ಮಿಸಿಕೊಳ್ಳಿರಿ

ತಮ್ಮನ್ನು ಸಂಘಟಿಸಿ, ದಾರಿತೋರಲು ಒಬ್ಬ ಮುಂದಾಳುವನ್ನು ಹಿಂದುಸ್ತಾನದಿಂದ ಕಳಿಸಬಹುದೇ ಎಂದು ಶಿಷ್ಟಮಂಡಲದವರು ಕೇಳಿದರು ಗಾಂಧೀಜಿಯೆಂದರು. "ಮುಂದಾಳು ನಿಮ್ಮೊಳಗಿಂದಲೇ ಉದ್ಭವಿಸಬೇಕು. ಸಕಾಲದಲ್ಲಿ ಅಂಥ ಮುಂದಾಳೊಬ್ಬನನ್ನು ಉಂಟುಮಾಡುವದು ನಿಮಗೆ ಸಾಧ್ಯವಾದೀತೆಂದು ಆಶಿಸುವೆ." ತಮ್ಮ ಮಗ ಮಣಿಲಾಲರೊಡನೆ ಅವರ ಮಕ್ಕಳನ್ನು ಈ ಕೆಲಸಕ್ಕೆ ತರಬೇತುಗೊಳಿಸಬೇಕೆಂದು ತಾವು ವಾದಿಸುತ್ತಿದ್ದುದನ್ನ ಗಾಂಧೀಜಿ ತಿಳಿಸಿದರು ಹಿಂದುಸ್ತಾನದಲ್ಲಿ ಅವರ ಶಿಕ್ಷಣ ಮುಗಿದನಂತರ ಅವರು ದಕ್ಷಿಣ ಆಫ್ರಿಕೆಗೆ ಹೋಗಿ ನೆಲಸಿ ಅಲ್ಲಿನ ಹಿಂದೀ ಸಮಾಜದ ಸೇವೆಯಲ್ಲಿ ನಿರತರಾಗಬೇಕೆಂದು ಗಾಂಧೀಜಿಗೆ ಆಶೆಯಿದೆ.

ಈ ಸೇವೆಗಾಗಿ ದಕ್ಷಿಣ ಆಫ್ರಿಕೆಯಲ್ಲಿ ಹುಟ್ಟಿದ ಹಿಂದೀ ಮಕ್ಕಳನ್ನು ತರಬೇತುಗೊಳಿಸು ಮಾತು ಬಂದಾಗ ತಾವೇ ತಮ್ಮ ಮಕ್ಕಳನ್ನು ಲವ್ ಡೇ ಮತ್ತು ಫೋರ್ಟ ಹೇರ್‌ಗಳಿಗೆ ಕಳಿಸಲು ನಿರಾಕರಿಸಿದ್ದನ್ನು ಗಾಂಧೀಜಿ ಉಲ್ಲೇಖಿಸಿದರು.

ದಿಲ್ಲಿ — ಪ್ಯಾರೇಲಾಲ

೮—೫—೪೬

—೪ ನೇ ಪುಟ ನೋಡಿರಿ

ಕಾಂಗ್ರೆಸ ವರ್ಕಿಂಗ ಕಮಿಟಿಯ ಸಭೆಯು ಶುಕ್ರವಾರ ಮಧ್ಯಾಹ್ನ ೩ ಗಂಟೆಗೆ ಕೂಡಿ ಮಂತ್ರಿತ್ರಯರ ಪ್ರಕಟನೆಯ ಬಗ್ಗೆ ಚರ್ಚೆ ಮಾಡಿತು. ಕಾಂಗ್ರೆಸ್ ವರಿಷ್ಠರಾರೂ ಈ ಪ್ರಕಟನೆಯ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಲಿಲ್ಲ. ಚರ್ಚೆಯ ನಂತರ ಕಾಂಗ್ರೆಸ್ ಅಧ್ಯಕ್ಷರು ಅಧಿಕೃತ ಪ್ರಕಟನೆ ಕೊಡುವರು.

ಕರ್ನಾಟಕ ಕಾಂಗ್ರೆಸ ಸಮಿತಿ

ಶ್ರೀ ನಿಜಲಿಂಗಪ್ಪನವರು ಹೊಸ ಅಧ್ಯಕ್ಷರು

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಸಮಿತಿಯ ಸಭೆ ಶುಕ್ರವಾರ ೧೭ ನೇ ತಾರೀಕು ಮುಂಜಾನೆ ೯ ಗಂಟೆಗೆ ಸೇರಿ ಮೈಸೂರು ಕಾಂಗ್ರೆಸ ಸಮಿತಿಯ ಅಧ್ಯಕ್ಷರಾದ ಶ್ರೀ ಸಿದ್ದವನಹಳ್ಳಿ ನಿಜಲಿಂಗಪ್ಪನವರನ್ನು ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆರಿಸಲಾಯಿತು. ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಶ್ರೀ ನಿಜಲಿಂಗಪ್ಪ ಕೆ. ಟಿ. ಭಾಷ್ಯಂ, ಎಚ್. ಕೆ. ವೀರಣ್ಣಗೌಡ, ರಂಗನಾಥ ದಿವಾಕರ, ಗುದ್ಲೆಪ್ಪ ಹಳ್ಳಿಕೇರಿ, ಕಮಲಾದೇವಿ, ಶ್ರೀನಿವಾಸ ಮಲ್ಯ, ಚನಬಸಪ್ಪ ಅಂಬಲಿ, ರಾಜಾರಾಮ ದುಬೆ ಮತ್ತು ಅನಂತರಾವ ಮುಂಡಗಿ ಈ ಹತ್ತು ಜನರು ಅವಿರೋಧವಾಗಿ ಆರಿಸಿ ಬಂದರು. ಕಾರ್ಯದರ್ಶಿಗಳನ್ನು ಮತ್ತು ಕಾರ್ಯನಿರ್ವಾಹಕ ಸಮಿತಿಯ ಸದಸ್ಯರನ್ನು ಆರಿಸಿಕೊಳ್ಳುವ ಅಧಿಕಾರವನ್ನು ಅಧ್ಯಕ್ಷರಿಗೆ ಕೊಡಲಾಯಿತು. ಏ ಆಯ ಸಿ ಸಿ ಕಾರ್ಯಕ್ರಮದಂತೆ ಈ ಸಭೆ ೧೬ ನೇ ತಾರೀಖು ಮಧ್ಯಾಹ್ನ ೩ ಗಂಟೆಗೇ ಕೂಡುವದಿದ್ದಿತು. ಆಗ ಕೂಡದೆ ೫॥ ಗಂಟೆಗೆ ಕೂಡುವದೆಂದು ಹೇಳಲಾಯಿತಂತೆ ೫॥ಗಂಟೆಗೂ ಕೂಡದೆ ೬॥ ಗಂಟೆಗೆ ಕೂಡುವದೆಂದು ಹೇಳಿದರಂತೆ ಅನಂತರ ಸದಸ್ಯರಾರು ಸದಸ್ಯರಾರಲ್ಲ ಎಂಬುದೆ ತಮಗೆ ಗೊತ್ತಾಗದ್ದರಿಂದ ಸಭೆಯನ್ನು ಶುಕ್ರವಾರ ಮುಂಜಾನೆ ೯ ಗಂಟೆಗೆ ಮುಂದುವರಿಸುವೆನೆಂದು ಅಧ್ಯಕ್ಷರು ಸಾರಿದರಂತೆ. ಅವರ ಹೇಳಿಕೆಯ ಪ್ರಕಾರ ಶುಕ್ರವಾರ ಸಭೆ ಸೇರಿತು. ಈ ಸಭೆಗೆ ಪತ್ರಿಕಾ ಪ್ರತಿನಿಧಿಗಳಿಗೆ ಪ್ರವೇಶವಿರಲಿಲ್ಲ. ಪ್ರವೇಶ ಪತ್ರಿಕೆಯನ್ನು ಕಳಿಸಿ ಕೊಡಿರೆಂದು ನಾವು ಕಾರ್ಯದರ್ಶಿಗಳಿಗೆ ಬರೆದುಕೊಂಡರೂ ಅದಕ್ಕೆ ಅವರು ಉತ್ತರ ಕೂಡ ಕಳಿಸಲಿಲ್ಲ. ಆದುದರಿಂದ ಕಾರ್ಯಕಲಾಪಗಳ ವಿವರವಾದ ವರ್ಣನೆ ಕೊಡುವದಾಗಲಿಲ್ಲ. ಮೈಸೂರಿನ ೨೨ ಜನ ಸದಸ್ಯರ ಸದಸ್ಯತ್ವವನ್ನು ರದ್ದುಪಡಿಸಿದ್ದರ ಬಗ್ಗೆ, ಅಧ್ಯಕ್ಷ ಮೊದಲಾದವರ ಆಯ್ಕೆಯನ್ನು ಪ್ಯಾನೆಲ್ ಮೂಲಕ ಆರಿಸಬೇಕೆಂಬ ಬಗ್ಗೆ ಮತ್ತು ಈ ಸಭೆ ಕ್ರಮಬದ್ಧವಾಗಿದೆಯೊ ಇಲ್ಲವೊ ಎಂಬ ಬಗ್ಗೆ ಸಭೆಯಲ್ಲಿ ತೀಕ್ಷ್ಣವಾದ ಚರ್ಚೆಯಾಯಿತೆಂದು ತಿಳಿಯುತ್ತದೆ.

ಸ್ವರಾಜ್ಯದ ಉಪೇಕ್ಷೆ?

(೭ನೇ ಪುಟದಿಂದ)

ರಾಟೆ ಇಡಲು ಸ್ಥಳ ವಿಲ್ಲದಿದ್ದರೆ ತಕಲಿಯು ಯಾವಾಗಲೂ ಇದ್ದೇ ಇದೆ. ಧನುಷ್ಯ ತಕಳಿಗೆ ಕಡಮೇ ಸ್ಥಳ ಬೇಕಾಗುವದು. ಒಬ್ಬ ವ್ಯಕ್ತಿಗೆ ಅನ್ವಯಿಸುವ ಅಡಚಣೆಗಳು ಎಲ್ಲರಿಗೂ ಬರುವವು. ಅಡಚಣೆಗಳಿಂದ ಎದೆಗುಂದದೆ ಅವನ್ನು ಹೊಡೆದುಹಾಕುವದೇ ಸ್ವರಾಜ್ಯ ಸೋಪಾನವಾಗಿದೆ. ಅವಶ್ಯಕತೆಯೇ ಆವಿಷ್ಕಾರದ ಮೂಲ.

ಖಾದೀ ಭಾಂಡಾರದವರು ಒದಗಿಸುವ ಅರಳೆ ಹಿಂಜುವ ಹಂಜಿ ಹಾಕುವ ಮತ್ತು ನೂಲುವ ಸೌಕರ್ಯಗಳ ಉಪಯೋಗವನ್ನು ಏಕೆ ಮಾಡಿಕೊಳ್ಳಬಾರದು? ಹಂಜಿ ಮಾಡುವ ಹೊಸ ಪದ್ಧತಿಗೆ ಹೆಚ್ಚು ಸ್ಥಳದ ಅವಶ್ಯಕತೆಯಿಲ್ಲ, ಅದಷ್ಟೊಂದು ಕಠಿನವೂ ಇಲ್ಲ.

ನೈನೂಲಿನ ದಾರದಲ್ಲಿಯೆ ಸ್ವರಾಜ್ಯ ಸಂಬದ್ಧವಾಗಿದೆಂದು ವಿಶ್ವಾಸ ನೂಲುವವನಿಗೆ ಇರತಕ್ಕದ್ದು ಮುಖ್ಯವಾಗಿದೆ. ಈ ಬಗೆಯ ವಿಶ್ವಾಸವಿಲ್ಲದಿದ್ದವನು ನೂಲುವದನ್ನು ಬಿಟ್ಟುಗೊಟ್ಟರೂ ದೇಶವಿಘಾತವೇನೂ ಆಗುವದಿಲ್ಲ. ಅನೇಕ ಜನರು ನೂಲುವದರಿಂದ ಮತ್ತು ನೇಯುವದರಿಂದ ತಮ್ಮ ಜೀವನ ಸಾಗಿಸಿಕೊಳ್ಳುವರು. ಖಾದಿಯು ಬಡವರಿಗೆ ಈ ಸಾಮರ್ಥ್ಯವನು ಕೊಡುತಿದೆ. ಆದರೆ ಕೋಟ್ಯವಧಿ ಜನರಿಗೆ ಮಾತ್ರ ಅದು ಉಪಜೀವನದ ಸಾಧನವಾಗಲಾರದು.

ಸಿಮಲಾ — ಮೋ. ಕ. ಗಾಂಧಿ

೧೩—೫—೪೬

[ಹರಿಜನ ಬಂಧುವಿನಿಂದ]

ಹೃದಯಮಂಥನ

ಕೆಲ ದಿನಗಳ ಹಿಂದೆ ಇಂಗ್ಲಿಶ್ ಸಂಚಾರಿಯೊಬ್ಬನು ಗಾಂಧೀಜಿಯವರಿಗೆ ಅಂದನು " ಕೊನೆಗೊಮ್ಮೆ ನಾವು ನಿಮ್ಮ ಹೆಗಲ ಮೇಲಿಂದ ಇಳಿಯಲನುವಾಗಿರುವೆವೆಂದು ನಿಮಗೆ ಇನ್ನಾದರೂ ನಂಬಿಕೆ ಬಂತೆ ? '' ಎಂದು ಕೇಳಿದನು

"ನಿಮ್ಮ ಸದುದ್ದೇಶದ ಬಗ್ಗೆ ನಮಗೆಳ್ಳಷ್ಟೂ ಸಂದೇಹವಿಲ್ಲ ಆದರೆ ಅದಕ್ಕಾಗಿಬೇಕಾದ ಶಕ್ತಿ ಮತ್ತು ಧೈರ್ಯ ನಿಮ್ಮಲ್ಲಿದೆಯೋ ಇಲ್ಲವೊ ಎಂಬುದೆ ಮಹತ್ವದ ಪ್ರಶ್ನೆಯಾಗಿದೆ. ಸಂಪ್ರದಾಯಬದ್ಧ ವಿಚಾರ ಮತ್ತು ಕೃತಿಗಳಿಂದ ಮುಕ್ತರಾಗುವದು ಬಹಳ ಕಠಿಣವಾಗಿದೆ' ಎಂದು ಗಾಂಧೀಜಿ ಉತ್ತರಿಸಿದರು. "ನಾವಾಗಿಯೇ ಒತ್ತಾಯದಿಂದ ಸಮಸ್ಯೆಯ ಪರಿಹಾರವನ್ನು ಹೇರಲು ಬಯಸಬಾರದು. ಹಿಂದುಸ್ತಾನವೇ ಅದನ್ನು ನಿರ್ಧರಿಸಿಕೊಳ್ಳಲಿಕ್ಕೆ ಬೇಕು. ಅಭೂತಪೂರ್ವ ಬರಗಾಲದಿಂದ ದೇಶವು ತತ್ತರಿಸುತ್ತಿರುವಾಗ ದೇಶವನ್ನು ಗಂಡಾಂತರದಲ್ಲಿ ನೂಕಲು ಯಾರೂ ಬಯಸರು" ಎಂದು ಆ ಸಂಚಾರಿ ಜೋಡಿಸಿದನು.

ಹಿಂದುಸ್ತಾನಕ್ಕೆ ನಿಮ್ಮ ಆಳಿಕೆಯಿಂದ ಕಲ್ಯಾಣವಾಗಿದೆಂಬ ಭಾವನೆಯನ್ನು ನೀವು ಎಲ್ಲಿಯವರೆಗೆ ಇಟ್ಟುಕೊಳ್ಳುವಿರೋ ಅಲ್ಲಿಯವರೆಗೆ ಈ ಬಗೆಯ ಅಡಚಣಿ ನಿಮಗೆ ಎನಿಸುವದು ನಿಮಗಾರಿಗೂ ಈ ಬಗೆಯ ವಿಶ್ವಾಸವಿಲ್ಲೆಂದು ಗಾಂಧೀಜಿ ಉತ್ತರಿಸಿದರು.

" ಇದರ ವಿರುದ್ಧ ಒಂದೆರಡು ಉದಾಹರಣೆ ಉಂಟು " ಎಂದನು ಆ ಸಂಚಾರಿ

" ಅದು ಇಲ್ಲಿಯೂ ಇಲ್ಲ ಅಲ್ಲಿಯೂ ಇಲ್ಲ " ಎಂದರು ಗಾಂಧೀಜಿ. " ನನಗೆ ಹಿಂದೊಮ್ಮೆ ಹಾಗೆ ಭಾವನೆಯಿದ್ದಿತು. ಹಿಂದುಸ್ತಾನಕ್ಕೆ ಏನಾದರೂ ಲಾಭವಾಗಿದ್ದರೆ ಅದು ಪರಕೀಯ ಆಡಳಿತದ ಪರಿಣಾಮದಿಂದಲ್ಲ. ಆದರೆ ಗಟ್ಟಿಗ ಜನರೊಡನೆ ಬಂದ ಸಂಬಂಧದ ಪರಿಣಾಮವದು. ಆ ಲಾಭ ಆಕಸ್ಮಿಕ ಸಂಭವಿಸಿದುದು. ಆದರೆ ಪರಕೀಯ ಆಡಳಿತೆಯಿಂದಾದ ಅಕಲ್ಯಾಣ ಕಲ್ಯಾಣಕ್ಕಿಂತ ಬಹಳ ಹೆಚ್ಚಿಗೆ ಇದೆ. ಹಿಂದುಸ್ತಾನದಲ್ಲಿ ಜಾತೀಯ ವಿಭಜನೆಯನ್ನು ಮಾಡಿದ್ದು ಬ್ರಿಟಿಶರ ಕೈವಾಡವೇ ಎಂಬುದಕ್ಕೆ ಪ್ರತ್ಯಕ್ಷ ಪುರಾವೆಗಳು ಬೇಕಾದಷ್ಟಿವೆ. ಇಂದು ನಾವು ಅನುಭವಿಸುತ್ತಿರುವ ಬರಗಾಲವೂ ನಿಮ್ಮದೆ ಪ್ರಸಾದ" ಎಂದರು ಗಾಂಧೀಜಿ.

ಕೊನೆಯ ವಾಕ್ಯದಿಂದ ಆ ಇಂಗ್ಲಿಶ್ ಸಂಚಾರಿ ಬೆಚ್ಚಿಬಿದ್ದ. ತಮ್ಮ ಶಬ್ದಗಳಿಂದುಂಟಾದ ಪರಿಣಾಮವನ್ನು ಗಾಂಧೀಜಿ ನಿರೀಕ್ಷಿಸಿದರು. " ನನ್ನ ಶಬ್ದಗಳ ನಿಜಾರ್ಥವನ್ನು ಚನ್ನಾಗಿ ತಿಳಿದುಕೊಳ್ಳಿರಿ. ಬರಗಾಲಕ್ಕೆ ಪರಮಾತ್ಮನೇ ಕಾರಣನಿರಬಹುದು. ಆದರೆ ಸರ್ವಸನ್ನದ್ಧ ರಾಷ್ಟ್ರವು ಕೊರತೆಯ ಕಾಲವನ್ನು ಹೇಗಾದರೂ ಎದುರಿಸಬಲ್ಲುದು. ಅದಕ್ಕೆ ಆಹುತಿಯಾಗಿ ಅಸಹಾಯಕರಂತೆ ಪ್ರಾಣ ಕಳೆದುಕೊಳ್ಳಲಾರದು ಹಿಂದುಸ್ತಾನದಲ್ಲಿಯ ಇಂದಿನ ಬರಗಾಲಗಳು ಕೇವಲ ಅನಾವೃಷ್ಟಿ ಮೂಲಕ ನಿರ್ಮಿತವಾದುದಲ್ಲ. ಆದರೆ ಇಂಥ ಅನಾವೃಷ್ಟಿ ಕಾಲವನ್ನು ಕ್ರಮಿಸುವುದಕ್ಕಾಗಿ ಯೋಗ್ಯ ವ್ಯವಸ್ಥೆ ಮಾಡದಿದ್ದುದೆ ಇದಕ್ಕೆ ಕಾರಣ ಮೇಲಿಂದ ಮೇಲೆ ಬರುತಿರುವ ಬರಗಳಿಂದ ಜನರನ್ನು ರಕ್ಷಿಸುವದಕ್ಕಾಗಿ ಯಾವ ಉಪಾಯಗಳನ್ನೂ ಕೈಕೊಂಡಿಲ್ಲ. ದಕ್ಷಿಣ ಆಫ್ರಿಕೆಯನ್ನು ನೋಡಿರಿ. ಅಲ್ಲಿ ಅವರು ಮಿಡಚಿ ಹಾವಳಿಯನ್ನು, ಅನಾವೃಷ್ಟಿಯ ಪಿಡುಗನ್ನು ಯಶಸ್ವಿಯಾಗಿ ಹೋರಾಡುತಿರುವರು. ಅದಕ್ಕಾಗಿ ಬೇಕಾದಷ್ಟು ಸಂಗ್ರಹವನ್ನು ಕಾಯ್ದಿಡುತಿರುವರು. ಆದರೆ ಹಿಂದುಸ್ತಾನದಲ್ಲಿಯೇ ಬರಬಿದ್ದಿತೆಂದರೆ ಕೇವಲ ಮಳೆರಾಜನನ್ನು ಶಪಿಸುತ್ತ ಕೂಡುವರು ಅದನ್ನು ಪರಿಹರಿಸುವದಕ್ಕಾಗಿ ಯಾವ ಉಪಾಯಗಳನ್ನು ಮಾಡುವದಿಲ್ಲ," ಎಂದರು ಗಾಂಧೀಜಿ.

"ಬ್ರಿಟಿಶರು ಇಲ್ಲದಿದ್ದರೆ ಹಿಂದುಸ್ತಾನವು ಬರಗಾಲವನ್ನೆದುರಿಸುವದಕ್ಕೆ ಇದಕ್ಕೂ ಹೆಚ್ಚು ಸನ್ನದ್ಧವಾಗುತ್ತಿದ್ದಿತೇ " ಎಂದನು ಆ ಇಂಗ್ಲಿಷ ಮನುಷ್ಯ.

"ಹೌದು'' ಎಂದುತ್ತರಿಸಿದರು ಗಾಂಧೀಜಿ "ರೇಲ್ವೆ ಮೊದಲಾದವುಗಳಿಲ್ಲದಿಲ್ಲ….." ಎಂದೂ ಅಂದರು.

ಆ ಸಂಚಾರಿಗೆ ಇದು ಮತ್ತೊಂದು ಆಘಾತವಾಗಿದ್ದಿತು. ಉಳಿದ ಅನೇಕ ಪಾಶ್ಚಾತ್ಯರಿಗಂತೂ ಈ ಇಂಗ್ಲಿಷ ಮನುಷ್ಯನ ಬಗ್ಗೆ ಒಳ್ಳೆ ಅಭಿಮಾನವಿದ್ದು ಹಿಂದುಸ್ತಾನದಲ್ಲಿ ಬರದ ಬಾಧೆಯನ್ನು ತಪ್ಪಿಸಲು ಅತ್ಯಂತ ಸಹಾಯಕವೆಂದು ಭಾವಿಸಿದ್ದನು. ಅಂತೆಯೇ ಅವನಿಗೆ ಹೆಚ್ಚು ಆಘಾತ. ಆದರೆ ರ್‍ಯಾಮಸೆ ಮ್ಯಾಕ್ಡೊನಾಲ್ಡರು ಅಭಿಪ್ರಾಯ ಪಡುತ್ತಿದ್ದಂತೆ ಹಿಂದುಸ್ತಾನದಲ್ಲಿ ಮೇಲಿಂದ ಮೇಲೆ ಬರಗಾಲ ಬೀಳುವದಕ್ಕೆ ರೇಲ್ವೆಗಳೇ ಮುಖ್ಯ ಕಾರಣವೆಂದು ಗಾಂಧೀಜಿಯವರು ಭಾವಿಸುತ್ತಿರುವರು ಅವರು ಮುಂದುವರಿಯುತ್ತ ಹೀಗೆ ಅಂದರು– "ಹಿಂದುಸ್ತಾನದಲ್ಲಿ ರೇಲ್ವೆಗಳಿರದಿದ್ದರೆ ಮಧ್ಯಯುಗದಲ್ಲಿ ಇಂಗ್ಲಂಡ, ಯುರೋಪಗಳಂತೆ ನಾವೂ ಸ್ವಾಭಾವಿಕ ಪರಿಸ್ಥಿತಿಯಲ್ಲಿರುತ್ತಿದ್ದೆವು ಆಗ ಪ್ರತಿಯೊಬ್ಬ ರಾಜ, ಸರದಾರನ ಹತ್ತಿರ ದನಕರುಗಳು ಅವಶ್ಯಕ ಕಾಳುಕಡಿಗಳು ನೀರು ಇರುತ್ತಿದ್ದವು. ರೇಲ್ವೆಗಳು ಬರುವ ಮೊದಲು ಪ್ರತಿಯೊಂದು ಹಳ್ಳಿಯಲ್ಲಿ ಧಾನ್ಯದ ಕಣಜವಿರುತ್ತಿದ್ದಿತು. ಆ ಅರ್ಥದಲ್ಲಿ ನಾವು ಆಗ ಹೆಚ್ಚು ಸುಸಂಪನ್ನರಿದ್ದೆವು. ಅಲ್ಲದೆ ಅನಾವೃಷ್ಟಿಯಿಂದ ಬೆಳೆಗೇಡಾದರೆ ಮನೆಯಾರಿಗೆಯ ಧಂದೆಗಳನ್ನು ನಾವು ಮಾಡಹತ್ತುತ್ತಿದ್ದೆವು. ಆದರೆ ಈಗ ರೇಲ್ವೆಗಳಿಂದ ನಮ್ಮ ಹಳ್ಳಿ ಗ್ರಾಮಗಳಲ್ಲಿ ಬರಿದಾಗಿ ಹೋಗಿವೆ ಕೈಗಾರಿಕೆಗಳೂ ಹಾಳಾಗಿವೆ. ತನ್ನ ಉತ್ಪಾದನಕ್ಕೆ ಒಕ್ಕಲಿಗನಿಗೆ ಸಿಕ್ಕುತ್ತಿರುವ ಹಣವೆಲ್ಲ ನೀರಿನಂತೆ ವ್ಯಯವಾಗಿ ಹೋಗಹತ್ತಿದೆ. ಕಂದಾಯಾಧಿಕಾರಿ ಮತ್ತು ಆಯಾತ ಮಾಡಲ್ಪಟ್ಟ ಪರದೇಶೀ ಸರಕುಗಳಿಗೆ —ಈ ಸರಕುಗಳಿಲ್ಲದ ತನಗೆ ನಿರ್ವಾಹವೇ ಇಲ್ಲೆಂದು ಅವನು ಭಾವಿಸುತ್ತಾನೆ– ಆ ಒಕ್ಕಲಿಗನ ಆರ್ಥಿಕ ಪರಿಸ್ಥಿತಿಯ ಮೇಲೆ ಮಾಡಿದ ದಾಳಿಗಾಗಿ ಧನ್ಯವಾದಗಳನ್ನರ್ಪಿಸಬೇಕಾಗಿದೆ. 'ಧಾನ್ಯಗಳನ್ನು ಸಂಗ್ರಹಿಸಿಡಬೇಡಿ, ಬೆಳ್ಳಿಯನ್ನು ಸಂಗ್ರಹಿಸಬೇಡಿ' ರೆಂದು ಬ್ರಿಟಿಶರು ಒಕ್ಕಲಿಗರಿಗೆ ಹೇಳಿರುವರು ಕೊರತೆ ಕಾಲಕ್ಕೆಂದು ಯಾವದೇ ಬಗೆಯ ಏರ್ಪಾಡು ಮಾಡಿರುವದಿಲ್ಲ. ರೇಲ್ವೆಗಳೊಂದು ಬಗೆಯ ಜಾಲ, ಅಗ್ಗ ವಾಹನಸೌಕರ್ಯ, ಒಂದು ಬಗೆಯ ಬಲೆ. ಹಿಂದಿನ ಕಾಲಗಳಲ್ಲಿ ಸಂಸ್ಥಾನಿಕರು ದಬ್ಬಾಳಿಕೆ ನಡೆಸಿದರು. ಆದರೆ ಅದು ಇಷ್ಟು ಉಗ್ರವಾಗಿರಲಿಲ್ಲ. ರಾಜ್ಯವಿಪ್ಲವ ಪರಾವೃತ್ತಿ ಇಲ್ಲವೆ ಗುಳೇ ಹೋಗುವದು ಮೊದಲಾದ ಕಷ್ಟಪರಿಹಾರದ ಸಾಮಾನ್ಯ ಮಾರ್ಗಗಳು ಆಗ ಜನತೆಗೆ ಮುಕ್ತದ್ವಾರವಾಗಿದ್ದವು. ಆಗ ಜನರು ನಿಶ್ಶಸ್ತ್ರರಾಗಿದ್ದಿಲ್ಲ. ಇಂದಿನಂತೆ ನಿಃಶಸ್ತ್ರಗೊಳಿಸಲ್ಪಟ್ಟಿರಲಿಲ್ಲ. ಕಷ್ಟಗಳು ಸಾಮಾನ್ಯವಾಗಿದ್ದವು. ಆದರೆ ಇಂದಿನ ಕಷ್ಟ–ನಷ್ಟಗಳು ವಿಪರೀತವಾಗಿವೆ. ಕೆಲವೇ ಬ್ರಿಟಿಶ ಸೈನಿಕರು ಲಕ್ಷಾವಧಿ ಜನರನ್ನು ಬೆದರಿಸಬಲ್ಲರು. ಬ್ರಿಟಿಶ ಆಡಳಿತೆಯ ಫಲವಿದು. ಇದು ಅತ್ಯಂತ ಅನೈತಿಕ. ಬ್ರಿಟಿಶರು ಇದನ್ನರಿತುಕೊಳ್ಳಲಿಕ್ಕೆಬೇಕು ಮತ್ತು ಎರಡನೆಯವರಿಗೆ ದಾರ ಹಾಕಿಕೊಡುವ ರೀತಿಯಲ್ಲಿ ಅವರು ನಮ್ಮನ್ನು ಬಿಟ್ಟುಗೊಟ್ಟು ಹೋಗಬೇಕು. ರೋಗವು ದೇಹದಲ್ಲೆಲ್ಲ ಧೇನಿಸಿದ್ದು ಅದನ್ನು ಹೊರತೆಗೆಯಲು ಚರ್ಮವನ್ನು ಕಿತ್ತೊಗೆಯಬೇಕಾದರೂ ಚಿಂತೆಯಿಲ್ಲ. ಅವರು ಇಲ್ಲಿಂದ ಹೊರಟಿದ್ದು ಹೋಗಲಿಕ್ಕೆ ಬೇಕು. ಯಾದವೀ ಕಲಹದಲ್ಲಿ ಕೆಲ ಲಕ್ಷ ಜನರು ಸಾಯಬಹುದು. ಆದರೆ ಕೊನೆಗೆ ನಿಜವಾದ ಶಾಂತಿ ಪ್ರಸ್ಥಾಪಿತವಾಗುವದು. ಅಹಿಂಸಾ ಮಾರ್ಗವನ್ನು ಸ್ವೀಕರಿಸಿರೆಂದು ನಾನು ಹಿಂದೀಯರ ಮನವೊಲಿಸಿದ್ದಾದರೆ ಎರಡೇ ದಿನಗಳಲ್ಲಿ ಪ್ರಶ್ನೆ ಬಗೆಹರಿಯಬಲ್ಲದು. ಇಲ್ಲದಿದ್ದರೆ ಬಹಳ ದಿನಗಳವರೆಗೆ ಕಷ್ಟವನ್ನನುಭವಿಸಬೇಕಾಗಬಹುದು. ಹಾಗಾದರೂ ಪರಕೀಯ ಆಡಳಿತದಿಂದ ಉಂಟಾದ ವಿನಾಶದಷ್ಟು ವಿನಾಶವು ಆಗಲಾರದು. ಆಗ ಹಿಂದುಸ್ತಾನಕ್ಕೆ ಬಾಳಲು ಇಲ್ಲವೆ ಮಡಿಯಲು ತನ್ನದಾದ ವಸ್ತು ಸಿಕ್ಕಂತಾಗುವದು. ಈಗ ಭಾರತೀಯರು ಏತಕ್ಕಾಗಿ ಬಾಳಬೇಕು ಸಾಯಬೇಕು?

" ಹಿಂದುಸ್ತಾನವನ್ನು ಕ್ರಾಂತಿಮಯ ಪರಿಸ್ಥಿತಿಯಲ್ಲಿಟ್ಟು ಹೋರಟಿದ್ದು ಹೋಗುವದು ಬಹಳ ದೊಡ್ಡ ಹೊಣೆಗಾರಿಕೆ " ಇನ್ನೂ ತಡವರಿಸುತ್ತ ಆ ಸಂಚಾರಿ ನುಡಿದನು.

"ಯದ್ವದನೆವದಿಂದ ಹೊರಡಲು ಸಿದ್ಧರಾಗಿದ್ದ ಹೊಣೆಗಾರಿಕೆಗಿಂತ ಇನ್ನೇನು ಹೆಚ್ಚಿನ ಹೊಣೆಗಾರಿಕೆಯಲ್ಲ" ಎಂದು ಗಾಂಧೀಜಿ ನುಡಿದು ತನ್ನ ಪ್ರತಿಪಾದನೆಯಲ್ಲಿಯ ವಿಸಂಗತತೆಯ ಬಗ್ಗೆ ಆ ಸಂಚಾರಿಗೆ ವಿಚಾರ ಮಾಡಹಚ್ಚಿ ಮಾತು ಮುಗಿಸಿದರು.

ದಿಲ್ಲಿ ಪ್ಯಾರೇಲಾಲ
೧೪-೫-೪೬

ನಿತ್ಯಸ್ಮರಣೆಗೆ

ಅನಾಮಧೇಯ ಗೆಳೆಯನೊಬ್ಬನು ಕ್ರಿಶ್ಚನ್ನರ "ಬುಕ್ ಅಫ್ ಜಾಬ್ಸ ಮತ್ತು ಸಾಮ್ಸ" ಪ್ರಾರ್ಥನಾ ಪುಸ್ತಕದಿಂದ ಕೆಲವು ಉಚಿತ ಶ್ಲೋಕ ಸಮುದಾಯಗಳನ್ನು ಆಯ್ದು ಕಳಿಸುವ ಉಪಕಾರ ಮಾಡಿದ್ದಾನೆ. ಅವು ನಮಗೆ ಯಾವಾಗಲೂ ನೆನವರಿಸಿಕೊಳ್ಳಲು ಯೋಗ್ಯವಾಗಿರುವುದರಿಂದ ಅವುಗಳನ್ನು ಸಂತೋಷದಿಂದ ಈ ಕೆಳಗೆ ಕೊಡುತ್ತೇನೆ. ಮನುಷ್ಯನು ಬರಿ ಮಣ್ಣು ಅಥವಾ ಹೆಚ್ಚೆಂದರೆ ಬರಿ ಹುಲ್ಲು. ಆದುದರಿಂದ ಈ ಪೃಥ್ವಿಯ ಮೇಲಿನ ಕೆಲಗಳಿಗೆಯ ಆಯುಷ್ಯವನ್ನು ಅವನು ತನ್ನ ಸಹಜೀವಿಗಳ ಸೇವೆಯಲ್ಲಿ ಕಳೆಯಲಿ. ಇದೇ ನಾನು ಈ ಶ್ಲೋಕಗುಚ್ಛದಲ್ಲಿ ಕಾಣುವ ಸದುಪದೇಶ. ಬೈಬಲ್ಲಿನ ಈ ಶ್ಲೋಕಗಳನ್ನು ಆಯ್ದದನು ಕರ್ಮ ಮಾತ್ರ ನಿಷ್ಫಲತೆಯನ್ನು ತೋರಿಸಲು ಇವನ್ನು ಸಂಗ್ರಹಿಸಿ ಕಳಿಸಿಲ್ಲವೆಂದು ನಂಬುತ್ತೇನೆ. ಏಕೆಂದರೆ ನಿಷ್ಕರ್ಮದ ಸಿದ್ಧಾಂತ, ಅಲಸ ಪರೋಪಜೀವನಗಳ ಸಿದ್ಧಾಂತವೆನಿಸುವದು.

ಕರ್ಮ

ಹೆಣ್ಣಿಂದ ಜನ್ಮಿಸಿದ ಮನುಜನ ಬಾಳು ಗಳಿಗೆಯಲಿ
ನಂದುವದು, ಕೋಟಲೆಯ ಗಡಣದಿಂ ತುಂಬಿ
ಹುದು;
ಹೂವಿನಂದದಿ ಬರುವನಾತ, ಅದರಂದದಲೆ ಹರಿ
ವುದಾತನ ಬದುಕು; ನೆರಳಿನಂದದ ಕಣ್ಮರೆಗೆ
ಸೇರುವನವನು, ಮುಂದೇನು ಬಾಳಲಾರ;
ಅವನ ದಿನಗಳ ನೀನು ಎಣಿಕೆ ಮಾಡುವಿ ಗೊತ್ತು,
ಅವನ ಮಾಸಾವಧಿಯ ನಿನ್ನ ಹಿಡಿಯೊಳಗಿಟ್ಟು;
ದೇವ, ಅವನ ಇತಿಮಿತಿಗಳನು ಅಳೆದು ಗೆರೆ
ಹಾಕಿರುವಿ, ಅದನಾತ ದಾಟಲಾರ;
ಗಿಡವೊಂದ ತರಿದರೂ ಅದಕೊಂದು ಆಸೆಯಿದೆ—
-ಚಿಗುರಿಯೊಂದು ಕೊನರೀತು, ತರಿದ
ಕೊಂಬೆಯ ಬದಿಗೆ, ಎಳೆ ಕೊನರು ಬಾಳೀತು
ಮುಂದೆ ಮುಂದೆ;
ಅದರ ಬೇರ್ನೆಲದೊಳಗೆ ಹಳೆವಾಗಿ ಲಡ್ಡಾದರೂ
ಕಾಂಡವದರದು ನೆಲದಿ ಕೊರಡಾಗೊರಗಿದರು,
ಆದರೂ ನೆಲದಿಂದ ನೀರ ಗಮಗಮ ಆರವಡೆದು
ಹೊಸ ಕೊಂಬೆಗಳ ಕೊನರ ಪಡೆದೀತು;
ಇತ್ತಲೀ ಮನುಜ ಸತ್ತೇನಹನು? ಕೊಳೆತು
ಮಣ್ಣಾಗುವನು;
ಆತ್ಮ ಹೊರವಂಟ ಮೇಲೆಲ್ಲಿಹನು - ಈ ಮನುಜ?
ಕಡಲಿಂದ ನೀರಿಳಿದು ಹೋಹಂತೆ, ನೆರೆನೀರು
ಝರ್ರನಿಳಿದಾರುವಂತೆ;
ಅಂತು ಒರಗುವನು ನರ, ಏಳಲಾರ, ಗಗನ
ಪ್ರಳಯದಿ ಮಾಯವಾಗುವನ್ನವು ಅವನಿಗೆ
ಗದೆಚ್ಚರಿಕೆ, ಅವನ ನಿದ್ದೆಯ ಹರಿದು ಯಾರಾ
ವನನೆಬ್ಬಿಸಲು ಆರರಿಲ್ಲ.

ಪ್ರಾರ್ಥನೆ

ನನ್ನ ಗುರಿಯೇನೆಂದು, ನನ್ನ ದಿನದಳವೆನಿತೆಂದು
ಅರಿವ ನೀಡೆಲೆ ದೇವ; ಅದರಿಂದೆ ನಾನರಿವೆ
ನನ್ನ ಭಂಗುರತೆಯನು.
ಅರಿವೆಯೈ ನೀನೆನ್ನ ದಿನವ ಗೇಣುದ್ದ ಮಾಡಿಹೆ
ಯೆಂದು; ನನ್ನಾಯುಷ್ಯ ನಿನ್ನೆದುರು ತುಚ್ಛ
ವೆಂದು; ಎಲ್ಲ ಮನುಜರು ಪರಮಾವಸ್ಥೆಯಲಿ
ಕೂಡ ಪೂರ್ಣ ಬರಿ ಮಾಯೆಯೆಂದು;
ಏಕೆನಲು ನಮ್ಮಳವ ಪರಮಾತ್ಮರಿಗೆ; ನಾವು
ಬರಿ ಮಣ್ಣೆಂದು ಅವಗಿಲ್ಲ ಮರವು;
ಮನುಜನೋ? ಅವನಬಾಳ್ ಹುಲ್ಲಿನಂದದ ಬಾಳು,
ಹೊಲದೊಳಗಿನೊಂದು ಹೂವೆನಲು ಅವನರಳಿ
ರುವ;
ಬಿರುಗಾಳಿ ಬೀಸಿದರೆ ಅದು ಹೇಳಹೆಸರಿಲ್ಲ; ಅದು
ಅರಳಿದಾ ತಾಣದಲಿ ಕುರುಹು ಕಾಣಲು
ಸಿಗದು.

ಸಿಮುಲಾ
೧೪-೫-೪೬ ಮೋ. ಕ. ಗಾಂಧಿ

ನಿಶ್ಚಯ ಫಲದಾಯಕ ಉಪಾಯ

ಒಬ್ಬಾನೊಬ್ಬ ಪತ್ರಲೇಖಕನು ಆತ್ಮನಿಗ್ರಹಕ್ಕೆ ಮೂರುಬಗೆಯ ಉಪಾಯಗಳನ್ನು ಸೂಚಿಸಿದ್ದಾನೆ. ಅವುಗಳಲ್ಲೆರಡು ಬಾಹ್ಯ, ಇನ್ನೊಂದು ಆಂತರಿಕ ಉಪಾಯಗಳು ಅಂತರಿಕೋಪಾಯವನ್ನು ಅವನು ಹೀಗೆ ಬಣ್ಣಿಸಿದ್ದಾನೆ:-

"ಆತ್ಮನಿಗ್ರಹಕ್ಕೆ ಸಹಾಯ ಮಾಡುವ ಮೂರನೆಯ ಸಾಧನವೆಂದರೆ ರಾಮನಾಮ. ಮನುಷ್ಯನ ಕಾಮತೃಷ್ಣೆಯನ್ನು ಪರಮಾತ್ಮ ಸಾಕ್ಷಾತ್ಕಾರದ ದಿವ್ಯ ತೃಷ್ಣೆಯನ್ನಾಗಿ ಮಾರ್ಪಡಿಸುವ ಅದ್ಭುತ ಶಕ್ತಿ ರಾಮನಾಮದಲ್ಲಿದೆ. ವಾಸ್ತವಿಕವಾಗಿ, ಹೆಚ್ಚು ಕಡಿಮೆ ಎಲ್ಲ ಮನುಷ್ಯ ಪ್ರಾಣಿಗಳಲ್ಲಿಯೂ ಇರುವ ಕಾಮೇಚ್ಛೆಯೆಂಬುದು ಇಚ್ಛಾನುಸಾರ ಬೆಳೆದ ರೂಪಗೊಳ್ಳಲಾಬಿಟ್ಟ ಕುಂಡಲಿನೀ ಶಕ್ತಿಯ ಒಂದಂಶವಿರಬೇಕೆಂದು ನನಗೆ ಅನುಭವದಿಂದ ತೋರಿಬಂದಿದೆ. ಸೃಷ್ಟಿ ಮೊದಲ್ಗೊಂಡು ಈವರೆಗೂ ಮನುಷ್ಯನು ಪ್ರಕೃತಿಯ ವಿರುದ್ಧ ಹೋರಾಡುತ್ತ ಬಂದಿರುವಂತೆ, ತನ್ನ ಕುಂಡಲಿನಿಯ ಸ್ವಾಭಾವಿಕ ಸ್ವೇಚ್ಛಾವಿಲಾಸದ ವಿರುದ್ಧವೂ ಹೋರಾಡಿ ಅದು ಅಧೋಗತಿಗೆ ತಿರುಗದೆ ಊರ್ಧ್ವಮುಖವಾಗಿ ಹರಿಯುವಂತೆ ಮಾಡುವದು ಅವನ ಕರ್ತವ್ಯ. ಕುಂಡಲಿನಿ ಶಕ್ತಿ ಒಮ್ಮೆ ಮೇಲ್ಮೊಗವಾಗಿ ಹರಿಯತೊಡಗಿದರೆ ಅದರ ಗುರಿ ಮೆದುಳಿನ ಕಡೆಗೆ ಆಗುವದು ಆಮೇಲೆ ಅಂಥ ಮನುಷ್ಯನಿಗೆ ಮೆಲ್ಲಮೆಲ್ಲನೆ ಬೆಳಕು ಕಾಣಿಸಿ ತಾನೂ ತನ್ನ ಸುತ್ತಲೂ ಇರುವ ದೃಶ್ಯಜಗತ್ತೂ ಒಂದೇ ಪರತತ್ವದ ವಿವಿಧ ಅಭಿವ್ಯಕ್ತಿಗಳೆಂದು ಗೋಚರವಾಗುವದು.

ರಾಮನಾಮ ನಿಶ್ಚಿತವಾದ ಉಪಾಯವೆಂಬಲ್ಲಿ ಸಂದೇಹವೇ ಇಲ್ಲ. ಹೃದಯದಿಂದ ಅದನ್ನು ಧ್ಯಾನಿಸಿದರೆ ಅದು ಎಲ್ಲ ದುರ್ವಿಚಾರಗಳನ್ನೂ ಮನಸ್ಸಿನಿಂದ ಉಚ್ಚಾಟಿಸಿ ನಾಶಿಸುತ್ತದೆ. ದುರ್ವಿಚಾರ ಹೊರಟುಹೋದ ಮೇಲೆ ದುರಾಚಾರಕ್ಕೆ ಎಡೆಯೇ ಇಲ್ಲ ಮನ ದುರ್ಬಲವಾಗಿದ್ದರೆ ಹೊರ ಉಪಾಯಗಳೆಲ್ಲ ನಿಷ್ಫಲ. ಮನಸ್ಸು ಶುದ್ಧವಾಗಿದ್ದರೆ ಅವು ಅನಾವಶ್ಯಕ. ಮನಶ್ಶುದ್ಧಿಯುಳ್ಳವನು ಬೇಕುಬೇಕಾದಂತೆ ಆಚರಿಸಿಯೂ ನಿರಾಪದನಾಗಿ ಉಳಿಯಬಲ್ಲನೆಂದು ಇದರ ಅರ್ಥವಲ್ಲ. ಅಂಥ ಮನುಷ್ಯನು ಸರ್ವಥಾ ಸ್ವೇಚ್ಛಾಚಾರಕ್ಕಿಳಿಯುವದೇ ಇಲ್ಲ. ಅವನ ಸಮಸ್ತ ವೃತ್ತಿಗಳೂ ಅವನ ಒಳ ಪರಿಶುದ್ಧತೆಯ ಪ್ರಮಾಣಸ್ವರೂಪಗಳಾಗಿರುವವು. ಮನಸ್ಸೇ ಮನುಷ್ಯನ ಬಂಧಮೋಕ್ಷಗಳ ಕಾರಣವೆಂದು ಗೀತೆ ಹೇಳುವದು ಅಕ್ಷರಶಃ ನಿಜ. "ಮನಸ್ಸು ತಂತಾನೆ ಸ್ವರ್ಗವನ್ನು ನರಕವನ್ನಾಗಿಯೂ ನರಕವನ್ನು ಸ್ವರ್ಗವನ್ನಾಗಿಯೂ ಮಾಡಬಲ್ಲದು" ಎಂದು ಹೇಳಿದ ಮಿಲ್ಟನ್ನನು ಮೇಲಿನ ಭಾವವನ್ನೆ ಅನುವಾದಿಸಿದ್ದಾನೆನ್ನಬಹುದು.

ಸಿಮುಲಾ, ಮೋ. ಕ. ಗಾಂಧಿ
೨-೫-೪೬

ಸಿಮುಲೆಯ ವಾಲ್ಮೀಕಿಗಳು

"ವಾಲ್ಮೀಕಿ"ಯೆಂಬುದು "ಭಂಗಿ"ಯೆಂಬುದರ ಪರ್ಯಾಯವಾಚಿಯೆಂದು ಓದುಗರಿಗೆ ಗೊತ್ತಿರಬಹುದು. ಸಿಮುಲೆಯಲ್ಲಿ ಅವರ ವಸತಿಗಳು ಕರುಣಾಜನಕವಾಗಿವೆ. ಅವರನ್ನು ಕುರಿತು ಹಚ್ಚಿಕೊಳ್ಳುವವರು ಯಾರೂ ಇಲ್ಲ ರಾಜಕುಮಾರಿಯವರು ಅನೇಕ ವರ್ಷಗಳಿಂದ ಅವರಿಗಾಗಿ ಶಕ್ತಿಮೀರಿ ಹೆಣಗುತಿದ್ದಾರೆ. ಆದರೆ ಒಂದೇ ವ್ಯಕ್ತಿಯ ಕೈಯಿಂದ ಎಷ್ಟು ಸಾಧಿಸೀತು? ಭಂಗೀ ವಸತಿಯಿರುವಷ್ಟು ದೂರ ಹೋಗಿ ಕಣ್ಣಾರ ನೋಡಲು ನನಗೆ ಸಾಧ್ಯವಾಗಿಲ್ಲ. ಆದರೆ ನನ್ನೊಡನೆ ಇಳಿದುಕೊಂಡಿರುವ ಬಾದಶಾಖಾನರಿಗೆ ಅಲ್ಲಿ ಹೋಗಿ ನೋಡಿ ಬರಲು ಕೇಳಿಕೊಂಡೆ. ಅವರು ಆ ಜನರ ಗುಡಿಸಲುಗಳ ಬಗೆಗೆ ಮರುಕ ಹುಟ್ಟಿಸುವಂಥ ವರದಿಯನ್ನು ಕೊಟ್ಟರು. ಕೆಲ ಜನ ವಾಲ್ಮೀಕಿಗಳು ನನ್ನನ್ನು ಕಾಣಲು ಬಂದಿದ್ದರು. ಅವರು ನನ್ನ ಮುಂದೆ ಹೇಳಿಕೊಂಡ ದೂರುಗಳು ವಿಷಾದಮಯವಾಗಿವೆ. ಮೊಟ್ಟಮೊದಲು ಅವರ ವಸತಿಗಳನ್ನು ಬಿಚ್ಚಿ ಪುನಃ ಕಟ್ಟಿದರೆ ಅವರ ಬೇರೆ ಎಷ್ಟೋ ದೂರುಗಳು ಕೂಡ ಪರಿಹಾರವಾದಾವೆಂದು ನನಗನಿಸುತ್ತದೆ. ಈ ಕೇಡನ್ನು ಸಾಧ್ಯವಿದ್ದಷ್ಟು ಬೇಗ ನಿವಾರಿಸುವದು ಸಿಮುಲೆಯ ಸಾರ್ವಜನಿಕರ ಹಾಗೆಯೆ ನಗರ ಸಭೆಯವರ ಆದ್ಯ ಕರ್ತವ್ಯವಾಗಿದೆ. ಅವರು ಸ್ವತಃ ಎಷ್ಟೇ ಸ್ವಚ್ಛರಾಗಿದ್ದರೂ ಅವರ ನಡುವೆ ಅಸ್ವಚ್ಛ ಜನರಿರುವಷ್ಟು ಕಾಲ ಅವರ ಸ್ವಚ್ಛತೆ ಸ್ವಚ್ಛತೆಯೇ ಅಲ್ಲ.

ಸಿಮುಲಾ (ಹರಿಜನ ಸೇವಕದಿಂದ)
೧೪-೫-೪೬ ಮೋ. ಕ. ಗಾಂಧಿ

ಹಿಂದುಸ್ತಾನಕ್ಕೆ ಯೂನಿಯನ್ ಸರಕಾರ

ಪಾಕಿಸ್ತಾನಕ್ಕೆ ಸಮ್ಮತಿಸುವದು ಸಾಧ್ಯವಿಲ್ಲ — ಆದರೆ ಪ್ರಾದೇಶಿಕ ಗುಂಪುಗಳನ್ನು ಮಾಡಿಕೊಳ್ಳಬಹುದು — ಒಡನೆ ನಡುಗಾಲ ಸರಕಾರದ ಸ್ಥಾಪನೆ — ಬ್ರಿಟಿಶ ಮಂತ್ರಿಗಳ ಘೋಷಣೆ

ಸಿಮಲೆಯಲ್ಲಿ ಸೇರಿದ ತ್ರಿಪಕ್ಷ ಪರಿಷತ್ತು ಅಯಶಸ್ವಿಯಾದ ನಂತರ ಬ್ರಿಟಿಶ ಮಂತ್ರಿತ್ರಯರು ಬ್ರಿಟಿಶ ಮಂತ್ರಿಗಳೊಡನೆ ವಿಚಾರವಿನಿಮಯ ಮಾಡಿ ಹಿಂದೇಸ್ತಾನದ ಭಾವೀ ರಾಜ್ಯಘಟನೆಯ ಬಗೆಗೆ ತಮ್ಮ ಸೂಚನೆಗಳನ್ನು ಸಿದ್ಧಗೊಳಿಸಿದರು. ಆ ಸೂಚನೆಗಳು ಬ್ರಿಟಿಶ ಸರಕಾರದ ಸಂಪೂರ್ಣ ಸಮ್ಮತಿಯೊಡನೆ ಗುರುವಾರ ತಾ. ೧೬ ಕ್ಕೆ ಹಿಂದುಸ್ತಾನದಲ್ಲಿಯೂ ಇಂಗ್ಲಂಡಿನಲ್ಲಿಯೂ ಏಕಕಾಲಕ್ಕೆ ಪ್ರಸಿದ್ಧಿಸಲ್ಪಟ್ಟವು.

ಬ್ರಿಟಿಶ ಘಟನಾತ್ಮಕ ಸೂಚನೆಗಳು ಆರು ಮುಖ್ಯ ವಿಭಾಗಗಳಲ್ಲಿದ್ದು ಅವುಗಳ ಪ್ರಮುಖ ಅಂಶಗಳೆಂದರೆ, ಹಿಂದುಸ್ತಾನಕ್ಕೊಂದು ಯೂನಿಯನ್ ಸರಕಾರವಿರಬೇಕು, ಪ್ರಾಂತಗಳಿಗೆ ತಮ್ಮವೇ ಘಟನೆಗಳನ್ನು ರಚಿಸಿ ಗುಂಪು ಕಟ್ಟಿಕೊಳ್ಳುವ ಅಧಿಕಾರವಿರಬೇಕು, ಘಟನಾ ಸಮಿತಿಯನ್ನು ಆದಷ್ಟು ಬೇಗನೆ ಪ್ರಾಂತಿಕ ಶಾಸನ ಸಭೆಗಳು ಆರಿಸಬೇಕು. ಮತ್ತು ಕೇಂದ್ರದಲ್ಲಿ ಒಡನೆ ನಡುಗಾಲ ಸರಕಾರ ಸ್ಥಾಪಿಸಲ್ಪಡಬೇಕು ಎಂಬುದಾಗಿವೆ.

ಪಾಕಿಸ್ತಾನ ಸರ್ವವಿಧದಿಂದಲೂ ಅವ್ಯವಹಾರ್ಯವೆಂದು ಹೇಳಿ ಲೀಗ್ ಬೇಡಿಕೆಯನ್ನು ನಿರಾಕರಿಸಲಾಗಿದೆ.

ಸಿಮಲೆಯ ದುರ್ದೈವ

"ಸಿಮಲೆಯ ಹನ್ನೆರಡು ಜನರು" ಬ್ರಿಟಿಶ ಪತ್ರಿಕೆಯೊಂದು ಹೇಳಿದಂತೆ, "ಅಯಶಸ್ವಿಗಳಾದರೆ"ಂದು ಶನಿವಾರ (ತಾ. ೧೧) ಅಧಿಕೃತ ಪ್ರಕಟನೆಯೊಂದು ಹೊರಟಿತು. ಜವಾಹರ-ಜಿನ್ನಾ ಭೆಟ್ಟಿ ಮತ್ತೊಮ್ಮೆ ಆದರೂ ಫಲ ಮಾತ್ರ ದೊರೆಯಲಿಲ್ಲ. ಆದರೆ ಗುರುವಾರ ಒಂದು ಮಹತ್ವದ ಸರಕಾರಿ ಪ್ರಕಟನೆ ಹೊರಡುವದೆಂದೂ ಈ ಕುರಿತು ಆತುರದಿಂದ ಟೀಕಾ ಟಿಪ್ಪಣಿಗಳನ್ನು ಮಾಡಬಾರದೆಂದೂ ವಿನಂತಿಸಿ ಕೊಳ್ಳಲಾಗಿತ್ತು. ಗಾಂಧೀಜಿಯೂ ಜವಾಹರಲಾಲರೂ ಸ್ವಾತಂತ್ರ್ಯ ಸಮೀಪಿಸುತ್ತಿದೆಯೆಂದು ಜನರಿಗೆ ಹೇಳುತ್ತ ಬಂದರು. ಹಿಂದುಸ್ತಾನದ ಪ್ರಮುಖ ಪಕ್ಷಗಳು ಕೊನೆಗೂ ಒಮ್ಮತಕ್ಕೆ ಬಾರದಿದ್ದುದರಿಂದ ಬ್ರಿಟಿಶ ಮಂತ್ರಿತ್ರಯರು ತಮ್ಮ ನಿರ್ಣಯವನ್ನು ಕೊಡುವರೆಂದು ಹೇಳಲಾಗಿತ್ತು. ದುರ್ದೈವಿ ಸಿಮಲೆಯಿಂದ ಮಂತ್ರಿಗಳು ಹೊಸದಿಲ್ಲಿಗೆ ಬಂದು ತಮ್ಮ ನಿರ್ಣಯವನ್ನು ಸಿದ್ಧಗೊಳಿಸಿದರು. ಗುರುವಾರ ದಿನ ಸಂಜೆ ೮ ಗಂಟೆಯ ನಂತರ ಅದು ಹಿಂದುಸ್ತಾನದಲ್ಲಿಯೂ ಬ್ರಿಟಿಶ ಪಾರ್ಲಮೆಂಟಿನಲ್ಲಿಯೂ ಏಕಕಾಲಕ್ಕೆ ಘೋಷಿಸಲ್ಪಟ್ಟಿತು.

ಘೋಷಣೆಯ ವಿವರಗಳು

ಬ್ರಿಟಿಶ ಪಾರ್ಲಮೆಂಟಿನಲ್ಲಿ ಪ್ರಧಾನಮಂತ್ರಿ ಅಟ್ಲಿಯವರು ೬ ವಿಭಾಗಗಳನ್ನು ಘೋಷಣೆಯಲ್ಲಿ ಓದಿದರು. ಹಿಂದುಸ್ತಾನದ ಘಟನಾತ್ಮಕ ಸಮಸ್ಯೆಯನ್ನು ಪ್ರಮುಖ ಪಕ್ಷಗಳಿಗೆಲ್ಲ ಒಪ್ಪಿಗೆಯಾಗುವಂತೆ ಬಿಡಿಸಬೇಕೆಂದು ಬ್ರಿಟಿಶ ಮಂತ್ರಿತ್ರಯರು ಮಾಡಿದ ಪ್ರಯತ್ನಗಳು ಅಯಶಸ್ವಿಯಾದುದನ್ನುಲ್ಲೇಖಿಸಿ, ಮಂತ್ರಿತ್ರಯರು ಭಾರತದ ಪ್ರಮುಖ ಪಕ್ಷಗಳ ಅವಗಾಹನೆಗಾಗಿ ನಿಷ್ಪಕ್ಷಪಾತ ಚಿಂತನೆಯ ನಂತರ ಸಿದ್ಧಗೊಳಿಸಿದ ಷಡಂಗ ಯೋಜನೆಯನ್ನು ಅವರು ಸಭೆಯ ಮುಂದಿಟ್ಟರು.

ಆ ಆರು ಅಂಗಗಳ ಸಾರ ಈ ಕೆಳಗಿನಂತಿದೆ-:

(೧) ವಿದೇಶ, ಸಂಪರ್ಕ ಮತ್ತು ಸಂರಕ್ಷಣ ಖಾತೆಗಳ ಅಧಿಕಾರ ಮತ್ತು ಅವುಗಳಿಗೆ ಬೇಕಾದ ವೆಚ್ಚಕ್ಕೆ ಹಣ ಕೂಡಿಸುವ ಅಧಿಕಾರವುಳ್ಳ ಒಂದು ಅಖಿಲಭಾರತ ಯೂನಿಯನ್ ಸರಕಾರ ವಿರಬೇಕು. ಅದರಲ್ಲಿ ಬ್ರಿಟಿಶ ಪ್ರಾಂತಗಳೂ ಹಿಂದೀ ಸಂಸ್ಥಾನಗಳೂ ಸೇರಿರಬೇಕು.

(೨) ಯೂನಿಯನ್ ಸರಕಾರಕ್ಕೆ ಒಂದು ಕಾರ್ಯಕಾರಿ ಮಂಡಲವೂ ಒಂದು ಶಾಸನಸಭೆಯೂ ಇರಬೇಕು, ಇವೆರಡರಲ್ಲೂ ಪ್ರಾಂತಗಳ ಮತ್ತು ಸಂಸ್ಥಾನಗಳ ಪ್ರತಿನಿಧಿಗಳಿರಬೇಕು. ಯೂನಿಯನ್ ಶಾಸನ ಸಭೆಯಲ್ಲಿ ಯಾವುದೊಂದು ಮಹತ್ವದ ಜಾತೀಯ ಪ್ರಶ್ನೆಯ ನಿರ್ಣಯವಾಗಬೇಕಾದರೆ ಅಂದು ಹಾಜರಿದ್ದು ಮತದಾನ ಮಾಡಿದವರ ಒಟ್ಟು ಬಹುಮತ ಮಾತ್ರವಲ್ಲ, ಹಾಜರಿದ್ದ ಪ್ರಮುಖ ಜಾತಿಗಳಲ್ಲಿ (ಕಾಂಗ್ರೆಸ ಮತ್ತು ಲೀಗ!) ಪ್ರತಿಯೊಂದರ ಸದಸ್ಯರ ಬಹುಮತ ದೊರೆತಿರಬೇಕು.

(೩) ಮೇಲಿನ ಮೂರು ಅಧಿಕಾರಗಳಲ್ಲದೆ ಉಳಿದ ಎಲ್ಲ ಅಧಿಕಾರಗಳೂ ಪ್ರಾಂತಗಳ ಅಧೀನದಲ್ಲಿ ಉಳಿಯುವವು.

(೪) ಸಂಸ್ಥಾನಗಳಲ್ಲಿ ಯೂನಿಯನ್ ಸರಕಾರಗಳಿಗೆ ಸೇರಿದ ವಿಷಯಗಳನ್ನು ಬಿಟ್ಟು ಇತರ ಎಲ್ಲ ವಿಷಯಗಳೂ ಸಂಸ್ಥಾನಗಳಿಗೇ ಉಳಿಯುತ್ತವೆ

(೫) ಪ್ರಾಂತಗಳು ತಮ್ಮ ಗುಂಪುಗಳನ್ನು ಕಟ್ಟಿಕೊಳ್ಳಲು ಸ್ವತಂತ್ರವಾಗುವವು. ಯಾವ ಪ್ರಾಂತಿಕ ವಿಷಯಗಳನ್ನು ಸಾಮಾನ್ಯ ವಿಷಯಗಳೆಂದು ಆ ಗುಂಪುಗಳೇ ನಿರ್ಣಯಿಸಿಕೊಳ್ಳಬಹುದು.

(೬) ಯೂನಿಯನ್ ಸರಕಾರದ ಮತ್ತು ಗುಂಪುಗಳ ಸರಕಾರದ ಘಟನೆಗಳ ಕಲಮುಗಳ ಪುನರ್ವಿಮರ್ಶೆಯಾಗಬೇಕೆಂದು ಯಾವದೇ ಪ್ರಾಂತವು ತನ್ನ ಶಾಸನ ಸಭೆಯ ನಿರ್ಣಯಮೂಲಕ ಬಯಸಿದರೆ, ಮೊದಲಿನ ೧೦ ವರ್ಷಗಳ ನಂತರ ಮತ್ತು ಆ ಮೇಲೆ ಪ್ರತಿ ೧೦ ವರ್ಷಗಳ ಅಂತರದಲ್ಲಿ ಅಂಥ ಪುನರ್ವಿಮರ್ಶೆಗೆ ಅವಕಾಶವಿರಬೇಕು.

ಘಟನಾ ಸಮಿತಿ

ಹಿಂದುಸ್ತಾನದ ರಾಜ್ಯಘಟನೆಯ ಬಗ್ಗೆ ಪ್ರಮುಖ ಭಾರತೀಯ ಪಕ್ಷಗಳಲ್ಲಿ ಒಡಂಬಡಿಕೆಯನ್ನು ತಂದೊಡ್ಡುವದು ಸಾಧ್ಯವಾಗದ್ದರಿಂದ ಬ್ರಿಟಿಶ ಮಂತ್ರಿತ್ರಯರು ಭಾವಿ ರಾಜ್ಯ ಘಟನೆಯ ಮುಖ್ಯ ಸೂತ್ರಗಳನ್ನಷ್ಟೆ ಇಲ್ಲಿ ಹೇಳಿದ್ದಾರೆ. ವಿವರಗಳನ್ನು ಬ್ರಿಟಿಶ ರಾಯಭಾರ ಹೇಳಬಯಸುವದಿಲ್ಲ. ಅದನ್ನು ಭಾರತೀಯರು ತಾವೇ ರಚಿಸಿಕೊಳ್ಳಲು ಸಾಧ್ಯವಾಗುವಂತೆ ಘಟನಾಸಮಿತಿಯನ್ನು ಸ್ಥಾಪಿಸುವದು ಮಂತ್ರಿಗಳ ಉದ್ದೇಶ. ಪ್ರೌಢ ಮತದಾನ ಪದ್ಧತಿಯಿಂದ ಪ್ರತಿನಿಧಿಗಳನ್ನು ಆರಿಸಿ ಕಳಿಸುವದೇ ಘಟನಾ ಸಮಿತಿಯ ರಚನೆಯ ಅತ್ಯಂತ ತೃಪ್ತಿಕರ ಮಾರ್ಗವಾಗಿದ್ದರೂ ಅದು ವಿಲಂಬಕ್ಕೆ ಕಾರಣವಾಗುವದರಿಂದ, ಪ್ರತಿಯೊಂದು ಪ್ರಾಂತಿಕ ಶಾಸನ ಸಭೆಯಲ್ಲಿರುವ ಪ್ರಮುಖ ಜಾತಿಗಳ ಸದಸ್ಯರೇ, ಆಯಾ ಪ್ರಾಂತದ ಆಯಾ ಜಾತಿಯ ಪ್ರತಿ ೧೦ ಲಕ್ಷ ಜನಕ್ಕೆ ಒಬ್ಬನಂತೆ ಘಟನಾ ಸಮಿತಿಯ ಆಯಾ ಜಾತಿಯ ಸದಸ್ಯರೆಂದು ಆರಿಸಿ ಕಳಿಸಬೇಕು. ಸಂಸ್ಥಾನಗಳ ಪ್ರಾತಿನಿಧ್ಯವನ್ನು ನಿರ್ಣಯಿಸಲು ಸಂಸ್ಥಾನಗಳು ಒಂದು ವಿಚಾರವಿನಿಮಯ ಸಮಿತಿಯನ್ನು ರಚಿಸಬೇಕು.

ಘಟನಾ ಸಮಿತಿಯ ಕಾರ್ಯ ನಡೆದಿರುವಾಗ ಆಡಳಿತ ಸಾಗಿಸಲು ಪ್ರಮುಖ ರಾಜಕೀಯ ಪಕ್ಷಗಳ ಬೆಂಬಲ ಪಡೆದಿರುವ ನಡುಗಾಲ ಸರಕಾರ ಸ್ಥಾಪಿಸುವದೇ ಮಹತ್ವದ್ದು. ಯುದ್ಧ ಮಂತ್ರಿತ್ವ ಮೊದಲ್ಗೊಂಡು ಎಲ್ಲ ಖಾತೆಗಳಿಗೂ ಸಾರ್ವಜನಿಕ ಬೆಂಬಲವುಳ್ಳ ಮಂತ್ರಿಗಳನ್ನು ನೇಮಿಸಿಕೊಳ್ಳಲಾಗುವದು.

ಅಧಿಕಾರ ದಾನದಿಂದುಂಟಾಗುವ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಬ್ರಿಟಿಶ ಸರಕಾರ ಮತ್ತು ಭಾರತದ ಯೂನಿಯನ್ ಘಟನಾ ಸಮಿತಿಯ ನಡುವೆ ಒಪ್ಪಂದವಾಗಬೇಕಾಗುವದು.

ಪಾಕಿಸ್ತಾನ ಅವ್ಯವಹಾರ್ಯ

ಮುಸ್ಲಿಂಲೀಗದ ಸ್ವತಂತ್ರ ಸಾರ್ವಭೌಮ ಪಾಕಿಸ್ತಾನ ರಾಜ್ಯದ ಬೇಡಿಕೆಯನ್ನು ಮನ್ನಿಸಬೇಕೆಂದು ಬ್ರಿಟಿಶ ಸರಕಾರಕ್ಕೆ ತಾವು ಸಲಹೆ ಕೊಡಲು ಅಸಮರ್ಥರಾಗಿರುವದಾಗಿ ಸ್ಪಷ್ಟವಾಗಿ ಮಂತ್ರಿತ್ರಯರು ಹೇಳಿದ್ದಾರೆ. ಪಾಕಿಸ್ತಾನ ಬೇಡಿಕೆಯನ್ನು ನಿರಾಕರಿಸುವ ಮುಂಚೆ ಮುಸ್ಲಿಮರ ನ್ಯಾಯವಾದ ಭೀತಿಗಳನ್ನೆಲ್ಲ ನಿಷ್ಪಕ್ಷಪಾತನಾಗಿ ವಿಚಾರಿಸಿ ಆ ಮೇಲೆಯೇ ಈ ನಿರ್ಣಯಕ್ಕೆ ಬಂದುದಾಗಿ ಅವರು ಸಾರಿದ್ದಾರೆ. ಅದಕ್ಕೆ ಕಾರಣಗಳನ್ನೂ ಕೊಟ್ಟಿದ್ದಾರೆ. ಮುಸ್ಲಿಮ ಲೀಗದ ಹೊರಗೆ ಎಲ್ಲ ಭಾರತೀಯರೂ ಭಾರತೀಯ ಅಖಂಡತೆಯನ್ನೇ ಒಮ್ಮತದಿಂದ ಸಮರ್ಥಿಸಿದ್ದಾರೆ. ವಾಯುವ್ಯ ಮತ್ತು ಈಶಾನ್ಯ ಭಾಗಗಳಲ್ಲಿರುವ ಮುಸ್ಲಿಂ ಬಹುಸಂಖ್ಯಾಕ ಜಿಲ್ಹೆಗಳನ್ನಷ್ಟೇ ಬೇರ್ಪಡಿಸಿ ಪಾಕಿಸ್ತಾನ ರಚಿಸಿದರೆ ಅದು ಆರ್ಥಿಕ ದೃಷ್ಟಿಯಿಂದ ಬಲಹೀನವಾಗುವದು. ಆರ್ಥಿಕ ದೃಷ್ಟಿಯಿಂದ ಸ್ವಯಂಪೂರ್ಣವಾಗುವಂತೆ ಸುತ್ತುಮುತ್ತಲ ಹಿಂದೂ ಬಹುಸಂಖ್ಯಾಕ ಪ್ರದೇಶಗಳನ್ನು ಸೇರಿಸಿಕೊಟ್ಟರೆ ವಾಯುವ್ಯದಲ್ಲಿ ನೂರಕ್ಕೆ ೩೭.೯೩ ರಷ್ಟು ಮತ್ತು ಈಶಾನ್ಯದಲ್ಲಿ ನೂರಕ್ಕೆ ೪೮.೩೧ ರಷ್ಟು ಪ್ರಬಲ ಮುಸ್ಲಿಮೇತರ ಅಲ್ಪಸಂಖ್ಯಾಕರು ಸೇರುವದರಿಂದ ಆಡಳಿತೆ ಕಠಿನವಾಗುವದಲ್ಲದೆ ೨ ಕೋಟಿ ಮುಸ್ಲಿಂರು ಪಾಕಿಸ್ತಾನದ ಹೊರಗುಳಿಯುವದರಿಂದ ಅಲ್ಪಸಂಖ್ಯಾಕರ ಪ್ರಶ್ನೆ ಬಗೆಹರಿದಂತಾಗಲಿಲ್ಲ. ಇದಲ್ಲದೆ ಹಿಂದುಸ್ತಾನದ ಸೈನ್ಯ, ತಂತಿ, ಟಪಾಲು ಮೊದಲಾದವನ್ನು ಅಖಿಲ ಭಾರತ ದೃಷ್ಟಿಯಿಂದಲೇ ಸಂಘಟಿಸಿದ್ದು ಈಗ ಅದನ್ನು ವಿಂಗಡಿಸುವದು ಕಠಿನ. ಎರಡು ಸಾರ್ವಭೌಮ ರಾಷ್ಟ್ರಗಳಾದರೆ ಸಂಸ್ಥಾನಗಳು ಯಾವುದರೊಡನೆ ಸೇರಬೇಕೆಂಬುದೂ ೭೦೦ ಮೈಲು ಅಂತರದಲ್ಲಿರುವ ಎರಡು ಪಾಕಿಸ್ತಾನ ಪ್ರದೇಶಗಳು ಹೇಗೆ ಸಹಕರಿಸಬೇಕೆಂಬುದೂ ಸಮಸ್ಯೆಗಳಾಗಿಯೆ ಉಳಿಯುವವು. ಪಾಕಿಸ್ತಾನ ಪ್ರದೇಶ ಗಡಿಪ್ರದೇಶದಲ್ಲಿರುವದರಿಂದ ಅದು ಬೇಕಾದರೆ ಸಂರಕ್ಷಣೆ ಅಸಾಧ್ಯವಾಗುವದು. ಆದ್ದರಿಂದ ಪಾಕಿಸ್ತಾನವನ್ನು ಮನ್ನಿಸುವದು ಅಸಾಧ್ಯ

ಸಂಸ್ಥಾನಗಳು

ಸಂಸ್ಥಾನಿಕರಿಗೆ ಬ್ರಿಟಿಶ ಸರಕಾರ ಇನ್ನು ಮೇಲೆ ಸಂರಕ್ಷಣೆ ಕೊಡಲಾರದೆಂದೂ ಮಂತ್ರಿಗಳು ಸಾರಿದ್ದಾರೆ. ಹಿಂದುಸ್ತಾನ ಸ್ವತಂತ್ರವಾದ ನಂತರ ಸಂಸ್ಥಾನಗಳ ಮೇಲಿನ ಅಧಿಕಾರವನ್ನು ಬ್ರಿಟಿಶ ಸರಕಾರ ನಡೆಸಲಾರದು. ಆದರೆ ಆ ಅಧಿಕಾರವನ್ನು ಹಿಂದೀ ಸರಕಾರಕ್ಕೂ ಕೊಡಲಾರದು. ಭಾರತದ ಹೊಸ ವಿಕಾಸದಲ್ಲಿ ಸಹಕರಿಸಲು ನರೇಂದ್ರರು ಸಮ್ಮತಿಸಿದ್ದಾರೆ. ಈ ಸಹಕಾರವನ್ನು ಹೇಗೆ ಸಾಧಿಸಬೇಕೆಂಬುದು ವಿಚಾರವಿನಿಮಯದಿಂದ ನಿರ್ಣಯಿಸಲ್ಪಡುವದು.

ಜಾತಿಗಳು ಮತ್ತು ಪ್ರದೇಶಗಳು

ಘಟನಾ ಸಮಿತಿಗೆ ಪ್ರತಿನಿಧಿಗಳನ್ನು ಆರಿಸಲು ಮುಖ್ಯವಾಗಿ ಮೂರು ಜಾತಿಗಳನ್ನು ಮಂತ್ರಿತ್ರಯರು ಒಪ್ಪಿಕೊಂಡಿದ್ದಾರೆ: ಸಾಮಾನ್ಯ, ಮುಸ್ಲಿಂ, ಮತ್ತು ಶೀಖ. ಇತರ ಅಲ್ಪಸಂಖ್ಯಾಕರಾಗಿರುವವರಿಗೆ ಪ್ರಾತಿನಿಧ್ಯ ದೊರಕದಿರಬಹುದು. ಆದರೆ ಅವರ ಹಕ್ಕು ಹಿತಗಳ ಸಂರಕ್ಷಣೆಯ ವಿಷಯದಲ್ಲಿ ಘಟನಾ ಸಮಿತಿಗೆ ಸೂಚನೆ ಕೊಡಲು ಒಂದು ಸಲಹೆ ಸಮಿತಿಯನ್ನು ನೇಮಿಸಲಾಗುವದು. ಹೀಗೆ ಆರಿಸಲ್ಪಡುವ ಪ್ರತಿನಿಧಿಗಳು ಆದಷ್ಟು ಬೇಗನೆ ದಿಲ್ಲಿಯಲ್ಲಿ ಸಭೆ ಕೂಡುವರು. ಅವರು ತಮ್ಮ ಕಾರ್ಯಾರಂಭ ಮಾಡುವ ಮೊದಲು ಅನುಕೂಲತೆಗಾಗಿ ಪ್ರಾಂತಗಳನ್ನು ಮೂರು ವಿಭಾಗಗಳಾಗಿ ಮಾಡಲಾಗಿದೆ: (ಅ) ಮದ್ರಾಸ, ಮುಂಬಯಿ, ಯುಂಕ್ತಪ್ರಾಂತ, ಬಿಹಾರ, ಓಡಿಸಾ, ಮಧ್ಯಪ್ರಾಂತ; (ಆ) ಪಂಜಾಬ, ಗಡಿನಾಡು, ಸಿಂಧ; (ಇ) ಬಂಗಾಲ, ಆಸಾಮ. ಈ ಮೂರು ಗುಂಪುಗಳು ಪ್ರತ್ಯೇಕವಾಗಿ ತಂತಮ್ಮ ಗುಂಪುಗಳಲ್ಲಿ ಬರುವ ಪ್ರಾಂತಗಳ ಘಟನೆಯನ್ನು ಸಿದ್ಧಗೊಳಿಸುವವು. ಯಾವದೊಂದು ಪ್ರಾಂತ ಇಂಥ ಗುಂಪುಗಳಿಂದ ಹೊರಗುಳಿಯಬಯಸುವದಾದರೆ, ಯೂನಿಯನ್ ಸರಕಾರ ಸ್ಥಾಪಿಸಲ್ಪಟ್ಟನಂತರ ಅದು ಹೊರಗುಳಿಯಬಲ್ಲದು. ಪ್ರಾಂತಿಕ ಘಟನೆಗಳು ಸಿದ್ಧವಾದ ಬಳಿಕ ಯೂನಿಯನ್ ಘಟನೆಯನ್ನು ಸಂಸ್ಥಾನಗಳ ಸದಸ್ಯರೊಡನೆ ಸೇರಿ ರಚಿಸಲಾಗುವದು. ಮಂತ್ರಿಗಳ ಮೇಲಿನ ಸೂಚನೆಗಿಂತ ಭಿನ್ನವಾದ ಯಾವದೊಂದು ಸೂಚನೆಯನ್ನು ತರುವದಿದ್ದರೆ ಅಥವಾ ಜಾತೀಯ ಮಹತ್ವದ ಪ್ರಶ್ನೆ ಉದ್ಭವಿಸಿದರೆ ಅದು ಉಪಸ್ಥಿತ ಸದಸ್ಯರ ಬಹುಮತ ಮತ್ತು ಉಭಯ ಪಕ್ಷಗಳ ಪ್ರತ್ಯೇಕ ಬಹುಮತದಿಂದ ನಿರ್ಣಯಿಸಬೇಕು.

ಆಶೋತ್ತರ

ಕೊನೆಯಲ್ಲಿ ಮಂತ್ರಿತ್ರಯರು ಸ್ವತಂತ್ರ ಭಾರತ ಬ್ರಿಟಿಶ ಸಾಮ್ರಾಜ್ಯದಲ್ಲಿಯೇ ಉಳಿಯಬೇಕೆಂದು ಆಶಿಸಿದರು. ಹೇಗೆ ಇದ್ದರೂ ಬ್ರಿಟನದೊಡನೆ ಭಾರತ ಸೌಹಾರ್ದದಿಂದ ಉಳಿದೀತೆಂದು ಅವರ ಅಭಿಲಾಷೆಯಾಗಿತ್ತು. ನಿಷ್ಪಕ್ಷಪಾತ ವಿಚಾರಾಂತ್ಯದಲ್ಲಿ ಬ್ರಿಟಿಶ ಮಂತ್ರಿಗಳೂ ಈ ಸೂಚನೆಗಳನ್ನು ಮಾಡಿದ್ದು ಪ್ರಮುಖ ಪಕ್ಷಗಳು ಇವುಗಳನ್ನು ಅಂಗೀಕರಿಸಿ ಸಹಕರಿಸಬೇಕು. ಎಲ್ಲರಿಗೂ ಇದು ಒಪ್ಪಿಗೆಯಾಗಲಿಕ್ಕಿಲ್ಲ. ಆದರೆ ಇಂಥ ಸಂಸ್ಮರಣೀಯ ಸಂಧಿಯಲ್ಲಿ ಸಹಕಾರವೂ ಮುತ್ಸದ್ದಿತನವೂ ಬೇಕಾರುವದು. ಅವರು ಇದನ್ನು ನಿರಾಕರಿಸುವದರಿಂದಾಗುವ ಪರಿಣಾಮಗಳನ್ನಾದರೂ ಚಿಂತಿಸಬೇಕು. ಇದು ೪೦ ಕೋಟಿ ಜನರ ಹಿತದೃಷ್ಟಿಯಿಂದ ರಚಿಸಿದ ಈ ಯೋಜನೆಯನ್ನು ನಿರಾಕರಿಸಿದರೆ ಯಾದವೀ ಯುದ್ಧ, ಹಿಂಸೆ, ಅರಾಜಕತೆಗಳು ಉಂಟಾದಾವು ಎಂದು ಮಂತ್ರಿಗಳು ಎಚ್ಚರಿಸಿದ್ದಾರೆ.

ಪ್ರತಿಕ್ರಿಯೆಗಳು

ಇದನ್ನು ಬರೆಯುತಿರುವಾಗ, ಈ ಯೋಜನೆಯ ಬಗೆಗೆ ವಿವಿಧ ಪಕ್ಷಗಳ ಪ್ರತಿಕ್ರಿಯೆಯನ್ನು ಹೇಳಲು ಸಮಯವಿಲ್ಲದಾಗಿದೆ. ಮುಸ್ಲಿಂ ಲೀಗ ವರ್ಗಗಳಲ್ಲಿ ಸ್ವಾಭಾವಿಕವಾಗಿ ನಿರಾಶೆಯುಂಟಾಗಿದೆಯೆನ್ನಬೇಕು. ಮಹಾತ್ಮಾ ಗಾಂಧಿಯವರು ನಿರ್ವಿಕಾರ ಬುದ್ಧಿಯಿಂದ ಮಂತ್ರಿಗಳ ಯೋಜನೆಯನ್ನು ಅಭ್ಯಸಿಸಬೇಕೆಂದು ಹೇಳಿರುವರು. ಬ್ಯಾ. ಜಿನ್ನಾರವರು ಯಾವದೇ ಬಗೆಯ ಅಭಿಪ್ರಾಯ ವ್ಯಕ್ತ ಮಾಡಲು ನಿರಾಕರಿಸಿದರು. ಇತರರೂ ಈ ವರೆಗೆ ಅಭಿಪ್ರಾಯ ಸೂಚಿಸಿಲ್ಲ.

ಪಾರ್ಲಮೆಂಟಿನಲ್ಲಿ ಆ್ಯಟ್ಲಿಯವರು ಹೇಳಿಕೆ ಹೊರಡಿಸಿದೊಡನೆ ಆ ಬಗ್ಗೆ ಕಾನ್ಸರ್ವೇಟಿವರು ಮಂಡಿಸಿದ ನಿಲುವಳಿ ಸೂಚನೆಯ ಚರ್ಚೆ ನಡೆಯಿತು. ಆಗ ವಿನ್‌ಸ್ಟನ್ ಚರ್ಚಿಲ್ಲರು ಈ ವಿಷಯದಲ್ಲಿ ತಮ್ಮ ಹೊಟ್ಟೆಯುರಿಯನ್ನು ವ್ಯಕ್ತಗೊಳಿಸದೆ ಬಿಡಲಿಲ್ಲ. "ಹಿಂದೀ ರಾಜಕೀಯ ಬಿಕ್ಕಟ್ಟು ಬಿಡಿಸುವ ಹೊಣೆಯನ್ನು ನಾವು ಈ ವರೆಗೆ ಹಿಂದೀ ಪಕ್ಷಗಳದೇ ಎಂದು ಹೇಳುತ್ತ ಬಂದಿದ್ದೇವೆ. ಈ ಹೇಳಿಕೆಯಿಂದ ಆ ಹೊಣೆಯನ್ನು ನಾವೇ ಹೊತ್ತಂತಾಯಿತು. ಇದು ಅನುಚಿತ. ನಾವು ಅಲ್ಪ ೯ ಕೋಟಿ ಮುಸ್ಲಿಮರಿಗೂ ೬ ಕೋಟಿ ದಲಿತರಿಗೂ ಹಿಂದುಸ್ತಾನದ ನಾಲ್ಕರಲ್ಲೊಂದಂಶ ಕ್ಷೇತ್ರಗಳನ್ನಾಳುವ ಸಂಸ್ಥಾನಿಕರಿಗೂ ನಾವು ಕೊಟ್ಟ ಆಶ್ವಾಸನಗಳ ಗತಿಯೇನು? ಎಂದು ಮುಂತಾಗಿ ಅವರು ಗೋಳಾಡಿದರು. ಇನ್ನೂ ಈ ಯೋಜನೆಯನ್ನು ಅಭ್ಯಸಿಸಿ ಅವರು ಅದರ ಮೇಲೆ ಬೆಂಕಿ ಕಾರುವವರಿದ್ದಾರೆ. ಕಮ್ಯುನಿಸ್ಟ ಪಾರ್ಲಮೆಂಟ ಸದಸ್ಯ ಗಲ್ಲಾಚರರು ಮಾತ್ರ ಹಿಂದುಸ್ತಾನದ ಜನತೆಯ ವಿಶ್ವಾಸವನ್ನು ಉಂಟುಮಾಡುವದಕ್ಕಾಗಿ ನಾವು ಮೊದಲು ಹಿಂದುಸ್ತಾನದ ಸ್ವಾತಂತ್ರ್ಯವನ್ನು ಘೋಷಿಸಬೇಕಾಗಿತ್ತು ಮತ್ತು ಅಧಿಕಾರವನ್ನು ಅತಿ ದೊಡ್ಡ ಮತ್ತು ಜಾತ್ಯತೀತ ಪಕ್ಷವಾದ ಕಾಂಗ್ರೆಸ್ಸಿಗೆ ಬಿಟ್ಟು ಕೊಡಬೇಕಾಗಿತ್ತು. ಅದು ಮುಸ್ಲಿಮರನ್ನೂ ಸೇರಿಸಿಕೊಂಡು ಕೆಲಸ ಸಾಗಿಸುತಿತ್ತು ಎಂದರು. ಕಾನ್ಸರ್ವೇಟಿವರ ಹೊರತು ಇತರ ಪಕ್ಷಗಳ ಪ್ರತಿಕ್ರಿಯೆ ಈ ಯೋಜನೆಗೆ ಅನುಕೂಲವಾಗಿಯೆ ಇದ್ದಂತಿದೆ.

ಕ ರ್ನಾ ಟ ಕ

ಧಾರವಾಡ

ಕೋಕಟಬಾಳ ಕುರಹಟ್ಟಿ ಗ್ರಾಮಗಳ ಬರಗಾಲ ಕಾಮಗಾರಿ ಕೆಲಸಗಾರರಿಗೆ ಮೂರು ವಾರಗಳಿಂದ ಕೂಲಿ ಕೊಟ್ಟಿಲ್ಲವಾದ್ದರಿಂದ ಕೂಲಿಕಾರರು ಉಪವಾಸ ದುಡಿಯುತ್ತಿರುವರು.

ಹುಬ್ಬಳ್ಳಿಯಲ್ಲಿಯು ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಯರ ವಸತಿಗೃಹವು ಜೂನ ೧೦ ರಿಂದ ಪ್ರಾರಂಭವಾಗುವದು. ಸೇರಲಿಚ್ಛಿಸುವವರು ಶ್ರೀ ಎಫ್. ಡಿ. ಘೋಡಕೆಯವರಿಗೆ ಅರ್ಜಿ ಕಳಿಸಬೇಕು.

ಮುಳಗುಂದ, ಹೊಸರಿತ್ತಿ, ಸೂಡಿಗಳಲ್ಲಿ ಸಾರ್ವಜನಿಕ ಸಭೆಗಳು ಸೇರಿ ಭೂಲಾಭಾಯರ ನಿಧನದ ಬಗ್ಗೆ ಶೋಕ ಪ್ರದರ್ಶಿಸಲಾಯಿತು.

ಧಾರವಾಡದಲ್ಲಿ ತಾ ೧೨ ನೇ ದಿನ ಥೇಟರದಲ್ಲಿ ಜಂಗೀ ಕುಸ್ತಿಗಳು ನಡೆದು ಭೋಲಾ ಪಂಜಾಬಿ ಹಾಗು ಮಾರುತಿ ಪೈಲವಾನರು ವಿಜಯಿಗಳಾದರು.

ಗದುಗಿನ ಶ್ರೀ ಸಿದ್ದರಾಮಪ್ಪ ಮಾನವಿಯವರು ಕರ್ನಾಟಕ ಯೋಜನಾ ಸಮಿತಿಗೆ ೨೦೦ ರೂ. ಕೊಟ್ಟಿರುವರು.

ಅಣ್ಣಿಗೇರಿಯಲ್ಲಿ ಸೇಟ ವೆಲಜಿ ಕಾನಜಿಯವರ ಅರಳಿ ಗಿರಣಿಯಲ್ಲಿ ತಾ. ೧೧ ನೇ ದಿನ ಬೆಂಕಿ ಹತ್ತಿ ಬಹಳ ಹಾನಿ ಸಂಭವಿಸಿರುವದು.

ಹಾನಗಲ್ಲ ಬಲಭೀಮ ವ್ಯಾಯಾಮ ಶಾಲೆಯ ೩ ನೇ ವಾರ್ಷಿಕೋತ್ಸವವು ಡಾ. ಹರ್ಡೀಕರರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಅಧ್ಯಕ್ಷರು ವ್ಯಾಯಾಮ ಶಾಲೆಯ ಮಹತ್ವ, ರಾಷ್ಟ್ರಸೇವಾದಲದ ಅವಶ್ಯಕತೆ ತಿಳಿಸಿದರು.

ಜಯಪ್ರಕಾಶ ನಾರಾಯಣ ಹಾಗು ಶ್ರೀಮತಿ ಅರುಣಾ ಅಸಫಅಲ್ಲಿಯವರು ಮೇ ಕೊನೆ ವಾರದಲ್ಲಿ ಕರ್ನಾಟಕದಲ್ಲಿ ಪ್ರವಾಸ ಮಾಡುವರೆಂದು ತಿಳಿಯುತ್ತದೆ.

ಜಿಲ್ಲಾ ಜುಟಾಗ್ರತೆ ಸಮಿತಿಗೆ ಶ್ರೀ ಹುಕ್ಕೇರಿ ರಾಮರಾಯರು ರಾಜೀನಾಮೆ ಕೊಟ್ಟಿದ್ದಾರೆ. ಕಳೆದ ಸಲದ ಸಭೆಯಲ್ಲಿ ದುಷ್ಕಾಳ ಭಾಗದ ಮಾಮಲೇದಾರರು ಸಮಿತಿಯ ಸಭಾಸದರಿರಬೇಕೋ ಹೇಗೆಂಬ ಬಗ್ಗೆ ತೀಕ್ಷ್ಣ ವಾದ ನಡೆಯಿತು. ಶ್ರೀ ಹುಕ್ಕೇರಿಯವರು ಅವರು ಸಭೆಯಲ್ಲಿ ಹಾಜರಿರಲು ಅಡ್ಡಿಯಿಲ್ಲ. ಆದರೆ ಸಭಾಸದರಾಗಿರಬಾರದೆಂದರು. ಕಲೆಕ್ಟರರಿಗೆ ಇದು ಸಮ್ಮತವಾಗಲಿಲ್ಲ.

ಮುಂಬಯಿ ಕರ್ನಾಟಕ ವತನದಾರ ಕುಲಕರ್ಣಿ ಸಂಘದ ಶಿಷ್ಟಮಂಡಳದವರು ಮಂತ್ರಿಗಳಲ್ಲಿ ತಾ. ೨೪ ಕ್ಕೆ ಶಿಷ್ಟಮಂಡಳ ತೆಗೆದುಕೊಂಡು ಹೋಗಿ ವರ್ಷಾಶನ, ಭತ್ತೆ ಮೊದಲಾದ ವಿಷಯಗಳ ಸಂಬಂಧದಲ್ಲಿ ಮಾತನಾಡುವರು.

ಬೆಳಗಾವಿ

ಮರಾಠಿ ಸಾಹಿತ್ಯ ಸಮ್ಮೇಲನದ ೩೦ ನೇ ಅಧಿವೇಶನವು ಬೆಳಗಾವಿಯಲ್ಲಿ ತಾ. ೧೨ ರಿಂದ ವಿಜೃಂಭಣೆಯಿಂದ ಸಾಂಗವಾಯಿತು. ಶ್ರೀ ಜಿ ಟಿ ಮಾಡಖೋಲಕರರು ಅಧ್ಯಕ್ಷತೆ ವಹಿಸಿದ್ದು ಕುರುಂದವಾಡದ (ಕಿರಿ) ಶ್ರೀಮಂತ ರಾಜೇಸಾಹೇಬರು ಸಮ್ಮೇಲನದ ಉದ್ಘಾಟನ ಮಾಡಿದರು. ಶ್ರೀಯುತರಾದ ಗಂಗಾಧರರಾಯರು ದೇವ ಶಂಕರರಾಯರು ಮಹಾರಾಷ್ಟ್ರ ಪ್ರಾಂತೀಕರಣಕ್ಕೆ ಬೆಂಬಲ ಕೊಟ್ಟು ಸಂದೇಶ ಕಳಿಸಿದ್ದರು.

ಬೆಳಗಾವ ರಾಷ್ಟ್ರೀಯ ಸೇವಾದಲದವರು ತಾ. ೧೨ ರಿಂದ ಬೌದ್ಧಿಕ ವರ್ಗಗಳನ್ನು ಪ್ರಾರಂಭಿಸಿದ್ದಾರೆ.

ಗೋಕಾಕ ತಾಲೂಕಿನಲ್ಲಿ ಬರಗಾಲ ನಿವಾರಣ ಕೆಲಸ ಸಾಗಿಸಲು ಶ್ರೀ ಬಿ ಜಿ ಅಂಗಡಿಯವರ ಅಧ್ಯಕ್ಷತೆಯಲ್ಲಿ ೧೪ ಜನರ ಸಮಿತಿ ಸ್ಥಾಪಿತವಾಗಿದೆ.

ಎಮ್ಮಿಗಟ್ಟಿ-ಅಂಬಡಗಟ್ಟಿ ನಡುವೆ ಒಬ್ಬರ ಕೊಲೆಯಾಗಿದ್ದು ರುಂಡವನ್ನು ದೇಹದಿಂದ ಬೇರಿರಿಸಿದ್ದರು. ರಣಹದ್ದುಗಳು ಅದನ್ನು ಹರಿದು ತಿಂದಿದ್ದರಿಂದ ಗುರುತು ಹತ್ತುವಂತಿರಲಿಲ್ಲ. ಬಟ್ಟೆಯ ಮೇಲಿಂದ ಬಳವಂತ ರಂಗೋ ಕುಲಕರ್ಣಿ ಎಮ್ಮಿಗನೂರ ಇವರು ಇರಬೇಕೆಂದು ಅನುಮಾನಿಸಲಾಗಿದೆ. ಇಲ್ಲದೆ ತಮ್ಮಣ್ಣಪ್ಪ ಹುದ್ದಾರರನ್ನು ಭಯಂಕರ ಗಾಯಗೊಳಿಸಿದ್ದು ಬೆಳಗಾವ ಆಸ್ಪತ್ರೆಯಲ್ಲಿ ಅವರು ಮರಣ ಹೊಂದಿದರು.

ಹಳೇ ಬೆಳಗಾವ ಬಾಂಬ ಖಟ್ಲೆಯಲ್ಲಿ ಆರೋಪಿಗಳಾಗಿ ಅಜ್ಞಾತವಾಸದಲ್ಲಿದ್ದ ಗೊಂದು ಮಾಸ್ತರರು ಈಗ ಪ್ರಕಟರಾಗಿದ್ದು ಹನುಮನ ಗುಡಿಯಲ್ಲಿ ಜಾಹೀರ ಸಭೆ ಸೇರಿ ಅವರನ್ನು ಅಭಿನಂದಿಸಲಾಯಿತು.

ಅಥಣಿಯಲ್ಲಿ ದತ್ತೋಪಂತ ಹನುಮಸಾಗರರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀಯುತರಾದ ವಾಲಿ, ಮುಂಡಗಿ, ಸಾಣಿಕೊಪ್ಪ ಅವರ ಭಾಷಣಗಳಾದವು. ವಾಲಿಯವರು ೧೯೪೨ರ ಹೋರಾಟ ವಿವರಿಸಿದರು.

ವಿಜಾಪುರ

ವಿಜಾಪುರ ವಿಜಯಕಾಲೇಜ ಸಪ್ತಾಹವು ವಿವಿಧ ಕಾರ್ಯಕ್ರಮಗಳಿಂದ ಜರುಗಿ ಒಕ್ಕಲತನ ಕಾಲೇಜನ್ನು ವಿಜಾಪುರದಲ್ಲಿಯೆ ಹೊರಡಿಸಬೇಕೆಂದು ಸರಕಾರಕ್ಕೆ ಕೇಳಿಕೊಳ್ಳಲಾಯಿತು.

ಧಾನ್ಯ ಎತ್ತುವಳಿ ಸಂಬಂಧವಲ್ಲಿ ರೈತರಿಗೆ ತೊಂದರೆ ಕೊಡುವದು ನಡೆದ ಸುದ್ದಿಗಳು ಬರುತ್ತಿವೆ. ೨೦ ಚೀಲ ಬೆಳೆದವರಿಗೆ ೬೦ ಚೀಲ ಕೇಳಿದ ಉದಾಹರಣೆಗಳು ಇವೆ.

ಲಂಚದ ಆರೋಪದಿಂದ ತೋಳಮಟ್ಟಿ ಉಗ್ರಾಣಾಧಿಕಾರಿಯ ವಿಚಾರಣೆ ಬೀಳಗಿ ಮಹಾಲಕರಿಯವರಲ್ಲಿ ನಡೆದಿದ್ದು ಲಂಚ ಕೊಟ್ಟ ಸಾತಪ್ಪನ ಹೇಳಿಕೆಯಾಗಿರುವದು.

ಬಾಗಲಕೋಟೆಯಲ್ಲಿ ಸೇವಾದಲದ ಸ್ತ್ರೀ ಸೈನಿಕರನ್ನು ತರಬೇತುಗೊಳಿಸಲು ಶ್ರೀಮತಿ ಕುರ್ತಕೋಟಿಯವರ ನೇತೃತ್ವದಲ್ಲಿ ಶಿಕ್ಷಣ ವರ್ಗ ತೆರೆಯಲ್ಪಟ್ಟಿದೆ.

ರಾ ಸಾ ವ್ಹಿ ವ್ಹಿ ವೆಲಿಂಗೆಯವರು ವಿಜಾಪುರ ನಗರದ ಸಬ್ ಡಿವ್ಹಿಜನಲ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದ್ದಾರೆ.

ದರ್ಗಾದಲ್ಲಿಯ ಜಹಾಗೀರದಾರರ ಮನೆಯನ್ನು ದರೋಡೆಗಾರರು ಮುತ್ತಿ ಆಭರಣಗಳ ಎರಡು ಟ್ರಂಕು ತೆಗೆದುಕೊಂಡು ಹೋಗಿರುವರು.

ಇಳಕಲ್ಲ ನಗರ ಸಭೆ ಉಪ ಚುನಾವಣೆಯಲ್ಲಿ ಶ್ರೀ ಶಿವಲಿಂಗಪ್ಪ ಕವಿಶೆಟ್ಟಿಯವರು ಆರಿಸಿ ಬಂದಿದ್ದಾರೆ.

ಕೆರೂರ ಹಾಗು ಅಗಸರಕೊಪ್ಪ ನಡುವೆ ಶುಶ್ರೂಷಾ ಕಾರೊಂದು ಅಪಘಾತಕ್ಕೆ ಶಿಲುಕಿ ಅದರಲ್ಲಿಯ ಡಾ. ನರಗುಂದಕರ, ಭುಸೇಕರ ಹಾಗು ಬೇರೆ ೫ ಜನರಿಗೆ ಗಾಯಗಳು ಸಂಭವಿಸಿದವು. ಅವರನ್ನು ಕೂಡಲೆ ಬಾಗಲಕೋಟ ಆಸ್ಪತ್ರೆಗೆ ಹಾಕಿ ಪ್ರಥಮೋಪಚಾರ ಮಾಡಿ ಹೆಚ್ಚಿನ ಉಪಚಾರಕ್ಕೆ ವಿಜಾಪುರ ಸಿವ್ಹಿಲ್ ಆಸ್ಪತ್ರೆಗೆ ಕಳಿಸಲಾಯಿತು.

ಬಳ್ಳಾರಿ ಜಿಲ್ಲೆ

ಹೊಸಪೇಟ ದಿವ್ಯಜ್ಞಾನ ಸಮಾಜ ಮಂದಿರದಲ್ಲಿ ವೈದೂರ ತಿರುಮಲಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಭುಲಾಭಾಯರ ನಿಧನ ಕುರಿತು ದುಃಖ ವ್ಯಕ್ತ ಮಾಡಲಾಯಿತು. ಬಿ. ಅನಂತಾಚಾರ್ಯ, ಟಿ. ಎಚ್. ಷಡಕ್ಷರಯ್ಯ, ಟಿ. ಎಸ್ ರಾಮಕೃಷ್ಣರಾವ ಮೊದಲಾದವರು ಮಾತಾಡಿ ದಿವಂಗತರ ಗುಣವರ್ಣನ ಮಾಡಿದರು. ಇದರಂತೆ ನಾರಾಯಣ ದೇವರ ಕೆರೆಯಲ್ಲೂ ಸಭೆ ಜರುಗಿ ದಿವಂಗತರ ಆತ್ಮಕ್ಕೆ ಶಾಂತಿ ಕೋರಲಾಯಿತು.

ಗವ್ಹರ್ನರರು ಬರಗಾಲ ಪರಿಸ್ಥಿತಿ ಪರಿಶೀಲಿಸಲು ಜಿಲ್ಹೆಯಲ್ಲಿ ಸಂಚಾರ ಮಾಡಿ ಈ ಭಾಗದಲ್ಲಿಯ ಆಹಾರ ಪರಿಸ್ಥಿತಿ ಠೀಕವಾಗಿದೆಂದೂ ಕಾಳಿನ ಅಪವ್ಯಯವಾಗದಂತೆ ದಕ್ಷತೆ ವಹಿಸಬೇಕೆಂದೂ ಅಭಿಪ್ರಾಯ ಪಟ್ಟರು. ಅವರು ತುಂಗಭದ್ರಾ ಆಣೆಕಟ್ಟಿನ ಸ್ಥಳಕ್ಕೂ ಹೋಗಿಬಂದರು.

ಜಿಲ್ಹಾ ಗ್ರಾಮ ಸೇವಾ ಸಮಿತಿಯವರು ಬರಗಾಲ ನಿಮಿತ್ತ ಕುರಗೋಡಿನಲ್ಲಿ ೧೦೦ ರಾಟ ಹಂಚಿದ್ದಾರೆ.

ಎಮ್ಮಿಗನೂರಲ್ಲಿ ಸಾರ್ವಜನಿಕ ಸಭೆ ಜರುಗಿ ಮದ್ಯಪಾನ ಪ್ರತಿಬಂಧಿಸಬೇಕೆಂದು ಸರಕಾರಕ್ಕೆ ಬಿನ್ನವಿಸಲಾಯಿತು. ನೂಲಿನ ಸೀದಾ ಹೆಚ್ಚಿಸಬೇಕೆಂದೂ ಕೇಳಿಕೊಳ್ಳಲಾಯಿತು.

ಉತ್ತರ ಕನ್ನಡ

ಸಿರ್ಸಿ ಸೀದಾ ಅಂಗಡಿಗಳಲ್ಲಿ ೧ ಕುಟುಂಬಕ್ಕೆ ೧೫ ದಿವಸಗಳಿಗೆ ೧೦ ತೊಲಿ ಕೊಬ್ಬರಿ ಎಣ್ಣೆ ಕೊಡುವದು ಎಷ್ಟೂ ಸಾಲುವದಿಲ್ಲೆಂದೂ ೪೦ ತೊಲಿ ಕೊಡಬೇಕೆಂದೂ ಜನರ ಬೇಡಿಕೆಯಿದೆ.

ಮುಂಡಗೋಡದಲ್ಲಿ ಭುಲಾಭಾಯರ ನಿಧನ ನಿಮಿತ್ತ ಹರತಾಳ ಜರುಗಿ ದುಃಖ ಪ್ರದರ್ಶಿಸಲ್ಪಟ್ಟಿತು.

ಹಿಂದಿ ಪ್ರಚಾರ ಸಮಿತಿಯ ಪರೀಕ್ಷೆಯಲ್ಲಿ ಈ ಜಿಲ್ಲೆಯ ಜಯವಂತ ಗಾಯಕವಾಡ ಎಂಬವನು ಪ್ರಾಥಮಿಕ ಪರೀಕ್ಷೆಯಲ್ಲಿ ದಕ್ಷಿಣ ಭಾರತಕ್ಕೆ ೧ ನೇ ನಂಬರ ಹಾಗು ಮುರಿಗೆಪ್ಪನೆಂಬವನು ರಾಷ್ಟ್ರಭಾಷೆ ಪರೀಕ್ಷೆಯಲ್ಲಿ ಮೂರನೆ ನಂಬರ ಬಂದಿರುವರು.

ಸಂಪಿನಲ್ಲಿ ಸೇರಿದ ಶಿಕ್ಷಕರನ್ನು ಕೆಟ್ಟ ಸ್ಥಳಗಳಿಗೆ ವರ್ಗ ಮಾಡಿ ಸೇಡು ತೀರಿಸಿಕೊಳ್ಳುವದು ನಡೆದಿದೆ.

ಸಗಡಗೇರಿಯ ವೆಂಕಟರಮಣ ಶೀರಣ್ಣ ನಾಯಿಕ ಅವರ ವಿವಾಹವು ಆಗರಗೋಣದಲ್ಲಿ ಆರ್ಯಸಮಾಜ ಪದ್ಧತಿಯಿಂದ ಜರುಗಿತು. ಪ್ರಮುಖ ಕಾಂಗ್ರೆಸ್ಸಿಗರು ಕಾರ್ಯಕರ್ತರು ಹಾಜರಿದ್ದರು. ನಾಯಕರು ೧೯೪೨ ರಲ್ಲಿ ಚಳವಳಿಯಲ್ಲಿ ಭಾಗವಹಿಸಿ ಕಾಣೆಯಾಗಿದ್ದರು.

ಸಂಸ್ಥಾನಗಳು

ಜಮಖಂಡಿಯಲ್ಲಿ ತಾ. ೨೦ ರಿಂದ ರಾಷ್ಟ್ರಸೇವಾದಲ ಶಿಬಿರ ಪ್ರಾರಂಭವಾಗುವದು.

ತೇರದಾಳದಲ್ಲಿ ಚನ್ನಪ್ಪ ವಾಲಿ ಪದ್ಮರಾಜ ಬೋಗಾರರಿಗೆ ಸ್ವಾಗತವಾಗಿ ಮೆರವಣಿಗೆ ನಂತರ ಅವರ ಭಾಷಣವಾಯಿತು.

ರಾಯಚೂರ ಪ್ರಜಾಹಿತ ಸಂಘದ ವಾರ್ಷಿಕೋತ್ಸವವು ಇದೇ ತಾ. ೨೨-೨೪ ಕ್ಕೆ ಜರಗುವದು. ಶ್ರೀಯುತರಾದ ಕರಮರಕರ, ದಿವಾಕರರನ್ನು ಆಮಂತ್ರಿಸಲಾಗಿದೆ.

ರಾಯಚೂರ ಹಾಗು ಬೀದರ ಜಿಲ್ಲೆಗಳ ೬೧ ಹಳ್ಳಿಗಳಲ್ಲಿ ಹಪ್ತೆ ತಹಕೂಬ ಮಾಡಲಾಗಿದೆ.

ಹಿಂದುಸ್ತಾನ

ಮುಂಬಯಿ

ಠಾಕೂರದ್ವಾರ (ಮುಂಬಯಿ) ರಾಸಾಯನಿಕ ಕಾರಖಾನೆಯಲ್ಲಿ ತಾ. ೧೨ ನೇ ದಿನ ಸ್ಫೋಟ ಸಂಭವಿಸಿ ೮-೧೦ ಜನರಿಗೆ ಗಾಯಗಳಾಗಿದ್ದಲ್ಲದೆ ಕಟ್ಟಡವು ಸಂಪೂರ್ಣ ಭಸ್ಮವಾಗಿರುವದು.

ಅಹಮ್ಮದಾಬಾದದಲ್ಲಿ ತಾ. ೯ ನೇ ದಿನ ಶಹಾನವಾಜರ ಭಾಷಣ ನಡೆದಾಗ ಕಿಡಿಗೇಡಿಗಳು ಕಲ್ಲು ಒಗೆದಿದ್ದರಿಂದ ಆರು ಜನರಿಗೆ ಗಾಯಗಳಾಗಿವೆ.

೧೦ ನೇ ತಾರೀಖಿನ ದಿನ ಮುಂಬಯಿ ಡಿಲಾಯಲ ಬೀದಿಯಲ್ಲಿ ಅರಳೆಯ ಒಂದು ವಖಾರಕ್ಕೆ ಬೆಂಕಿ ಹತ್ತಿ ೧ ಲಕ್ಷ ರೂ. ಹಾನಿಯಾಗಿರುವದು.

ಮಂತ್ರಿಗಳಿಗೆ ತಿಂಗಳಿಗೆ ೮೫೦ ರೂ. ಸಂಬಳ ೨೦೦ ರೂ. ಮೋಟಾರ ಭತ್ತೆ ಗೊತ್ತುಮಾಡಲಾಗಿದೆ. ಹಿಂದಕ್ಕೆ ೫೦೦ ರೂ. ಸಂಬಳ ೧೫೦ ರೂ. ಭತ್ತೆ ಇತ್ತು.

೧೯೪೨ ರ ಚಳವಳಿಯಲ್ಲಿ ಕಸಿದುಕೊಂಡ ಎಲ್ಲ ಶಸ್ತ್ರಾಸ್ತ್ರಗಳನ್ನು ತಿರುಗಿ ಕೊಡಲು ಸರಕಾರವು ಅಪ್ಪಣೆ ವಿಧಿಸಿದೆ.

ಪುಣೆ ನಗರ ಸಭೆಯವರು ಈಗಿನ ಕಟ್ಟಡವು ಕಚೇರಿಗೆ ಸಾಲದ್ದರಿಂದ ಮುಠಾ ನದಿ ದಂಡೆ ಮೇಲೆ ೫ ಲಕ್ಷ ರೂ. ವೆಚ್ಚದಿಂದ ಮೂರಂತಸ್ತಿನ ಹೊಸದೊಂದು ಕಟ್ಟಡ ಕಟ್ಟಿಸಲಿದ್ದಾರೆ

ಸೀಪಾ ಪ್ರಮಾಣ ಮತ್ತೆ ಕಡಿಮೆ ಮಾಡಲಾಗುವದೆಂಬ ಸುದ್ದಿ ನಿಜವಿರುವದಿಲ್ಲೆಂದು ಸರಕಾರವು ಪ್ರಕಟಿಸಿರುವದು.

ಮದ್ರಾಸ

ವಿಶಾಖಪಟ್ಟಣ ಬಂದರ ಕೆಲಸಗಾರರು ಹೆಚ್ಚಿನ ಕೂಲಿ ಬೇಡಿ ಸರಕಾರಕ್ಕೆ ಸಂಪಿನ ನೋಟೀಸು ಕೊಟ್ಟಿದ್ದಾರೆ.

ತಾ ೨೩ ನೇ ದಿನ ಕೂಡಲಿರುವ ಶಾಸನ ಸಭೆ ಕಾಂಗ್ರೆಸ ಪಕ್ಷದ ಸಭೆಯಲ್ಲಿ ಎನ್. ಎಸ್. ವರದಾಚಾರಿಯರರು ಮದ್ರಾಸ ಮಂತ್ರಿಮಂಡಳವನ್ನು ಕಾಂಗ್ರೆಸ ವರಿಷ್ಠರ ಸಲಹೆಗನುಸಾರವಾಗಿ ಪುನರ್ಘಟಿಸಬೇಕೆಂದು ಠರಾವು ತರಲಿದ್ದಾರೆ.

ತಾ. ೧೩ ನೇ ದಿನ ಮತ್ತೆ ೧೭ ರಾಜಕೀಯ ಕೈದಿಗಳ ಬಿಡುಗಡೆಯಾಗಿರುವದು. ಇನ್ನೂ ೨೦ ರಾಜಕೀಯ ಕೈದಿಗಳಿದ್ದು ಅವರ ಬಿಡುಗಡೆಯೂ ಬೇಗನೆ ಆಗಲಿದೆ.

ಗೋಕುಲ ಹರಿಜನ ವಸತಿ (ಮದ್ರಾಸ) ಯಲ್ಲಿ ತಾ. ೧೨ ನೇ ದಿನ ಹರಿಜನರ ೪೫ ವಿವಾಹಗಳು ಸಾಮೂಹಿಕವಾಗಿ ಜರುಗಿದವು. ಅನವಶ್ಯಕ ವೆಚ್ಚ ಉಳಿಸಿಕೊಳ್ಳಲು ಈ ಪದ್ಧತಿ ಅನುಸರಿಸಲಾಗಿದೆ.

ಮದುರಾಪಲ್ಲಿ ಕರೆ ಅಂಗಿಯವರ ಪರಿಷತ್ತಿನ ಕಾಲಕ್ಕೆ (ಕರೆ ಅಂಗಿಯವರೆಂದರೆ ದ್ರಾವಿಡ ಸ್ವಾತಂತ್ರ್ಯ ಚಳವಳಿಯವರು) ಜನರು ಹಾಗು ಅವರಲ್ಲಿ ಗಲಭೆ ಸಂಭವಿಸಿದ್ದರಿಂದ ಪೋಲೀಸರು ಗೋಳೀಬಾರ ಮಾಡಬೇಕಾಯಿತು. ಗೋಳೀಬಾರಿನಲ್ಲಿ ಇಬ್ಬರು ಸತ್ತಿದ್ದು ಕೆಲವರಿಗೆ ಗಾಯಗಳಾಗಿವೆ. ಕರೆ ಅಂಗಿಯವರು ಗುಡಿಗೆ ಹೋದ ಸ್ತ್ರೀಯರನ್ನು ಅವಮಾನಗೊಳಿಸಿರುವರೆಂದೂ ಕಾಂಗ್ರೆಸ ಧ್ವಜ ಸುಟ್ಟಿರುವರೆಂದೂ ಸುದ್ದಿ ಹಬ್ಬಿ ಗಲಭೆ ಸುರುವಾಯಿತು. ಪೋಲೀಸ ಅಧಿಕಾರಿಗಳಿಗೂ ಕಲ್ಲಿನ ಪೆಟ್ಟು ಬಿದ್ದವು. ಪರಿಷತ್ತಿನ ಮಂಟಪ ಸುಡಲ್ಪಟ್ಟಿತು.

ಪಂಜಾಬದಲ್ಲಿ ಈ ಸಲ ಗೋದಿ ಬೆಳೆ ಚನ್ನಾಗಿ ಬಂದಿದ್ದರಿಂದ ಅಲ್ಲಿಂದ ೩೩ ಸಾವಿರ ಟನ್ ಅಕ್ಕಿ ಮದ್ರಾಸಕ್ಕೆ ಬೇಗನೆ ಬರಲಿದೆ. ಇದಲ್ಲದೆ ಬ್ರಹ್ಮದೇಶದಿಂದಲೂ ಎರಡು ಹಡಗಗಳು ಅಕ್ಕಿ ಹೇರಿಕೊಂಡು ಮದ್ರಾಸಕ್ಕೆ ಹೊರಟಿರುವವು.

ಚಲೆಜಾವ ಗೊತ್ತುವಳಿಗೆ ಬೆಂಬಲ ಕೊಟ್ಟಿದ್ದಕ್ಕಾಗಿ ರದ್ದಾದ ೪೦ ಜಿಲ್ಲಾ ಬೋರ್ಡ ಹಾಗು ಮ್ಯುನಸಿಪಾಲ್ಟಿಗಳನ್ನು ಸರಕಾರದವರು ಪುನಃ ಜನರ ವಶಕ್ಕೆ ಕೊಡಲಿದ್ದಾರೆ.

ಮಂತ್ರಿಗಳಿಗೆ ತಿಂಗಳಿಗೆ ೧೦೦೦ ರೂ. ಸಂಬಳ ೫೦೦ ರೂ. ಭತ್ತೆ ಗೊತ್ತಾಗಿದೆ. ಉಪ ಮಂತ್ರಿಗಳಿಗೆ ೫೦೦ ರೂ. ಸಂಬಳ ೩೦೦ ರೂ. ಭತ್ತೆ ಸದಸ್ಯರಿಗೆ ೧೫೦ ರೂ. ಸಂಬಳ ಕೊಡಲಾಗುವದು.

ಬಾಯರ್ಸ್ನರ ಪ್ರಕರಣದ ಎಲ್ಲ ಕಾಗದ ಪತ್ರಗಳನ್ನೂ ಮ್ಯಾಜಿಸ್ಟ್ರೇಟರ ತೀರ್ಪನ್ನೂ ಸರಕಾರವು ತರಿಸಿಕೊಂಡಿರುವದೆಂದು ತಿಳಿಯುತ್ತದೆ.

ಹೊಸದಿಲ್ಲಿ

ಕಾಂಗ್ರೆಸ ಸ್ವಯಂಸೇವಕ ದಲದ ವಿಭಾಗವನ್ನು ವಹಿಸಿಕೊಳ್ಳಲು ಶಹಾನವಾಜಖಾನರಿಗೆ ಬಿನ್ನವಿಸಲಾಗಿದೆಂದು ಎ. ಆಯ. ಸಿ. ಸಿ. ಕಾರ್ಯದರ್ಶಿಗಳು ಪ್ರಕಟಿಸಿದ್ದಾರೆ.

ಹಿಂದುಸ್ತಾನದಲ್ಲಿ ಸದ್ಯಕ್ಕೆ ಉಪ್ಪಿನ ಕೊರತೆಯ ಹೆದರಿಕೆಯಿರುವದರಿಂದ ಉಪ್ಪಿನ ಕರ ಈಗ ರದ್ದು ಮಾಡುವ ವಿಚಾರವಿಲ್ಲೆಂದು ವ್ಹಾಯಿಸರಾಯರು ಮಹಾತ್ಮರಿಗೆ ತಿಳಿಸಿದ್ದಾರೆ.

ಅಖಿಲ ಭಾರತ ಸಂಸ್ಥಾನ ಪ್ರಜಾಪರಿಷತ್ತಿನ ಕಾರ್ಯಕಾರಿ ಮಂಡಳದ ಸಭೆಯು ಜೂನ ೮ ನೇ ತಾರೀಖಿಗೆ ದಿಲ್ಲಿಯಲ್ಲಿ ಸೇರುವದು.

ರೇಲ್ವೆ ಬೋರ್ಡಿನವರು ದೀರ್ಘವಾದ ಒಂದು ಪ್ರಕಟನೆ ಹೊರಡಿಸಿ ರೇಲ್ವೆ ಕೂಲಿಕಾರರ ಬೇಡಿಕೆಗಳು ಅಸಮಂಜಸವಾಗಿರುವವೆಂದೂ ಸಂಬಳ ಹೆಚ್ಚಿಸಿದಲ್ಲಿ ದರಗಳನ್ನೂ ಹಾಸಲಗಳನ್ನೂ ೧೦೦ ಕ್ಕೆ ೪೦ ರಷ್ಟು ಹೆಚ್ಚಿಸಬೇಕಾಗುವದೆಂದೂ ಅಂಕಿ ಸಹಿತ ಪ್ರಸಿದ್ಧಿಸಿದ್ದಾರೆ.

ಅಗಸ್ಟ ೧ ರಿಂದ ಕಾರಖಾನೆಯಿಂದ ಹೊರಬೀಳುವ ಕಡ್ಡಿಪೆಟ್ಟಿಗೆಗಳು ೨ ಬಿಲ್ಲಗೊಂದರಂತೆ ಮಾರಲ್ಪಡುವವೆಂಬ ಸರಕಾರದ ಪ್ರಕಟನೆ ಹೊರಟಿದೆ.

ಸರಕಾರಿ ನೌಕರರ ಸಂಬಳ,ನೌಕರಿಯ ಕರಾರು ಮುಂತಾದವುಗಳನ್ನು ಪರಿಶೀಲಿಸಲು ಸರಕಾರದವರು ಸಂಯುಕ್ತ ಕೋರ್ಟಿನ ನ್ಯಾಯಾಧೀಶರಾದ ಶ್ರೀ ಎನ್ ಎಸ್ ವರದಾಚಾರರ ಅಧ್ಯಕ್ಷತೆಯಲ್ಲಿ ಶ್ರೀಯುತರಾದ ಹುಸೇನ ಇಮಾಮು,ಎನ್. ವಿ ಗಾಡಗೀಳ, ಸರದಾರ ಮಂಗಲಸಿಂಗ, ಫ್ರಾಂಕ ಅಂಥನಿ ಲೆ ಕ ಚಟರ್ಜಿ, ಎನ್ ಎಂ ಜೋಶಿ ಹಾಗು ಸಿ ವಿ ಶ್ರೀನಿವಾಸರಾವ ಅವರ ಮಂಡಳ ನೇಮಿಸಿದ್ದಾರೆ.

ಮಧ್ಯಪ್ರಾಂತ

ನಾಗಪುರ ಹೊರಭಾಗದಲ್ಲಿ ಹಿಂದು ಹಾಗು ಮಹಾರರಲ್ಲಿ ತಾ. ೧೩ ನೇ ದಿನ ಪುನಃ ಹೊಡೆದಾಟವಾಗಿ ಇಬ್ಬರು ಸತ್ತಿದ್ದು ೫ ಜನರಿಗೆ ಗಾಯಗಳಾಗಿವೆ. ಸನಗಾಹಿ ಹಿಂದುಗಳು ತಿರುಗಿ ಬರುತ್ತಿದ್ದಾಗ ಮಹಾರರು ಅವರ ಮೇಲೆ ದಾಳಿ ಮಾಡಿದರು.

ರಾಷ್ಟ್ರಭಾಷೆಗೆ ಉತ್ತೇಜನ ಕೊಡಲು ಹಿಂದುಸ್ತಾನಿ ಪ್ರಚಾರ ಸಭೆಯವರು ಜುಲೈ ೧ ರಿಂದ ವರ್ಧಾದಲ್ಲಿ ಹಿಂದುಸ್ತಾನಿ ಕಾಲೇಜ ಸುರುವು ಮಾಡುವರು. ೨೫ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಲಾಗುವದು.

ಸರಕಾರದವರು ಪ್ರಮದ್ವರಾ, ಅಮಾವಾಸ್ಯಾ, ಮೊದಲಾದ ಪುಸ್ತಕಗಳ ಮೇಲಿನ ಜಪ್ತಿ ಹುಕುಮು ಹಿಂತೆಗೆದುಕೊಂಡಿದ್ದಾರೆ. ಇದರಂತೆ ರಾಜಸ್ಥಾನ, ಮಾತೃಭೂಮಿ, ನಾಗಪುರ ಟಾಯಿಮ್ಸ, ಇಂಡಿಪೆಂಡೆಂಟ ಮೊದಲಾದವುಗಳಿಂದ ತೆಗೆದುಕೊಂಡ ಜಾಮೀನ ಹಣವನ್ನು ತಿರುಗಿ ಕೊಟ್ಟಿರುವರು.

ಸಂಯುಕ್ತಪ್ರಾಂತ

ಲಖನೌ ಜೇಲಿನಲ್ಲಿಯ ಇಬ್ಬರು ರಾಜಕೀಯ ಕೈದಿಗಳೂ ೧೦ ಸುಭಾಸ ಸೈನಿಕರೂ ರಾಜಕೀಯ ಕೈದಿಗಳನ್ನು ರಾಜಕೀಯ ಹಾಗು ರಾಜಕೀಯೇತರ ಎಂದು ವಿಂಗಡಿಸಿದ್ದಕ್ಕೆ ಅನ್ನತ್ಯಾಗ ಪ್ರಾರಂಭಿಸಿರುವರು.

ಪ್ರಾಂತದಲ್ಲಿ ಇನ್ನೂ ೪೦೦ ರಾಜಕೀಯ ಕೈದಿಗಳು ಜೇಲಿನಲ್ಲಿದ್ದು ಅವರ ಬಿಡುಗಡೆ ಸಂಬಂಧದಲ್ಲಿ ಗವ್ಹರ್ನರರು ಹಾಗು ಜೇಲ ಮಂತ್ರಿಗಳಾದ ಕಿಡವಾಯಿಯವರಲ್ಲಿ ಮತಭೇದವುಂಟಾಗಿದೆ ಗವ್ಹರ್ನರರು ಅವರ ಬಿಡುಗಡೆ ವಿಲಂಬ ಮಾಡಿದಲ್ಲಿ ಕಿಡವಾಯಿಯವರು ರಾಜೀನಾಮೆ ಕೊಡತಕ್ಕವರಿರುವರು.

ಲಖನೌ ವಿಶ್ವವಿದ್ಯಾಲಯದವರು ಇದೇ ಜೂನದಿಂದ ಇಂಗ್ಲಿಷ ಬದಲು ಹಿಂದುಸ್ತಾನಿಯನ್ನು ಬೋಧಭಾಷೆಯಾಗಿ ಸ್ವೀಕರಿಸಿರುವರು.

ಬಂಗಾಲ

ಡಮಡಮ ಸೆಂಟ್ರಲ ಜೇಲಿನಿಂದ ಮತ್ತೆ ೧೦ ಸೆಕ್ಯೂರಿಟಿ ಕೈದಿಗಳ ಬಿಡುಗಡೆಯಾಗಿದೆ. ಇನ್ನೂ ೨೨ ಸೆಕ್ಯೂರಿಟಿ ಕೈದಿಗಳಿರುವರು.

ಜಯಪ್ರಕಾಶ ನಾರಾಯಣರು ಕಲಕತ್ತೆಯಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ ಹೋರಾಟ ಹೊರತು ಸ್ವರಾಜ್ಯ ಸಿಗುವದಿಲ್ಲೆಂದೂ ೧೯೪೨ ರಲ್ಲಿ ಹೊರಬಿದ್ದ ಸುಭಾಸ ಸೈನಿಕರು ಮೊದಲಾದ ಹೊಸ ಶಕ್ತಿಗಳನ್ನು ಉಪಯೋಗಿಸಿ ಕೊನೆಯ ಹೋರಾಟ ಹೂಡಲು ಸಿದ್ಧತೆ ನಡೆಸಬೇಕೆಂದೂ ಹೇಳಿದರು.

ಕಲಕತ್ತೆಯಲ್ಲಿ ಸಕ್ಕರೆ ಕೊರತೆಯಾಗಿದ್ದು ಅನೇಕ ಜನರು ಸಕ್ಕರೆಯಿಲ್ಲದೆ ಚಹಾ ಕುಡಿಯುವ ಪ್ರಸಂಗ ಒದಗಿದೆ.

ಅಸನಸೋಲ ಸೈನ್ಯ ಖಾತೆಯಲ್ಲಿ ಇಂಜನಿಯರರಾಗಿದ್ದ ಕ್ಯಾಪ್ಟನ ಎಂಥಾಮ್ಸರು ಒಬ್ಬ ವ್ಯಾಪಾರಿಯಿಂದ ಗುತ್ತಿಗೆ ಅವಧಿ ಹೆಚ್ಚಿಸುವದಕ್ಕೆ ೨೯ ಸಾವಿರ ರೂ. ಲಂಚ ತೆಗೆದುಕೊಂಡದ್ದರಿಂದ ಅವರಿಗೆ ೩ ವರ್ಷ ಕಠಿಣ ಕೈದು ೩೦ ಸಾವಿರ ರೂ. ದಂಡ ಹೀಗೆ ಶಿಕ್ಷೆ ವಿಧಿಸಲಾಗಿರುವದು.

ಪಂಜಾಬ

೯ ನೇ ಗುರಖಾ ದಲದ ೮ ಕಾರಕೂನರು ಮಿಲಿಟರಿ ಅಧಿಕಾರಿಗಳೊಂದಿಗೆ ಮತಭೇದವಾಗಿ ರಾಜೀನಾಮೆ ಕೊಟ್ಟಿರುವರು. ಸುಭಾಸ ಸೈನಿಕರೊಂದಿಗೆ ಸಂಪರ್ಕ ಬೆಳಿಸಕೂಡದಾಗಿ ಅವರಿಗೆ ಅಪ್ಪಣೆ ವಿಧಿಸಲಾಗಿತ್ತು. ಅವರು ಅದು ಶಕ್ಯವಿಲ್ಲೆಂದು ಹೇಳಿದರು.

ಲಾಹೋರ ಜೇಲಿನಲ್ಲಿಯ ಬಾದಶಹಾ ಗುಲ ಎಂಬ ಖಾಕ್ಸಾರ ಕೈದಿಯನ್ನು ಬಿಟ್ಟುಬಿಡಲು ಅಜ್ಞೆ ವಿಧಿಸಲಾಗಿದೆ. ೧೯೪೧ ರಲ್ಲಿ ಅವರಿಗೆ ಕರೆನೀರಿನ ಶಿಕ್ಷೆಯಾಗಿದ್ದು ೧೮ ತಿಂಗಳಿಂದ ಅವರು ಉಪವಾಸ ಕೈಕೊಂಡು ಕ್ಷೀಣರಾಗಿದ್ದರು.

ಕಾಂಗ್ರೆಸ್ಸಿಗರಲ್ಲಿಯ ಪಕ್ಷಪಂಗಡಗಳ ಹೋರಾಟಕ್ಕೆ ಬೇಸತ್ತು ಪಂಡಿತ ನೇಕಿರಾಮ ಶರ್ಮರು ಅಧಿಕಾರ ಸ್ಥಳಗಳಿಗೆಲ್ಲ ರಾಜೀನಾಮೆ ಕೊಟ್ಟಿದ್ದಾರೆ.

ಆಸಾಮ

ಪೋಟೋರಿಯಾ ಹುಲ್ಲುಗಾವಲು ಪ್ರದೇಶದಲ್ಲಿಯ ೨೩೪ ಅಕ್ರಮಣಗಾರರನ್ನು ಸರಕಾರದವರು ಕಾಯಿದೆ ಪ್ರಕಾರ ಹೊರದೂಡಿ ೬೦೦೦ ಬಿಘೆ ಭೂಮಿ ವಶಪಡಿಸಿಕೊಂಡಿದ್ದಾರೆ. ಅವರು ತಿರುಗಿ ಕಾಲಿಡದಂತೆ ೧೪೪ ನೇ ಕಲಮು ಜಾರಿ ಮಾಡಲಾಗಿದೆ.

ಸಿಂಧ

ಸರಕಾರದವರು ಆಗಾ ಬದ್ರುದ್ದೀನ ಹಾಗು ಶ್ರೀಮತಿ ಜಿ ಅಲ್ಲಾನಾ ಅವರನ್ನು ಉಪಮಂತ್ರಿಗಳನ್ನಾಗಿ ನೇಮಿಸಿಕೊಂಡಿದ್ದಾರೆ.

ಕರಾಚಿ ಜನರಲ್ ಪೋಸ್ಟ ಆಫೀಸದ ೮೦ ಸಾವಿರ ರೂಪಾಯಿಗಳನ್ನು ಬ್ಯಾಂಕಿಗೆ ಒಯ್ಯುತ್ತಿದ್ದಾಗ ಕೆಲವು ಸಶಸ್ತ್ರ ಜನರು ಕಾದುಕೊಂಡು ಕುಳಿತು ಹಲ್ಲೆ ಮಾಡಿ ಅವುಗಳನ್ನು ದೋಚಿಕೊಂಡು ಕಾರಿನಲ್ಲಿ ಪಲಾಯನ ಹೇಳಿದ್ದು ಪೋಲೀಸರು ತಪಾಸಣೆ ನಡಸಿ ಆ ಕಾರನ್ನೂ ಅವರ ಹೆಸರುಗಳನ್ನೂ ಈಗ ಪತ್ತೆ ಹಚ್ಚಿರುವರು. ಆದರೆ ಅಪರಾಧಿಗಳು ಇನ್ನೂ ಸಿಕ್ಕಿಲ್ಲ.

ಸಂಸ್ಥಾನಗಳು

ಫರೀದಕೋಟಿನಲ್ಲಿ ಸತ್ಯಾಗ್ರಹ ಸುರುವಾಗಿದ್ದು ಲಾಹೋರದ ೧೨೫ ಜನರ ಜಥಾವೊಂದು ತಾ ೧೨ ನೇ ದಿನ ಬಂಧಿಸಲ್ಪಟ್ಟಿರುವದು. ಮುಖ್ಯ ಮಂತ್ರಿಗಳು ಜವಾಹರರ ತಂತಿಗೆ ಫರೀದಕೋಟಕ್ಕೆ ಬರಕೂಡದಾಗಿ ಉತ್ತರ ಕೊಟ್ಟಿದ್ದು ಜವಾಹರರು ಅವರ ಈ ಉತ್ತರ ಬಗ್ಗೆ ಸಂತಾಪ ವ್ಯಕ್ತಮಾಡಿ ದೀರ್ಘವಾದ ಪ್ರಕಟನ ಹೊರಡಿಸಿದ್ದಾರೆ.

ಕೊಲ್ಹಾಪುರ ಪೋಲೀಸರು ಹಳದ ಹಾಗು ಇನ್ನೊಂದು ಹಳ್ಳಿಗೆ ಸರಿರಾತ್ರಿಯಲ್ಲಿ ಮುತ್ತಿಗೆ ಹಾಕಿ ಅಲ್ಲಿಯ ರಾಷ್ಟ್ರಧ್ವಜಗಳನ್ನು ಹರಿದೊಗೆದು ಅವುಗಳನ್ನು ಹಚ್ಚಿಗೊಟ್ಟ ಬಗ್ಗೆ ಗ್ರಾಮಾಧಿಕಾರಿಗಳನ್ನು ಒದ್ದು ಗೊಂದಲ ಹಾಕಿದ ಸುದ್ದಿ ಬಂದಿದೆ.

ಕೊಚ್ಚಿ ಸಂಸ್ಥಾನದ ಗ್ರಾಮಾಧಿಕಾರಿಗಳು ತಮ್ಮ ಪರಿಸ್ಥಿತಿ ಬೇಗನೆ ಸುಧಾರಿಸಲ್ಪಡದಿದ್ದಲ್ಲಿ ರಾಜೀನಾಮೆ ಕೊಡುವೆವಾಗಿ ತಿಳಿಸಿದ್ದಾರೆ.

ಪಂ ದೇವಿಶಂಕರ ತಿವಾರಿಯವರು ಜಯಪುರ ಲೋಕನಿಯುಕ್ತ ಮಂತ್ರಿಗಳಾಗಿ ನೇಮಿಸಲ್ಪಟ್ಟಿದ್ದಾರೆ.

ಹರಿಹರ, ಕಲಬುರ್ಗಿ, ರಾಯಚೂರಗಳಲ್ಲಿ ಸಭೆ ಜರುಗಿ ಭೂಲಾಭಾಯಿಯವರ ನಿಧನ ಬಗ್ಗೆ ದುಃಖ ಪ್ರದರ್ಶಿಸಲಾಯಿತು.

ಶ್ರೀ ಕೆ. ಟಿ. ಭಾಷ್ಯಮರು ದಿವಾಣರನ್ನು ಕಂಡು ಕೂಲಿಕಾರರ ಸಮಸ್ಯೆ, ಆಹಾರ ಪರಿಸ್ಥಿತಿ ಮೊದಲಾದ ಬಗ್ಗೆ ಮಾತುಕತೆಯಾಡಿ ಬಂದರು.

ಶಿರಹಟ್ಟಿಯಲ್ಲಿ ಸರಸ್ವತಿಬಾಯಿ ಸೂತಿಕಾಗೃಹದ ಅಡಿಗಲ್ಲು ಸಮಾರಂಭವು ಶ್ರೀಮಂತ ಸೌಭಾಗ್ಯವತಿ ಮಾತೋಶ್ರೀ ರಾಣಿಸಾಹೇಬ ಅವರ ಹಸ್ತದಿಂದ ನಡೆಯಿತು. ಸರಕಾರದವರು ಸೂತಿಕಾಗೃಹಕ್ಕೆ ೧೬ ಸಾವಿರ ರೂ. ಕೊಟ್ಟಿದ್ದಾರೆ.

ಕರಕೇರಿ ಗ್ರಾಮಾಂತರ ಭಾಗದಿಂದ ಉಪಚುನಾವಣೆಯಲ್ಲಿ ಪ್ರಜಾಪ್ರತಿನಿಧಿ ಸಭೆಗೆ ಕಾಂಗ್ರೆಸ್ಸಿನ ಎಂ. ಎಚ್. ಮಲ್ಲಿಕಾರ್ಜುನಪ್ಪ ಹಾಗು ಪಟೇಲ ಶಿವಪ್ಪ (ಸ್ವತಂತ್ರ) ಅವರು ಆರಿಸಿ ಬಂದಿರುವರು.

ಹಿಂದುಸ್ತಾನದ ಆಹಾರ ಕೊರತೆ ಎಷ್ಟು ?

ಟ್ರೂಮನ್ನರಿಗೆ ಹೂವರರ ವರದಿ

ಅಧ್ಯಕ್ಷ ಟ್ರೂಮನ್ನರ ಆಹಾರ ರಾಯಭಾರಿಗಳಾದ ಹರ್ಬರ್ಟ ಹೂವರರು ೨೫೦೦೦ ಮೈಲು ಸಂಚರಿಸಿ ೨೨ ದೇಶಗಳನ್ನು ಸುತ್ತಿಬಂದಿದ್ದು, ಹಿಂದೀಮಹಾಸಾಗರ ಪ್ರದೇಶದಲ್ಲಿ ಮೇ ತಿಂಗಳ ೧ ರಿಂದ ಸಪ್ಟಂಬರ ೩೦ ವರೆಗೆ ೨೮೮೬೦೦೦ ಟನ ಆಹಾರ ಅವಶ್ಯವಿದೆಯೆಂದು ಅಂದಾಜ ಮಾಡಿರುವರು.

ಅವರು ಅಧ್ಯಕ್ಷ ಟ್ರೂಮನ್ನರಿಗೆ ಒಪ್ಪಿಸಿ ವರದಿಯಲ್ಲಿ ಈ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದಾರೆ.

“ಇದೇ ಅವಧಿಯಲ್ಲಿ ಜಪಾನಕ್ಕೆ ೮೬೦೦೦೦ ಟನ್ ಆಹಾರ ಧಾನ್ಯ ಬೇಕು. ಚೀನಕ್ಕೆ ಸಹ ಹೆಚ್ಚು ಕಡಿಮೆ ಇಷ್ಟೇ ಅವಶ್ಯವಿದೆ ಆದರೆ ಈ ಪ್ರಮಾಣವನ್ನು ಅವರವರ ಅವಶ್ಯಕತೆಯಂತೆ ನಿರ್ಣಯಿಸಿರದೆ ಹಡಗಗಳನುಕೂಲತೆಯಂತೆ ಗೊತ್ತುಮಾಡಿದೆ

ಹಿಂದೀ ಮಹಾಸಾಗರ ಪ್ರದೇಶದಲ್ಲಿಯ ಬರಗಾಲ ನಿವಾರಣೆಯು ಹೊಣೆ ಕೇವಲ ಅಮೇರಿಕೆಯ ಮೇಲಿದೆಯೆಂಬ ಮಾತನ್ನು ಹೂವರರು ಒಪ್ಪಲಿಲ್ಲ. ನೆರೆಯ ನಾಡುಗಳಿಂದ ಸಾಧ್ಯವಿದ್ದಷ್ಟು ಆಹಾರ ಮೊದಲು ಸಂಪಾದಿಸಬೇಕು. ಪಾಶ್ಚಿಮಾತ್ಯ ರಾಷ್ಟ್ರಗಳು ಸಹ ತಮಗೆ ಶಕ್ಯವಿದ್ದಷ್ಟು ಸಹಾಯ ಮಾಡುವವು ಎಂದೂ ಅವರು ನುಡಿದರು.

ಹಿಂದುಸ್ತಾನದ ಬೇರೆ ಬೇರೆ ಪ್ರಾಂತಗಳಿಗೆ ಮತ್ತು ಸಂಸ್ಥಾನಗಳಿಗೆ ಕೆಳಗೆ ತೋರಿಸಿದಷ್ಟು ಹೊರಗಿನ ಆಹಾರ ಅವಶ್ಯವಿರುವದೆಂದು ಹೂವರರು ಸೂಚಿಸಿದ್ದು ಅದಕ್ಕೆ ಹಿಂದುಸ್ತಾನ ಸರಕಾರದವರು ಒಪ್ಪಿಗೆ ಕೊಟ್ಟಿರುವರು.

ಮುಂಬಯಿ ೩೩೦೦೦೦ ಟನ್, ಮೈಸೂರ ೧೧೪೦೦೦ ಟನ್, ಮದ್ರಾಸ ೮೪೦೦೦೦ ಟನ್, ತಿರುವಾಂಕೂರು ೫೮೦೦೦ ಟನ್, ಕೊಚ್ಚಿ ೩೬೦೦೦ ಟನ್, ದಕ್ಷಿಣ ಸಂಸ್ಥಾನಗಳು ೧೧೯೦೦೦ ಟನ್, ಬಿಹಾರ ೯೩೦೦೦ ಟನ್, ಸಂಯುಕ್ತ ಪ್ರಾಂತ ೧೪೦೦೦ ಟನ್, ಬಂಗಾಲ ೩೦೨೦೦೦ ಟನ್, ಮತ್ತು ಇತರ ಪ್ರಾಂತಗಳು ೨೫೦೦೦೦ ಟನ್.

ಇದರ ಹೊರತು ಹಿಂದೀ ಮಹಾಸಾಗರ ಪ್ರದೇಶದಲ್ಲಿಯ ಸಿಂಹಳಕ್ಕೆ ಮೂರು ಲಕ್ಷ ಟನ್ ಮತ್ತು ಮಲಯಾಕ್ಕೆ ಎರಡೂವರೆ ಲಕ್ಷ ಟನ ಅವಶ್ಯವಿರುವದು

ಶಾಂತಿಸಾಗರದಲ್ಲಿ ಫಿಲಿಪಾಯಿನಕ್ಕೆ ೫೦೦೦೦ ಟನ್, ಚೀನಕ್ಕೆ ೮೬೦೦೦೦ ಟನ್, ಜಪಾನಕ್ಕೆ ೮೬೦೦೦೦ ಟನ್ ಮತ್ತು ಕೋರಿಯಾಕ್ಕೆ ೧೧೦೦೦೦ ಟನ್ ಅಗತ್ಯವಿದೆ.

—ಹೂವರರು ಈ ಅಂಕಿ ಸಂಖ್ಯೆಗಳನ್ನು ಕೊಟ್ಟನಂತರ, ಹಿಂದುಸ್ತಾನದ ಉಳಿಕೆ ಪ್ರಾಂತಗಳಿಂದ ಎರಡು ಲಕ್ಷ ಟನ್ ಗೋದಿ ಪಡೆಯಬಹುದು ಮತ್ತು ಇನ್ನೆರಡು ಲಕ್ಷ ಟನ್ ಕಡತೆಗೆದುಕೊಳ್ಳಬಹುದು. ಸಯಾಮವು ೫ ಹ ಎರಡು ಲಕ್ಷ ಟನ್ ಹೆಚ್ಚು ಅಕ್ಕಿ ಕಳಿಸಬಹುದೆಂದು ಹೇಳಿರುತ್ತಾರೆ.

ಹಿಂದುಸ್ತಾನದ ಬೇರೆ ಬೇರೆ ಪ್ರಾಂತ ಮತ್ತು ಸಂಸ್ಥಾನಗಳಿಗೆ ಮೇ, ಜೂನ, ಜುಲೈ, ಅಗಸ್ಟ ಮತ್ತು ಸಪ್ಟಂಬರ ತಿಂಗಳಗಳಲ್ಲಿ ಅನುಕ್ರಮವಾಗಿ ಕೆಳಗಿನಂತೆ ಆಹಾರ ಬೇಕೆಂದು ಹೂವರರು ಅಂದಾಜ ಮಾಡಿರುವರು.

[ಅಂಕಿಗಳು ಸಾವಿರ ಟನ್ನುಗಳಲ್ಲಿ ಕೊಡಲ್ಪಟ್ಟಿವೆ]

ಮುಂಬೈ:	೦,	೫೫,	೮೫,	೯೫,	೯೫
ಮೈಸೂರ :	೧೪,	೨೫,	೨೫,	೨೫,	೨೫
ಮದ್ರಾಸ :	೨೧೦,	೧೬೦,	೧೬೦,	೧೬೦,	೧೬೦
ತಿರುವಾಂಕೂರು :	೧೫,	೧೦,	೧೦,	೧೦,	೧೦
ಕೊಚ್ಚಿ :	೮,	೬,	೬,	೬,	೬
ದಕ್ಷಿಣ ಸಂಸ್ಥಾನಗಳು :	೪೩,	೧೯,	೧೯,	೧೯,	೧೯
ಬಿಹಾರ :	೧೯,	೧೪,	೨[illegible],	೨೦,	೨೦
ಸಂಯುಕ್ತಪ್ರಾಂತ :	೨೩,	೦,	೦,	೬೦,	೬೦

ಉಳಿದ ಪ್ರಾಂತಗಳು : ೫೦, ೫೦, ೫೦, ೫೦, ೫೦

ಜಪಾನದ ಮಾಸಿಕ ಬೇಡಿಕೆ

೫೦, ೨೫೦, ೨೬೦, ೨೦೦ ಮತ್ತು ೩೧೦೦ ಈ ಪ್ರಕಾರ ಇರುವದು.

ಭೋಜನಾಲಯಗಳು ಊಟ—ಉಪಾಹಾರಗಳಿಗೆ ಬಡಿಸಬೇಕಾದ ಆಹಾರದ ಪ್ರಮಾಣವನ್ನು ಗೊತ್ತುಪಡಿಸಿದ್ದಾರೆ. ಪ್ರತಿ ಊಟಕ್ಕೆ ಬಳಸುವ ಅಕ್ಕಿಯ ಪರಮಾವಧಿ ೪ ಔನ್ಸ್ ಮತ್ತು ಒಟ್ಟು ಸೀದಾ ಧಾನ್ಯಗಳ ಪರಿಮಾಣ ೬ ಔನ್ಸಿಗೆ ಮೀರಕೂಡದು.

ಪದಾರ್ಥಗಳನ್ನಾಗಲಿ ಹಾಲು ಮತ್ತು ತಜ್ಜನ್ಯ ಪದಾರ್ಥಗಳನ್ನಾಗಲಿ ಕೊಡಕೂಡದು. ಬೆಳಗ್ಗೆ ಗಂಟೆ ೧೦ ರಿಂದ ೧೨ ರ ವರೆಗೆ ಸಂಜೆ ೬—೩೦ ರಿಂದ ರಾತ್ರಿ ೧೦ ರ ವರೆಗೆ ಮಾತ್ರ ಹಾಟೆಲಗಳನ್ನು ತೆರೆದಿಡಬೇಕೆಂದೂ ವಿಧಿಸಲಾಗಿದೆ.


ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಜಿಲ್ಲೆಗೆ ಬೇಗನೆ ೩೦೦೦ ಟನ್ ಜೋಳ ಬರಲಿದೆಯೆಂದು ತಿಳಿಯುತ್ತದೆ.

ಜೂನ್ ೧೫ರಿಂದ ಒಂದು ತಿಂಗಳವರೆಗೆ ಜಿಲ್ಲೆಯಲ್ಲಿ ವ್ಯವಸಾಯದ ಸಮಯವಾಗಿದ್ದು ವ್ಯವಸಾಯದ ಕೂಲಿಕಾರರಿಗೆ ಹಂಚಲು ರೈತರಲ್ಲಿ ಭತ್ತದ ಸಂಗ್ರಹವಿಲ್ಲದಿರುವದರಿಂದ ಪುತ್ತೂರು ತಾಲೂಕಿನ ಕೆಲಸವೆಷ್ಟೆ ಸಾಗುವಳಿಯೇ ಆಗದಿರಬಹುದೆಂಬ ಭಯ ವ್ಯಕ್ತಗೊಳಿಸಲ್ಪಟ್ಟಿದೆ.

ಹೆಬ್ರಿಯ ಹೊಟೆಲೊಂದರಲ್ಲಿ ಶೀನಶೆಟ್ಟಿಯೆಂಬವನು ಕಾಫಿ ತಿಂಡಿ ತಿಂದು ಕೊಡಬೇಕಾದ ೭ ಬಿಲ್ಲೆಗಳನ್ನು ಕೊಡದಿದ್ದುದರಿಂದ ಜಗಳವಾಗಿ ಪೋಲಿಸರು ಅವನನ್ನು ಠಾಣೆಗೆ ಕರೆದೊಯ್ದರೆಂದೂ ಅಲ್ಲಿ ಅವನು ಮೃತಪಟ್ಟನೆಂದೂ ವರದಿಯಾಗಿವೆ. ಪೋಲೀಸರ ಹೊಡೆತದಿಂದಲೇ ಅವನು ಪ್ರಾಣಬಿಟ್ಟನೆಂದು ಆಪಾದಿಸಲ್ಪಟ್ಟಿದೆ. ವಿಚಾರಣೆಗಾಗಿ ಮ್ಯಾಜಿಸ್ಟ್ರೇಟರೇ ಮೊದಲಾದ ಅಧಿಕಾರಿಗಳು ಹೆಬ್ರಿಗೆ ಹೋಗಿದ್ದಾರೆಂದೂ ಮೃತನ ದೇಹಪರೀಕ್ಷೆಯನ್ನು ಕಾರ್ಕಳದ ಆಸ್ಪತ್ರೆಯಲ್ಲಿ ನಡೆಸಿದರೆಂದೂ ತಿಳಿಯುತ್ತದೆ.

ಉಡುಪಿಯ ಮಾಡರ್ನ ಹಾಯರ ಎಲಿಮೆಂಟರಿ ಶಾಲೆಯಲ್ಲಿ ತಾ ೨೭-೨೮-೨೯ (ಮೇ) ಈ ದಿನಗಳಲ್ಲಿ ದ. ಕ. ಜಿಲ್ಲಾ ಮಕ್ಕಳ ಸಮ್ಮೇಲನ ಜರಗುವದಿದ್ದು ಅದರಲ್ಲಿ ಜಿಲ್ಲೆಯ ಎಲ್ಲ ಹಾಯರ ಎಲಿಮೆಂಟರಿ ಶಾಲೆಗಳ ವಿದ್ಯಾರ್ಥಿಗಳಿಗೆ ಭಾಗವಹಿಸಲು ಅವಕಾಶವಿದೆ. ಲೇಖನಗಳ ಭಾಷಣ ವಾಚನ ಸ್ಪರ್ಧೆಗಳು ಏರ್ಪಡಿಸಲ್ಪಟ್ಟಿದ್ದು ಅವುಗಳಲ್ಲಿ ಯಶಸ್ವಿಗಳಾದವರಿಗೆ ಬಹುಮಾನಗಳು ಹಂಚಲ್ಪಡುವವು. ಸ್ಪರ್ಧೆಗಳಲ್ಲಿ ಭಾಗವಹಿಸಬೇಕೆಂಬವರು ತಾ ೨೫ ರೊಳಗೆ ಕೂಟದ ಕಾರ್ಯಾಲಯಕ್ಕೆ ಹೆಸರು ತಿಳಿಸಿರಬೇಕು.



ಮುಂಬಯಿ ಶೇರ ಪೇಟೆ

ತಾ. ೧೫

ಕಳೆದ ವಾರ ಶೇರ ಪೇಟೆ ಇಳಿಮುಖವಿದ್ದುದ ಅನಂತರ ತುಸು ತುಸುವೆ ಸುಧಾರಿಸಿತು. ಟಾಟಸ್ಟೀಲ ಡೆಫರ್ಡ ಪಾಲುಗಳು ಪುನಃ ೩೦೦೦ ಗುರುತು ದಾಟಿ ೩೦೩೨-೮-೦ ಕ್ಕೆ ಮುಟ್ಟಿವೆ. ಡಾಯಿಂಗ್ ಪಾಲು ಕೂಡ ವಿಶೇಷ ಉನ್ನತಿಯನ್ನು ತೋರಿಸಿ ೨೫೪೩-೧೨-೦ ಗೆ ಮುಟ್ಟಿ ಮುಂದೆ ೨೫೩೦-೪-೦ ಕಿಳಿಯಿತು. ಅದೇ ಪ್ರಕಾರ ಇತರ ಗಿರಣಿ ಪಾಲುಗಳಲ್ಲಿಯೂ ಏರಿಕೆ ಕಂಡು ಮುಂದೆ ತುಸು ಇಳಿತಾಯವಾಗಿದೆ. ಕೋಹಿನೂರು ೯೪೬ ಕ್ಕೇರಿ ೯೩೬ ಕ್ಕಿಳಿಯಿತು. ಸ್ವದೇಶಿ ೮೩೯ ಕ್ಕೇರಿ ೮೯ ಕ್ಕೂ ಸೆಂಟ್ರಲ್ ಇಂಡಿಯಾ ೪೯೪ ರಿಂದ ೪೯೨ ಕ್ಕೂ ಬಂದವು. ಸೆಂಚೂರಿ ೧೦೪೦-೦-೦ ರಲ್ಲಿ ಯಥಾಸ್ಥಿತಿ ಬೇಲಾಪುರ ಸಕ್ಕರೆ ೨೯೫-೦-೦ ಕ್ಕೇರಿ ೨೯೩-೦-೦ ಕ್ಕಿಳಿಯಿತು. ಅಸೋಸಿಯೇಟೆಡ್ ಸಿಮೆಂಟ್ಸ ಮಾತ್ರ ೨೫೪-೦-೦ ಕ್ಕೇರಿದೆ ಬ್ಯಾಂಕ ಪಾಲುಗಳಲ್ಲಿ ಸೆಂಟ್ರಲ ಬ್ಯಾಂಕಿನ ಪಾಲು ಹಿಂದಿನ ವಾರಕ್ಕಿಂತಲೂ ಏರಿ ೧೪೦-೮-೦ ಕ್ಕೆ ಮುಟ್ಟಿದರೂ ಕೊನೆಗೆ ತುಸು ಅವನತಿ ತೋರಿ ೧೩೮-೦-೦ ರಲ್ಲಿ ನಿಂತಿದೆ. ಇಂಪೀರಿಯಲ್ ಎಫ್ ಸಿ ೨೬೮೦ ರಲ್ಲಿ ಸ್ಥಿರವಾಗಿ ಚಾಲುತ್ತಿದೆ. ೧೭೯-೦-೦ ರ ವರೆಗೂ ಹೋಗಿದ್ದ ರಿಜರ್ವ ಬ್ಯಾಂಕು ಮಾತ್ರ ೧೭೭-೮-೦ ಗಿಳಿದವು. ಆದರೂ ಶೇರ ಪೇಟೆಯು ಒಟ್ಟು ಸ್ಥಿತಿ ಕಳೆದ ವಾರದ ವರದಿಯ ಕಾಲದಲ್ಲಿದ್ದುದಕ್ಕಿಂತ ಉನ್ನತಿಯಲ್ಲಿಯೇ ಇದೆ.

ಸರಕಾರಿ ಭದ್ರತೆಗಳಲ್ಲಿ ಜಿ. ಪಿ. ನೋಟು ೧೦೨-೧೨-೦ ರಲ್ಲಿ ಕಳೆದ ವಾರಕ್ಕಿಂತ ಉತ್ತಮ ಸ್ಥಿತಿಯಲ್ಲಿದ್ದರೆ ೧೯೪೭-೫೦ ರ ೩॥ ದರ ಸಾಲ ೧೦೩-೬-೦ ರಲ್ಲಿ ಯಥಾಸ್ಥಿತಿ.

ಚಿನ್ನ—ಬೆಳ್ಳಿ

ಶನಿವಾರ ಕಟ್ಟೆಯಲ್ಲಿ ಬಿಕ್ಕಟ್ಟು ಉತ್ಪನ್ನವಾಗಿದೆ. ತಯಾರಿ ಚಿನ್ನ ಬೆಳ್ಳಿ ದರಗಳು ಬುಲಿಯನ್ ಎಕ್ಸಚೇಂಜ ಸಂಸ್ಥೆಯವರು ನಿರ್ಧರಿಸಿದ ವಾಯಿದಾ ದರಕ್ಕಿಂತ ವಿಪ್ಪೋ ಏರಿಕೆಯಲ್ಲಿರುವದರಿಂದ ವೈಶಾಖ ವಾಯಿದೆಯ ವ್ಯವಹಾರವನ್ನು ಮುಗಿಸುವದು ಸುತರಾಂ ಅಸಾಧ್ಯವಾಗಿ ಬಿಟ್ಟಿದೆ. ತೇಜಿ ವ್ಯಾಪಾರಿಗಳು ಬಹಳ ತೊಂದರೆಗೊಳಗಾಗಿದ್ದಾರೆ. ಈ ವರೆಗೆ ಇದನ್ನು ಹಿಡಿಕಕ್ಕೆ ತರುವ ಪ್ರಯತ್ನವೆಲ್ಲ ನಿರರ್ಥಕವಾಗಿದೆ. ಚಿನ್ನ ತಯಾರಿ ಬೆಲೆ ರೂ. ೧೧೦—೦—೦ಕ್ಕೆ ಅಂದರೆ ಹಿಂದೆಂದೂ ಏರದ ಮಟ್ಟಕ್ಕೆ ಮುಟ್ಟಿ ಈಗ ೧೦೯—೮—೦ ರಲ್ಲಿದೆ. ತಯಾರಿ ಬೆಳ್ಳಿ ೧೫೭—೦—೦ ರ ಪರಮಾವಧಿಯಲ್ಲೇ ಇದೆ. ವಾಯಿದೆ ವ್ಯವಹಾರ ನಿಂತು ಹೋಗಿದೆ.

ಅಳಶಿ

ಮುಂದೀ ವ್ಯಾಪಾರಿಗಳ ಒತ್ತಡದಿಂದ ಅರಳೆಯ ಧಾರಣೆ ಮೆಲ್ಲಮೆಲ್ಲಗೆ ಇಳಿಯುತ್ತ ಬಂದು ಕಳೆದ ವರದಿಯ ಸಮಯದಲ್ಲಿ ಇದ್ದದ್ದಕ್ಕಿಂತ ಏಳೆಂಟು ರೂಪಾಯಿ ಕೆಳಗಿಳಿದು ಮೇ ವಾಯಿದೆ ೪೬೫ ಕ್ಕೆ ಬಂದಿದೆ. ಜುಲೈ ೪೬೯—೮—೦ ಸಪ್ಟಂಬರ ೪೭೩-೧೨-೦

ಎಣ್ಣೆಕಾಳು

ಶೇಂಗಾ	ರೂ.	೧೨೦—೦—೦
ಅಗಸಿ	,,	೨೫-೮-೦
ಅಗಸಿಎಣ್ಣೆ		೧೫-೦-೦

ಸಾಂಗಲಿ ಪೇಟೆ

ಬೆಲ್ಲ ಬಂಗಾಲಿ ಮಣ	ರೂ.	೧೪—೧೬
ಅರಿಸಿಣ ಹೇರು	,,	೮೦—೯೧
ಮೆಣಸಿನಕಾಯಿ ಹೇರು	,,	೧೭೦—೧೯೦
ಶೇಂಗಾ (ಖಂಡಿ)	,,	೯೪-೯೫
ದೇಶಿ ತಂಬಾಕು ಹೇರು		೧೨೫-೨೫೦
ಪಂಢರಪುರಿ	”	೨೦೦—೩೦೦
ತಂಬಾಕು ಆಕೋಳ (ಹೇರು)		೨೫೦—೪೨೫

ಹುಬ್ಬಳ್ಳಿ ಪೇಟೆ

ಜಯವಂತ ಹತ್ತಿ	ನಂ. ೧	೩೧೦-೩೧೭
,,	ನಂ. ೨	೩೦೦-೩೦೫
,,	ನಂ. ೩	೨೯೦-೨೯೫
ಅಪಲಂಡ ಹತ್ತಿ		೨೭೦-೩೦೦
ಜಿನ		೨೨೦-೨೩೫
ಬಾಜಿನ		೨೧೫-೨೨೦
ಡಬಲರೋಲರ		೨೦೫-೨೨೪

ಮಂಗಳೂರಲ್ಲಿ ಕಂದಾಯ ಮಂತ್ರಿಗಳು

ಸಂಭ್ರಮದ ಸ್ವಾಗತ

ಮದ್ರಾಸ್ ಕಾಂಗ್ರೆಸ್ ಸರಕಾರದ ಕಂದಾಯ ಮಂತ್ರಿಗಳಾದ ಶ್ರೀ ಕೆ ಆರ್ ಕಾರಂತರು ತಾ ೧೧ ಕ್ಕೆ ಮಂಗಳೂರಿಗೆ ಆಗಮಿಸಿದರು. ನೀಲೇಶ್ವರ, ಕಾಸರಗೋಡು, ಮಂಜೇಶ್ವರ ಮೊದಲಾದ ನಿಲ್ದಾಣಗಳಲ್ಲಿ ಅವರಿಗೆ ಹಾರಗಳು ಅರ್ಪಿಸಲ್ಪಟ್ಟವು. ಮಂಗಳೂರಲ್ಲಿ ಕಾಂಗ್ರೆಸ್ ಸಂಸ್ಥೆಗಳಲ್ಲದೆ ಕಲೆಕ್ಟರ್ ಮೊದಲಾದ ಅಧಿಕಾರಿಗಳೂ ನಗರ ಸಭಾಧ್ಯಕ್ಷರೂ ಹಲವು ಸಂಘ ಸಂಸ್ಥೆಗಳೂ ಅವರಿಗೆ ಹಾರಗಳನ್ನು ಅರ್ಪಿಸಿ ಗೌರವಿಸಿದರು. ರಾಷ್ಟ್ರಸೇವಾದಲದವರು ಅವರಿಗೆ ಗಾರ್ಡ ಅಫ್ ಆನರ ಕೊಟ್ಟರು. ಅಂದು ಸಾಯಂಕಾಲ ವರ್ತಕರು ಮಾನ್ಯ ಮಂತ್ರಿಗಳನ್ನು ಕಂಡು ತಮ್ಮ ದೂರುಗಳನ್ನು ಹೇಳಿಕೊಂಡರು. ಮಂತ್ರಿಗಳು ವಿಚಾರಿಸುವದಾಗಿ ಆಶ್ವಾಸನೆಯಿತ್ತರು. ಮುಂದೆ ನಗರ ಸಭೆಯವರು ಅವರನ್ನು ಬರಮಾಡಿಕೊಂಡು ನಗರ ಸಭೆಯ ತೊಂದರೆಗಳನ್ನು ನಿವೇದಿಸಿದರು.

ಬೆಂಗಳೂರು— ಮೈಸೂರು

ಬೆಂಗಳೂರು ನಗರಸಭಾ ಕಾಂಗ್ರೆಸ ಪಕ್ಷಕ್ಕೆ ಶ್ರೀ ಎಚ್ ಸಿ. ಸೂರ್ಯನಾರಾಯಣರಾಯರು (ಹಿಂದಿನ ಅಧ್ಯಕ್ಷ) ನಾಯಕರಾಗಿಯೂ ಎಂ ಕೆ ನಾರಾಯಣ ಅಯ್ಯಂಗಾರರು ಉಪನಾಯಕರಾಗಿಯೂ ಎನ್ ಕೃಷ್ಣಪ್ಪನವರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟಿದ್ದಾರೆ. ಶ್ರೀ ರಾಮಲಾಲ ತಿವಾರಿಯವರು ಸಾರಥಿ (ವ್ಹಿಪ್).

ಮದ್ರಾಸ ಗವ್ಹರ್ನರ ಸರ್ ಆರ್ಚಿಬಾಲ್ಡ್ ನಾಯರವರು ವಿಮಾನ ಮೂಲಕ ತಾ ೧೧ ಕ್ಕೆ ಬೆಂಗಳೂರಿಗೆ ಬಂದು ಸಂಸ್ಥಾನದ ಕ್ಷಾಮಪೀಡಿತ ಪ್ರದೇಶಗಳನ್ನು ಸಂಚರಿಸಿದರು.

ಮೈಸೂರು ಹಿಂದೂ ಮಹಾಸಭೆಯ ಅಧ್ಯಕ್ಷರಾವ ಶ್ರೀ ಭೂಪಾಲಂ ಚಂದ್ರಶೇಖರಯ್ಯನವರು ಒಂದು ಹೇಳಿಕೆ ಹೊರಡಿಸಿ ಮೈಸೂರನ್ನು ಮುಸ್ಲಿಂ ರಾಜ್ಯವಾಗಿ ಮಾಡಬೇಕೆಂದು ಬ್ರಿಟಿಶ ಮಂತ್ರಿಗಳಿಗೆ ಬರೆದುಕೊಂಡು ರಾಜದ್ರೋಹದ ಕೆಲಸ ಮಾಡಿದವರಾರೆಂದು ಗೊತ್ತು ಹಚ್ಚಿ ದಂಡಿಸಬೇಕೆಂದು ಸರಕಾರಕ್ಕೆ ಕೇಳಿಕೊಂಡಿದ್ದಾರೆ.

ಮೈಸೂರು ನಗರ ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರಾದ ಶ್ರೀ ಎಂ ಆರ್ ಪಿ ಬಸಪ್ಪ ಮತ್ತು ಜನಾರ್ದನ ನಾಯಡು ಅವರ ಮೇಲೆ ಶಿಸ್ತಿನ ಕ್ರಮ ಕೈಕೊಂಡು ಪಕ್ಷದಿಂದ ಹೊರಗೆ ಹಾಕಲಾಗಿದೆ. ನಗರ ಸಭಾ ಕಾಂಗ್ರೆಸ್ ಪಕ್ಷಕ್ಕೆ ಮುಂದಿನ ವರ್ಷಕ್ಕೆ ಶ್ರೀ ಬಿ ನಾರಾಯಣಸ್ವಾಮಿಯವರು ನಾಯಕರಾಗಿಯೂ ಅಗರಂ ರಂಗಯ್ಯಂಗಾರರು ಉಪನಾಯಕರಾಗಿಯೂ ವೆಂಕಟರಮಣರಾಯರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು.

ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರು ಮದ್ರಾಸ ಮುಂಬಯಿ ಮಂತ್ರಿಮಂಡಲಗಳಲ್ಲಿ ಕನ್ನಡಿಗರ ಪ್ರಾತಿನಿಧ್ಯವನ್ನು ಕುರಿತು ಕೇಳಲಾಗಿ ಮುಂಬಯಿ ಮಂತ್ರಿಮಂಡಲದಲ್ಲಿ ಆ ಪ್ರಾಂತದಲ್ಲಿರುವ ಕನ್ನಡ ಜನಸಂಖ್ಯೆಯನ್ನು ಅನುಲಕ್ಷಿಸಿ ಇನ್ನೊಬ್ಬ ಕನ್ನಡಿಗ ಮಂತ್ರಿಗಳನ್ನು ಸೇರಿಸಿಕೊಳ್ಳುವದು ಅವಶ್ಯವೆಂದು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಸಂಸ್ಥಾನದ ಊಟ ಉಪಾಹಾರ ಗೃಹಗಳ ಪರವಾಗಿ ಶಿಷ್ಟಮಂಡಲವೊಂದು ದಿವಾಣರನ್ನು ಕಂಡು ಹೊಟೆಲಗಳಲ್ಲಿ ಹಾಲು ಮತ್ತು ತಜ್ಜನ್ಯ ಪದಾರ್ಥಗಳನ್ನು ಉಪಯೋಗಿಸಬಾರದೆಂಬ ನಿಯಮವನ್ನು ಕಿತ್ತುಹಾಕಬೇಕೆಂದೂ ಹೊಟೆಲುಗಳಲ್ಲಿ ಸೀದಾ ಧಾನ್ಯಗಳನ್ನುಪಯೋಗಿಸಬಾರದೆಂಬ ನಿರ್ಬಂಧವನ್ನು ಸ್ವಲ್ಪಾದರೂ ಸಡಿಲಿಸಬೇಕೆಂದೂ ಪ್ರಾರ್ಥಿಸಿಕೊಂಡಿತು.

ತಾ ೧೨ ಕ್ಕೆ ಕಲೆಕ್ಟರರ ಕಚೇರಿಯಲ್ಲಿ ರೈತರ ಮತ್ತು ಪುರಜನರ ಸಭೆಯನ್ನು ಕೂಡಿಸಿ ಅಹಾರ ವಸ್ತ್ರ ಮೊದಲಾದ ೧೧ ವಿಷಯಗಳಲ್ಲಿ ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿದರು. ಲಂಚಗುಳಿತನ ಮೊದಲಾದುದರ ನಿವಾರಣೆಗಾಗಿ ಜನತೆಯ ಸಹಕಾರವನ್ನು ಮಂತ್ರಿಗಳು ಕೋರಿದರು.

ತಾ ೧೨ ಸಂಜೆ ಶ್ರೀ ಕೆ ಬಿ ಜಿನರಾಜ ಹೆಗಡೆಯವರ ಅಧ್ಯಕ್ಷತೆಯಲ್ಲಿ ಮಂಗಳೂರ ಮೈದಾನದಲ್ಲಿ ಸಭೆಯೊಂದು ಜರಗಿಸಲ್ಪಟ್ಟಿತು. ಶ್ರೀ ಎನ ಬಿ ಶೆಟ್ಟಿ, ಕೆ. ಕೆ. ಶೆಟ್ಟಿ, ಡಾ. ಮಲ್ಯ ಮೊದಲಾದವರು ಮಾತನಾಡಿದರು. ಜಿಲ್ಲೆಯ ಅವಶ್ಯಕತೆಗಳನ್ನು ವಿವರಿಸುವ ಮನವಿಯೊಂದು ಕಾರಂತರಿಗೊಪ್ಪಿಸಲ್ಪಟ್ಟಿತು. ಶ್ರೀ ಕಾರಂತರು ಜನತೆಯ ಸಹಕಾರವನ್ನು ಕೋರಿ ಭಾಷಣ ಮಾಡಿದರು.

ಗಿಲೋರಿ

ಚಿಕ್ಕ ಕಥೆ

ಲೇ:— ಶ್ರೀ ವತ್ಸ ಕಲಬುರ್ಗಿ: ✲ (ಉರ್ದು ಕತೆಯ ಆಧಾರದಿಂದ)

ಫರೀದಖಾನನು ಹುಮಾಯೂನನ್ನು ಸೋಲಿಸಿ 'ಷೇರಶಾಹ'ವೆಂಬ ಅಂಕಿತದಿಂದ ದಿಲ್ಲಿ ರಾಜ್ಯ ಪೀಠದ ಮೇಲೆ ಮಂಡಿಸಿದನು. ಈತನ ಆಳಿಕೆಯಲ್ಲಿ ಎಲ್ಲರು ಜಾತಿ ಪಂಥಗಳನ್ನು ಬದಿಗೊತ್ತಿ ಸಂತೋಷದಿಂದ ವಾಸವಾಗಿದ್ದರು. ಇವನಿಗಿಂತ ಪೂರ್ವ ಹಿಂದುಸ್ತಾನದಲ್ಲಿ ಇಂಥ ವ್ಯಕ್ತಿಗಳು ಸಿಕ್ಕುವುದಿಲ್ಲವೆಂದು ಹೇಳಬಹುದು. ಚಕ್ರವರ್ತಿ ಅಕಬರ ಮತ್ತು ಪೀಳಿಗೆಯಲ್ಲಿ ಕಂಡುಬರುವ ಅನೇಕ ಸುಗುಣಗಳು ಷೇರಶಾಹಾನ ಪ್ರತಿಬಿಂಬವೆಂದು ಗ್ರಹಿಸಿದರೆ ಒಳಿತು. ಆದರೆ ಮೊಗಲ ಇತಿಹಾಸಕಾರರು ಈತನ ಗುಣಗಳನ್ನು ಮುಚ್ಚಿಡುವ ಪ್ರಯತ್ನ ಮಾಡಿದ್ದಾರೆ. ಆದರೆ ಸತ್ಯಕ್ಕೆ ಸಾವಿಲ್ಲವೆಂಬುದನ್ನು ನೆನೆದಿಲ್ಲವೆಂದು ಹೇಳಬಹುದು. ಸಮ್ರಾಟ ಅಕ್ಬರನ ನವರತ್ನಗಳಲ್ಲೊಬ್ಬನಾದ ರಾಜಾ ತೋಡರಮಲ್ಲನು ಷೇರಶಾಹನ ನೇತೃತ್ವದಲ್ಲಿ ಕೆಲಸ ಮಾಡಿದನೆಂದು ಒಪ್ಪಲೆ ಬೇಕಾಗುತ್ತದೆ.

ಒಂದು ಪ್ರಭಾತ ಸಮಯ. ಯುವರಾಜನು ತಿರುಗುತ್ತ ಸರೋವರ ತೀರಕ್ಕೆ ಬಂದನು. ಅದೇ ಪ್ರಭಾಕರನು ವಿಶ್ರಾಂತಿಯಿಂದ ಮುಕ್ತನಾಗಿ ಪೂರ್ವದಿಗಂತದಲ್ಲಿ ತನ್ನ ಆಗಮನವನ್ನು ಅರುಣನಿಂದ ತಿಳಿಯಪಡಿಸಿದನು. ಕಮಲಗಳ ಮುಖಗಳು ತಮ್ಮನಲ್ಲನ ಆಗಮನದಿಂದ ವಿಕಸಿತವಾದವು ಪ್ರಕೃತಿಯ ಸ್ತುತಿಪಾಠಕರು ಕಮಲಸಖನನ್ನು ಕುರಿತು ತಮ್ಮ ಮಧುರ ಕಂಠದಿಂದ ಹಾಡತೊಡಗಿದವು. ಮಂದಮಾರುತನು ತಂಗಾಳಿಯನ್ನು ಹೊತ್ತು ನಾಲ್ದೆಸೆಯಲ್ಲಿ ಬೀರತೊಡಗಿದನು. ಪ್ರಕೃತಿಯ ಅವರ್ಣನೀಯವಾದ ಸೌಂದರ್ಯವನ್ನು ಅನುಭವಿಸಿ, ಯುವರಾಜನು ಇಹಲೋಕದ ಅರಿವನ್ನೇ ಮರೆತನು. ಹಾಗೇ ತುಸು ಮುಂದೆ ನಡೆದ. ಸರೋವರದಲ್ಲಿಯ ಹೆಂಗಸರಗುಂಪಿನ ಕಡೆಗೆ ದೃಷ್ಟಿ ಹೋಯಿತು.

ಒಂದು ಕಡೆ ಹೆಂಗಸರು ಬಟ್ಟೆಬರೆಗಳನ್ನು ಹಿಂಡುತ್ತಿದ್ದರು. ಕೆಲವರು ಸ್ನಾನ ಮಾಡುತ್ತಿದ್ದರು. ಇನ್ನೂ ಕೆಲವರು ಪಾತ್ರೆಗಳನ್ನು ಉಜ್ಜುತ್ತಿದ್ದರು. ಮತ್ತೆ ಕೆಲವರು ನೀರು ತುಂಬಿಕೊಂಡು ಮನೆಗೆ ಸಾಗುತ್ತಿದ್ದರು. ಹೀಗೆ ಸರೋವರವು ಜನರಿಂದ ತುಂಬಿತ್ತು. ಈ ಸನ್ನಿವೇಶವನ್ನ ಕಂಡು ರಾಜಕುಮಾರನು ಅತಿ ಸಮೀಪಕ್ಕೆ ಬಂದು ನಿಂತನು.

ಅಷ್ಟರಲ್ಲಿಗೆಯ ಈರ್ವ ಬಾಲಿಕೆಯರು ಯಾವದೋ ವಸ್ತುವಿನ ಸಲುವಾಗಿ ಗುದ್ದುಮುರಿಗೆ ಹಾಕುತ್ತ ಸರೋವರದ ಮೇಲಕ್ಕೆ ಬಂದರು. ಮೇಲಕ್ಕೆ ಬಂದುದರಿಂದ ಗುದ್ದುಮುರಿಗೆಗೆ ಮತ್ತಿಷ್ಟು ಕಳೆ ಬಂದಿತು. ರಾಜಕುಮಾರನು ಈ ಮನೋರಂಜಕ ದೃಶ್ಯವನ್ನು ಕುತೂಹಲದಿಂದ ನೋಡುತ್ತ ನಿಂತನು. ಬಾಲಿಕೆಯರು ಈತನ ಇರುವಿಕೆಯನ್ನು ಕಂಡಿದ್ದಿಲ್ಲ ಅದರಲ್ಲಿ ಒಬ್ಬಳು ಅದನ್ನು ಕಸಿದುಕೊಂಡು ಓಡಿ ದೂರ ನಿಂತು ನಗತೊಡಗಿದಳು—ನಗೆ ಸುಲ್ಲಿಯ ಊ ವೈವಿಧ್ಯವಿದೆ–ನಗೆಯ ಪೆಟ್ಟು ಅವಳ ಹೃದಯವನ್ನು ಕುಲುಕಿತು. ಅವಳಿಗೆ ಅಸಮಾಧಾನವಾಗಿದ್ದರೂ ಅದನ್ನು ತಲಕೊತ್ತಿ ಗಂಭೀರವದನೆಯಾಗಿ ನಿಂತಳು. ಅವಳ ಈ ಭಂಗಿಯನ್ನು ಕಂಡು ರಾಜಕುಮಾರನು ಮನಸೋತು ತನ್ನ ಪರಿಚಾರಕನೊಂದಿಗೆ 'ಗಿಲೋರಿ(ತಾಂಬೂಲ, ವಿಳ್ಯ.)ಯನ್ನು ಕಳಿಸಿದನು. ಅವಳು ಗಿಲೋರಿಯ ಸಲುವಾಗಿಯೇ ಗುದ್ದುಮುರಿಗೆ ಹಾಕುತ್ತಿದ್ದುದು. ಆಗ ಅವಳಿಗೆ ಸುತ್ತುಮುತ್ತಲಿನ ಅರಿವಾಯಿತು. ಸೀರೆಯ ಸೆರಗನ್ನು ಬಾಯಿಯಲ್ಲಿ ಹಿಡಿದುಕೊಂಡು ದಿಕ್ಕು ತೋಚದವಳಾಗಿ ಕಲ್ಲೊಂಬೆಯಂತೆ ನಿಂತಳು.

"ರಾಜಕುಮಾರನು ಪ್ರಸನ್ನನಾಗಿ ಗಿಲೋರಿಯನ್ನು ಕಳಿಸಿರುವನು ತೆಗೆದುಕೋ"

"................"

"ಮನೆಗೆ ನಡೆದು ಬಂದ ಲಕ್ಷ್ಮಿಯನ್ನು ಕಾಲಿನಿಂದ ದೂಡಬಹುದೆ? ....ಧೈರ್ಯ ತಾಳಿದರೆ ಮಹಾರಾಣಿಯಾಗುವಿ, ಷೇರಶಾಹನ ಸೊಸೆಯೆನಿಸಿಕೊಳ್ಳುವಿ."

ನೋಡು ವಿಚಾರಿಸು" ಮುಂತಾಗಿ ನುಡಿದನು ಈ ಕರ್ಣಕಠೋರ ವಚನಗಳನ್ನು ಕೇಳಿ ಆ ಯುವತಿಗೆ ತಡೆಯಲಾರದಷ್ಟು ಸಂತಾಪವಾಯಿತು. ಅವಳು ಯಾವುದನ್ನೂ ಗಮನಕ್ಕೆ ತರದೆ ಮನೆಗೆ ಧಾವಿಸಿದಳು.


ಇತ್ತ ಬಾದಶಹನು ಸೂರ್ಯೋದಯದ ಮುನ್ನ ದೈನಿಕ ಕಾರ್ಯಕ್ರಮ, ನಮಾಜ ಇತ್ಯಾದಿಗಳನ್ನು ಮುಗಿಸಿ ದರ್ಬಾರಕ್ಕೆ ಬಂದನು. ಅಲ್ಲಿಯ ಕಾರ್ಯಕ್ರಮ ಮುಗಿಯುವದರೊಳಗೆ ಊಟದ ವೇಳೆಯಾದುದರಿಂದ ತನ್ನ ಆಪ್ತ ಗೆಳೆಯ ಸಮೂಹದೊಂದಿಗೆ ಊಟಕ್ಕೆ ಕುಳಿತನು. ಅದೇ ವೇಳೆಗೆ ರಾಜಮಂದಿರದ ಹೊರಭಾಗದಿಂದ ಗದ್ದಲ ಕೇಳ ಬಂತು. ಕೂಡಲೆ ಮಂತ್ರಿಯು ಅದನ್ನು ವಿಚಾರಿಸಿಕೊಂಡುಬಂದನು. ರಾಜನು ಏನೆಂದು ಕೇಳಿದನು. "ಪ್ರಭುಗಳೆ, ವಿಶೇಷವೇನೂ ಇಲ್ಲ ಓರ್ವ ಬ್ರಾಹ್ಮಣ ಏನೋ ದೂರು ಹೇಳಲು ಬಂದಿದ್ದ, ನಾಳೆ ದರ್ಬಾರಿನಲ್ಲಿ ಬರಹೇಳಿ ಕಳಿಸಿದೆ" ಮಂತ್ರಿ ನುಡಿದನು. ಇದನ್ನು ಕೇಳಿ ರಾಜನ ಮುಖ ಕೆಂಪೇರಿತು. "ನೀನು ಮಂತ್ರಿಯೆ? ನಿನಗೆ ಅರಿವಿದೆಯೆ....... ನಾನು ಎಲ್ಲಿರುವೆನೊ ಅದೇ ನನ್ನ ನ್ಯಾಯಮಂಟಪ. ಪ್ರಜರ ಹಿತವನ್ನು ಕೋರುವದೆ ನನ್ನ ಕರ್ತವ್ಯ. ನಡೆ ಆ ಬ್ರಾಹ್ಮಣನನ್ನು ಕರೆತಾ. ಅವನು ಎಲ್ಲಿಯಾದರೂ ಹೋಗಿದ್ದರೂ ಹುಡುಕಿ ಕರೆತಾ ಆಮೇಲೆಯೇ ನನ್ನ ಊಟ'' ಎಂದು ರಾಜನು ಗದ್ದರಿಸಿದನು. ಈ ಮಾತನ್ನು ಮರೆಸಲು ಅವನ ಗೆಳೆಯರು ಪ್ರಯತ್ನಪಟ್ಟರು. ಅದೆಲ್ಲ ನಿರುಪಯೋಗವಾಯಿತು. ಬಾದಶಹನು ಅವನ ನಿರೀಕ್ಷಣೆಯಲ್ಲಿಯೆ ಕುಳಿತ.

ಒಂದು ಪಂಜೆಯನ್ನು ಉಟ್ಟು ಮತ್ತೊಂದನ್ನು ಹೆಗಲ ಮೇಲೆ ಹಾಕಿಕೊಂಡ ಬ್ರಾಹ್ಮಣನನ್ನು ಸುಸಜ್ಜಿತ ಸಿಪಾಯಿಗಳು ಬಾದಶಹನೆದುರು ತಂದು ನಿಲ್ಲಿಸಿದರು. ಏನೂ ಅರಿಯದವರಿಗೆ ಆ ಬಡ ಬ್ರಾಹ್ಮಣನು ಅಪರಾಧಿಯಂತೆ ಕಾಣುತ್ತಿದ್ದನು. "ದೂರು ಹೇಳಬಂದವನನ್ನು ಕರೆತರಲು ಹೇಳಿದ್ದೆ ಆದರೆ ನೀವಾವ ಅಪರಾಧಿಯನ್ನು ತಂದಿರುವಿರಿ"ಎಂದರಾಜ. "ಪ್ರಭೊ, ಇವನೇ ಅವನು" ಎಂದು ಬಿನ್ನಹ ಮಾಡಿಕೊಂಡನು. ರಾಜನು ಸಿಪಾಯಿಗಳನ್ನು ಆಚೆಗೆ ಕಳಿಸಿ, ಅವನನ್ನು ತನ್ನ ಬಳಿಯಲ್ಲಿ ಕುಳ್ಳಿರಿಸಿ, ಅವನಿಗೆ ಧೈರ್ಯ ಹೇಳಿ ಕಾರಣವನ್ನು ಕೇಳಿದನು. "ಈ ಸಂಗತಿಯನ್ನು ರಾಜನೊಬ್ಬನೆದುರು ಹೇಳಬೇಕಾಗಿದೆ, ದಯವಿಟ್ಟು ರಾಜನ ಸನ್ನಿಧಿಗೆ ಮುಟ್ಟಿಸಿರಿ.......... ಅದನ್ನು ಕೇಳಿಯಾದರೂ ಏನು ಪ್ರಯೋಜನ?" ಎಂದು ದೈನ್ಯದಿಂದ ಕೇಳಿಕೊಂಡನು. ಇವನ ಪರಿಸ್ಥಿತಿಯನ್ನು ಕಂಡು ರಾಜನ ಹೃದಯ ಕರಗಿತು ಕಣ್ಣು ತೋಯ್ದಿತು. "ಗೆಳೆಯಾ, ನಾನೇ ಆ ದುರ್ದೈವಿ ರಾಜ, ಯಾವನು ಪ್ರಜರ ಸಂಪರ್ಕದಿಂದ ದೂರಿದ್ದಾನೊ ಅವನೇ ನಾನು'' "ಗದ್ಗದಿತ ಕಂಠದಿಂದ ಹೇಳಿದನು. ಇದನ್ನು ಕೇಳಿ ಬ್ರಾಹ್ಮಣನು ಹೌಹಾರಿದನು. 'ಮಹಾರಾಜ ಕ್ಷಮಿಸಬೇಕು. ಕಣ್ಣು ಸ್ವಲ್ಪ ಮಂದ. ತಮ್ಮ ರಾಜ್ಯದಲ್ಲಿ ತಮ್ಮಲ್ಲಿಯ ತನಕ ಬರುವ ಒಂದಾದರೂ ಪ್ರಸಂಗ ಸಂಭವಿಸಿರಲಿಲ್ಲ—ಆದರೆ ಮಹಾರಾಜ! ನುಂಗ್ಲಾದೆ ಹೋಗುವ ಪ್ರಸಂಗ ಒದಗಿ ಬಂದಿದೆ–ಬಾಯಿ ಸಣ್ಣದು ಮಾತು ದೊಡ್ಡದು—ಹೇಳಲು ಬಾರದು ಬಿಡಲು ಬಾರದು."

"ಏ ಬ್ರಾಹ್ಮಣ ಏನು ಹೇಳುವದು ಹೇಳಿಕೋ ಊಟದ ವೇಳೆಯಾಗಿದೆ ತಿಳಿಯುವದಿಲ್ಲವೆ?'' ಎಂದು ಬಿರುಸು ಮಾತನಾಡಿದನು ಮಂತ್ರಿ "ಯಾರಲ್ಲಿ? ಮಂತ್ರಿಗಳಿಗೆ ಕಂಠ ಪರಿಯಂತ ಉಣಬಡಿಸಿರಿ– ಹಾ; ಹೆದರದೆ ನಿನ್ನ ಆಪತ್ತಿನ ಕತೆಯನ್ನು ವಿವರಿಸು–ಮನಬಿಚ್ಚಿ ಹೇಳು.'' ಎಂದು ರಾಜನು ಸಂತೈಸಿದನು. "ಮಹಾರಾಜ ನನ್ನ ಜೀವನದಲ್ಲಿ ಒಬ್ಬ ಮಗಳ ಹೊರತು ಪರಮಾತ್ಮನೆ ಆಪ್ತನಿಲ್ಲದೆ ಸುಂದರ ಪುರೋಹಿತನಿಗೆ ಕನ್ಯಾದಾನ ಮಾಡಿದ್ದೇನೆ. ಈಗ ನನ್ನಗಿಂತ ಅವಳ ಸಂಬಂಧ ಸುಂದರನದು ಹೆಚ್ಚು. ಇಂದು ಮುಂಜಾನೆ ಅವಳು ಸರೋವರಕ್ಕೆ ಹೋಗಿದ್ದಳು ಮರಳಿ ಬರುವ ವೇಳೆಗೆ ರಾಜಕುಮಾರನು ಅಲ್ಲಿಗೆ ಬಂದನಂತೆ–ಅರಗಳಿಗೆ ನೋಡುತ್ತ ನಿಂತು ಗಿಲೋರಿಯನ್ನು ಕಳಿಸಿದನಂತೆ. ಮಹಾರಾಜ ಅದು ಅಷ್ಟು ಅಮುಖ್ಯವೆಂದು ಗಣಿಸೋಣ. ಅಲ್ಲದೆ, "ಷೇರಶಹನ ಸೊಸೆಯಾಗುವಿಯಂತೆ........" ಮುಂತಾಗಿ ಹೇಳಿ ಕಳಿಸಿದನಂತೆ ಅದಕಾರಣ ತಮ್ಮ ಸನ್ನಿಧಿಗೆ ಬಂದಿದ್ದೇನೆ. ತಾವು, ನನ್ನ ಪುತ್ರಿ, ಸುಂದರನ ಹೆಂಡತಿಯನ್ನು ಸೊಸೆಯೆಂದು ಭಾವಿಸಬಲ್ಲಿರಾ? ಎಂದು ಕತೆಯನ್ನು ವಿವರಿಸಿದನು. "ಎಂದಿಗೂ ಅಸಾಧ್ಯ; ಇದು ನನ್ನ ತಾತನಿಗೂ ಸಾಧ್ಯವಾಗದ ಮಾತು" ಎಂದು ನುಡಿದು ರಾಜಮೌನವನ್ನು ತಾಳಿದನು. "ಈ ಪ್ರಕಾರ ಅವಮಾನ ಮಾಡಬೇಕೆ? ಮಹಾರಾಜ! ನಾಳೆ ರಾಜಕುಮಾರನು ಅರಸನಾದರೆ ನಮ್ಮಗಳ ಪಾಡೇನು?.... ಅವಳು ಅಳುತ್ತಿದ್ದಾಳೆ. ಈ ಅವಮಾನದಿಂದ ಜೀವ ಬಿಡುತ್ತಿದ್ದಾಳೆ. ಈ ಬ್ರಾಹ್ಮಣ ತನ್ನ ಜೀವನ ಚರಿತ್ರೆಯಲ್ಲಿ ಇಂಥ ಕಲಂಕವನ್ನು ತಂದುಕೊಂಡವನಲ್ಲ. ಆದರೆ ಇಂದು ಮುಖಕ್ಕೆ ಮಸಿ ವ್ಯಾಪಿಸಿದಂತಾಗಿದೆ." ಎಂದನು. "ಏನಾದರೂ ಕೊಟ್ಟು ಕಳಿಸಿರಿ—ನಾಯಿಗೆ ಏನುಬೇಕು:–ಒಣ ರೊಟ್ಟಿ ಚೂರು.'' ಎಂದು ಫಾರಸಿಯಲ್ಲಿ ಅಂದನು ಮಂತ್ರಿ. "ಏನಾದರೂ ಕೊಟ್ಟು ಕಳಿಸಬೇಕಾದರೆ,ಅರ್ಧರಾಜ್ಯವೆ ಕೊಡಬಲ್ಲೆ. ಆದರೆ ಬ್ರಾಹ್ಮಣರು ದುಡ್ಡಿಗೆ ಬಾಯಿಬಿಡುವವರಲ್ಲ"ಎಂದು ಅರಸಉತ್ತರಿಸಿದನು. ಮಂತ್ರಿಯು ಅವನನ್ನು ವಿಚಾರಿಸಿದನು: "ಮಹಾರಾಜ, ಬ್ರಾಹ್ಮಣ ಜಾತಿಯು ದುಡ್ಡಿಗೆ ತನ್ನ ಸ್ವಾಭಿಮಾನವನ್ನು ವಿಕ್ರಯ ಮಾಡಿಕೊಳ್ಳುವದಲ್ಲ. ನಿಮ್ಮ ನ್ಯಾಯ ಹೀಗೆಯಾದರೆ ಹೀಗೆ ಸರಿ! ನಾನು ನ್ಯಾಯದ ತಿರುಕನಿದ್ದೇನೆ"ದು ಖಂಡಿಸಿ ಮಾತನಾಡಿದನು.

ರಾಜನು ತನ್ನ ಮಗನನ್ನು ಕರೆಸಿದನು. ಅವನು ತನ್ನ ಅಪರಾಧವನ್ನು ಒಪ್ಪಿಕೊಂಡನು. ಆಮೇಲೆ ಕಾಜಿಗಳನ್ನು ಕರೆಸಿ ಈ ಘಟನೆಯನ್ನು ವಿವರಿಸಿದ ಈ ಪರಿ ಅಪರಾಧ ಮಾಡಿದವರಿಗೆ ಯಾವ ಶಿಕ್ಷೆ ಯೋಗ್ಯವೆಂದು ಕೇಳಿದನು. 'ಕಣ್ಣಿಗೆ ಕಣ್ಣು ಹಲ್ಲಿಗೆ ಹಲ್ಲು' ಎಂದು ತೀರ್ಪು ಬಂತು. ಅದರಂತೆ ಬಾದಶಹನು ಯುವರಾಜನ ಹೆಂಡತಿ ನೀರಿಗೆ ಹೋಗಬೇಕು. ಬ್ರಾಹ್ಮಣನ ಅಳಿಯ ಅವಳಿಗೆ 'ಗಿಲೋರಿ'ಯನ್ನು ಕೊಡಬೇಕು. ಅವನ ಗೆಳೆಯರು ನೋಡಿ ನಗಬೇಕು. ಸೂರ್ಯ ಮುಳುಗುವ ಮುನ್ನ ಈ ಕೆಲಸ ಜರಗಬೇಕು ಇಲ್ಲವೆ ಷೇರಶಹನ ನಂದಾದೀಪ ನೊಂದಬೇಕೆಂದು ರಾಜಾಜ್ಞೆಯನ್ನು ಹೊರಡಿಸಿದನು. ಇದನ್ನು ಕೇಳಿ ನೆರೆದ ಜನರು ಸ್ತಬ್ಧರಾದರು. ಒಬ್ಬರೂ ಮಾತಾಡಲಿಲ್ಲ. ಬ್ರಾಹ್ಮಣನು ಧೈರ್ಯದಿಂದ "ಮಹಾರಾಜ, ಏನು ಕೇಳುತ್ತಿದ್ದೇನೋ ಅದನ್ನು ನನ್ನ ಕಿವಿಗಳು ಕೇಳಿ ತಣಿದವು—ಆದರೆ ಸುಂದರನು ಎಲ್ಲಿಯೋ ಹೋಗಿದ್ದಾನೆ. ಯಾವಾಗ ಬರುವನೊ ಏನೋ. ಬಂದನಂತರ ಸೂರ್ಯಾಸ್ತ ಪೂರ್ವದಲ್ಲಿ ತಮ್ಮ ಸನ್ನಿಧಿಗೆ ಕರೆತರುವೆ ಮಹಾರಾಜನಿಗೆ ಜಯವಾಗಲೆಂದು" ಹಾರೈಸಿ ಮನೆಗೆ ಸಾಗಿದನು.

ಜೈಹಿಂದ !



ಜ್ಯೋತಿಷಿ:-ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಮೇ ೨೦ ರಿಂದ ೨೬ ರ ವರೆಗೆ

ಮೇಷ

ಪ್ರಕೃತಿ ಹಾಗು ರತಿಸುಖ ಉತ್ತಮ. ಆದರೆ ಅವಾಂತರದಲ್ಲಿ ಹೆಂಡತಿಯೊಳಗೊಂಡು ಮನೆಯೊಳಗಿನ ಎಲ್ಲ ಜನರ ಕೂಡ ಮೇಲಿಂದ ಮೇಲೆ ಮತಭೇದವುಂಟಾಗಿ ಕೈಗೆ ಕೈಹತ್ತುವ ಪ್ರಸಂಗ, ಉದ್ಯೋಗದಲ್ಲಿ ಪ್ರಗತಿ ಅಷ್ಟಕ್ಕಷ್ಟೆ ಆದರೆ ಪ್ರತಿಷ್ಠೆ ಹಾಗು ಲಾಭ ಒಟ್ಟಿನಲ್ಲಿ ನೆಟ್ಟಗೆ. ವರಿಷ್ಠರು ಇಲ್ಲವೆ ಆಶ್ರಯದಾತರು ಪ್ರಾಮಾಣಿಕತನದ ಬಗ್ಗೆ ಸಂಶಯ ಪಡುವರು. ಮನಸಿಗೆ ಹುರುಹುರು ಎನಿಸುವ ಸ್ವಪ್ನಗಳು. ವ್ಯಾಜ್ಯ ಇಲ್ಲವೆ ಸ್ಪರ್ಧೆಯಲ್ಲಿ ಎರಡೂ ಪಕ್ಷದವರ ಒಡಂಬಡಿಕೆ ಅಥವಾ ಸಮಾನ ಸ್ಥಿತಿ. ಪ್ರವಾಸ ತೊಂದರೆಯದು. ಆದರೆ ಭೆಟ್ಟಿ ಹಾಗು ಪತ್ರವ್ಯವಹಾರ ಉತ್ತಮ. ಆಶ್ವಿನಿಯ ಕೊನೆಯ ೨ ಹಾಗು ಭರಣಿಯ ಮೊದಲನೆ ೨ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೦, ೨೩, ೨೪, ೨೫ ನೆಟ್ಟಗೆ.

ವೃಷಭ

ಪ್ರಕೃತಿ ಹಾಗು ಪ್ರಾಪಂಚಿಕ ಸುಖ ಬಹಳ ತೊಂದರೆಯದು. ಈರ್ಷೆ ಮೂಲಕ ಮನಸಿಗೆ ವ್ಯಸನ. ಹೆಂಡತಿಯೊಡನೆ ಒದರಾಟ. ಉದ್ಯೋಗದಲ್ಲಿ ವಿಶೇಷ ಎಚ್ಚರಿಕೆಯಿಂದ ಮುಂದಡಿ ಇಡುತ್ತ ಹೋಗುವದರಿಂದ ಲಾಭ ಹಾಗು ಪ್ರತಿಷ್ಠೆ ನೆಟ್ಟಗೆ. ಮಿತ್ರಸುಖ ಉತ್ತಮ. ಆದರೆ ವಿಶೇಷ ಸಂಬಂಧವಿರದ ಜನರೊಡನೆ ಕೆಲವೊಂದು ತಂಟೆಯ ಪ್ರಸಂಗ. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಯಶವು ಪ್ರಾಪ್ತವಾದರೂ ವೆಚ್ಚ ಹಾಗು ತೊಂದರೆ ಮೂಲಕ ಬೇಜಾರ. ಪ್ರವಾಸ ಹಾಗು ಪತ್ರವ್ಯವಹಾರಕ್ಕಿಂತ ಭೆಟ್ಟಿ ನೆಟ್ಟಗೆ. ಕೃತ್ತಿಕೆಯ ಕೊನೆಯ ೩ ರೋಹಿಣಿಯ ಮೊದಲನೆ ೨ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೩, ೨೪, ೨೫, ೨೬ ನೆಟ್ಟಗೆ.

ಮಿಥುನ

ಪ್ರಕೃತಿ ಉತ್ತಮ. ಸ್ತ್ರೀಸುಖ ನೆಟ್ಟಗೆ. ಆದರೆ ಇತರ ವಿಷಯಗಳಲ್ಲಿ ಬಹಳ ವಿರೋಧ. ಉದ್ಯೋಗದಲ್ಲಿ ಒಳ್ಳೆ ಪ್ರಗತಿ ಹಾಗು ಪ್ರತಿಷ್ಠೆ ಉಂಟಾದರೂ ಲಾಭವು ಸಾಧಾರಣವೆ ಆಗಿ ವೆಚ್ಚ ಮಾತ್ರ ಹೆಚ್ಚಾಗುವಿಕೆ. ಅಣ್ಣತಮ್ಮಂದಿರಿಗೆ ಕ್ಲೇಶ. ಸ್ವಜನರ ವಿರೋಧ ಸಂಬಂಧಿಸದ ವಿಷಯದಲ್ಲಿ ಕೈವಾಡ, ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಅನುಕೂಲತೆ ಆದರೆ ವೆಚ್ಚ ಹಾಗು ತೊಂದರೆ ಬಹಳ. ಪ್ರವಾಸಾದಿ ಕೆಲಸ ಸುಖಕರ. ಆರ್ದ್ರಾದ ಕೊನೆಯ ೨ ಪುನರ್ವಸುವಿನ ಮೊದಲನೆ ೨ ಚರಣಗಳಿಗೆ ತೊಂದರೆಯಿಂದ ಯಶ. ತಾ. ೨೦, ೨೪, ೨೫, ೨೬ ನೆಟ್ಟಗೆ.

ಕರ್ಕ

ಸ್ವತಃ ಹಾಗು ಪತ್ನಿಗೆ ಕಿರುಕುಳ ಅಸ್ವಾಸ್ಥ್ಯ. ಇದರ ಹೊರತಾಗಿ ಉಭಯತರಲ್ಲಿ ತೀವ್ರ ಮತಭೇದವುಂಟಾಗಿ ಪ್ರಾಪಂಚಿಕ ಸುಖ ಕಡಿಮೆ. ಮಕ್ಕಳಿಂದಲೂ ಉದ್ವೇಗಜನಕ ವರ್ತನ. ಉದ್ಯೋಗದಲ್ಲಿ ಪ್ರಗತಿ ಹಾಗು ಪ್ರತಿಷ್ಠೆ ಉತ್ತಮ ಆದರೆ ಲಾಭವೆಷ್ಟೇಆದರೂ ಅದಕ್ಕಿಂತ ಹೆಚ್ಚು ವೆಚ್ಚ. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಶತ್ರುಗಳ ಪ್ರಾಬಲ್ಯ. ಮಿತ್ರರ ವಿರೋಧ ಪ್ರವಾಸಾದಿ ಕೆಲಸ ಸಾಧಾರಣ ನೆಟ್ಟಗೆ. ಪುಷ್ಯದ ಕೊನೆಯ ೨ ಹಾಗು ಆಶ್ಲೇಷಾದ ಮೊದಲನೆ ೨ ಚರಣಗಳಿಗೆ ಹೆಚ್ಚು ತೊಂದರೆ. ತಾ. ೨೧, ೨೨, ೨೬ ನೆಟ್ಟಗೆ.

ಸಿಂಹ

ಪ್ರಕೃತಿ ಉತ್ತಮ ಆದರೆ ಹೆಂಡತಿಯೊಡನೆ ಇಲ್ಲವೆ ಸ್ವಜನರೊಡನೆ ಮತಭೇದದ ಪ್ರಸಂಗ. ಆಪ್ತರಿಂದ ಕೆಲವು ವಿಷಯಗಳಲ್ಲಿ ವ್ಯರ್ಥ ಶಬ್ದ. ಉದ್ಯೋಗದಲ್ಲಿ ಪ್ರಗತಿ ಕಡಿಮೆ. ಆದರೆ ಪ್ರತಿಷ್ಠೆ ಹಾಗು ಲಾಭ ಉತ್ತಮ ಪ್ರತಿಯೊಂದು ವಿಷಯದಲ್ಲಿ ತಕರಾರಿನ ಪ್ರಸಂಗ. ಮಿತ್ರಸುಖ ಉತ್ತಮ. ವ್ಯಾಜ್ಯ ಮತ್ತು ಸ್ಪರ್ಧೆಯಲ್ಲಿ ವೆಚ್ಚ ಹಾಗು ತೊಂದರೆ ಬಹಳ ಆದರೆ ಯಶ ನಿಶ್ಚಿತ ಪ್ರವಾಸ ತೊಂದರೆಯದು ಆದರೆ ಭೆಟ್ಟಿ ಹಾಗು ಪತ್ರವ್ಯವಹಾರ ನೆಟ್ಟಗೆ. ಮಘಾದ ಕೊನೆಯ ೨ ಪೂರ್ವಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೦, ೨೩, ೨೪, ೨೫ ನೆಟ್ಟಗೆ.

ಕನ್ಯಾ

ಪ್ರಕೃತಿಗೆ ಬಹಳ ಕ್ಲೇಶ. ಮಕ್ಕಳಿಗೆ ಅಸ್ವಾಸ್ಥ್ಯ. ಉದ್ಯೋಗದಲ್ಲಿ ಪ್ರಗತಿ ಹಾಗು ಲಾಭ ನೆಟ್ಟಗೆ ಆದರೆ ಪ್ರತಿಷ್ಠೆ ಕಡಿಮೆ. ಮಿತ್ರರೊಡನೆ ಸ್ವಲ್ಪ ವಿರೋಧ. ಅನೇಕ ಸಾಹಸದ ಕೃತ್ಯಗಳು. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಒಳ್ಳೆ ಯಶ. ಪ್ರವಾಸ ಹಾಗು ಭೆಟ್ಟಿ ಪತ್ರವ್ಯವಹಾರಕ್ಕಿಂತ ಸುಖಕರ. ಉತ್ತರಾದ ಕೊನೆಯ ೨ ಹಸ್ತಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೧, ೨೨, ೨೬ ನೆಟ್ಟಗೆ.

ತುಲಾ

ಪ್ರಕೃತಿ ಹಾಗು ಪ್ರಾಪಂಚಿಕ ಸುಖ ನೆಟ್ಟಗೆ ಆದರೆ ಅಪ್ರಿಯ ಅತಿಥಿಗಳ ಸಂದಣಿ. ಉದ್ಯೋಗದಲ್ಲಿ ಪ್ರಗತಿ ಹಾಗು ಲಾಭ ತುಂಬಾ ಆದರೆ ಪ್ರತಿಷ್ಠೆ ಕಡಿಮೆ. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಸೋಲು ಆದರೆ ಒಡಂಬಡಿಕೆ ಸಂಭವ, ಮಿತ್ರರಿಗೆ ಕ್ಲೇಶ, ಪ್ರವಾಸಾದಿ ಕೆಲಸ ಬಹಳ ಹಿತಕರ. ಸ್ವಾತಿಯ ಕೊನೆಯ ೨ ವಿಶಾಖಾದ ಮೊದಲನೆ ೨ ಚರಣಗಳಿಗೆ ತೊಂದರೆಯಿಂದ ಯಶ. ತಾ. ೨೦, ೨೪, ೨೫ ನೆಟ್ಟಗೆ.

ವೃಶ್ಚಿಕ

ಸ್ವಂತ ಪ್ರಕೃತಿ ನೆಟ್ಟಗೆ. ಆದರೆ ಹೆಂಡತಿಗೆ ಕ್ಲೇಶ ಇಲ್ಲವೆ ಉಭಯತರಲ್ಲಿ ವಿರೋಧ. ಇತರ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣ. ಉದ್ಯೋಗದಲ್ಲಿ ಪ್ರಗತಿ ಹಾಗು ಪ್ರತಿಷ್ಠೆ ಸಾಧಾರಣ ನೆಟ್ಟಗೆ. ಆದರೆ ಲಾಭ ಅತಿ ಕಡಿಮೆ. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಸ್ವಜನರಿಂದಲೇ ಮೋಸದ ಸಂಭವ. ಮಿತ್ರರ ವಿರೋಧ, ಪ್ರವಾಸ ಹಾಗು ಭೆಟ್ಟಿ ಪತ್ರವ್ಯವಹಾರಕ್ಕಿಂತ ನೆಟ್ಟಗೆ. ಅನುರಾಧೆಯ ಕೊನೆಯ ೨ ಜ್ಯೇಷ್ಠಾದ ಮೊದಲನೆ ೨ ಚರಣಗಳಿಗೆ ಹೆಚ್ಚು ತೊಂದರೆ. ತಾ. ೨೦, ೨೧, ೨೨, ೨೬ ನೆಟ್ಟಗೆ.

ಧನು

ಪ್ರಕೃತಿ ಹಾಗು ಪ್ರಾಪಂಚಿಕ ಸುಖ ಸಾಧಾರಣ. ಪತಿ-ಪತ್ನಿಯರಲ್ಲಿ ವಿನಾಕಾರಣ ವಿರೋಧ. ಉದ್ಯೋಗದಲ್ಲಿ ಲಾಭ ಉತ್ತಮ ಆದರೆ ಪ್ರತಿಷ್ಠೆ ಹಾಗು ಪ್ರಗತಿ ಕಡಿಮೆ. ಪ್ರತಿಯೊಂದು ವಿಷಯದಲ್ಲಿ ಸ್ವಲ್ಪ ಮನೋಭಂಗ. ಮಿತ್ರ ಸುಖ ನೆಟ್ಟಗೆ. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಅನುಕೂಲತೆ ಪ್ರವಾಸ ಹಾಗು ಭೆಟ್ಟಿಕಿಂತ ಪತ್ರವ್ಯವಹಾರ ನೆಟ್ಟಗೆ. ಮೂಲಾದ ಕೊನೆಯ ೨ ಪೂರ್ವಾಷಾಢಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೧, ೨೨, ೨೩, ೨೪ ನೆಟ್ಟಗೆ.

ಮಕರ

ಪ್ರಕೃತಿ ಬಹಳ ಅಸ್ವಸ್ಥ. ಹೆಂಡತಿಗೂ ಕಿರುಕುಳ ಕ್ಲೇಶ. ಪ್ರಾಪಂಚಿಕ ಸುಖ ಸಾಧಾರಣ. ಉದ್ಯೋಗದಲ್ಲಿ ಪ್ರಗತಿ ಹಾಗು ಪ್ರತಿಷ್ಠೆ ಮಧ್ಯಮ. ಆದರೆ ಲಾಭ ಉತ್ತಮ ಮಹತ್ವದ ಕೆಲಸದಲ್ಲಿ ಮಿತ್ರರಿಂದ ಆಯತ ಕಾಲದಲ್ಲಿ ಬಹಳ ಸಹಾಯ. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಉಭಯ ಪಕ್ಷದ ಸಮಾನ ಸ್ಥಿತಿ, ಪ್ರವಾಸ ಹಾಗು ಭೆಟ್ಟಿಕಿಂತ ಪತ್ರವ್ಯವಹಾರ ನೆಟ್ಟಗೆ. ಉತ್ತರಾಷಾಢಾದ ಕೊನೆಯ ೨ ಶ್ರವಣದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೩, ೨೪, ೨೫, ೨೬ ನೆಟ್ಟಗೆ.

ಕುಂಭ

ಪ್ರಕೃತಿ ಉತ್ತಮ. ಹೆಂಡತಿಯೊಡನೆ ಸ್ವಲ್ಪ ವಿರೋಧ ಆದರೆ ಇತರ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಹಾಗು ಲಾಭ ನೆಟ್ಟಗೆ. ಪ್ರತಿಯೊಂದು ಕೆಲಸದಲ್ಲಿ ಮೊದಲು ಬಹಳ ಕಟಕಟೆ. ನೆರೆಹೊರೆಯವರಿಂದ ನಿಂದೆ. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಒಳ್ಳೆ ಯಶ. ಆದರೆ ಅದರ ಜಾರಿ ಬಹಳ ಕಠಿಣ. ಪ್ರವಾಸ ಹಾಗು ಪತ್ರವ್ಯವಹಾರ ಭೆಟ್ಟಿಕಿಂತ ಹೆಚ್ಚು ನೆಟ್ಟಗೆ. ಶತತಾರಿಕೆಯ ಕೊನೆಯ ೨ ಪೂರ್ವಾಭಾದ್ರಪದದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೦, ೨೪, ೨೫, ೨೬ ನೆಟ್ಟಗೆ.

ಮೀನ

ಪ್ರಕೃತಿ ಉತ್ತಮ. ಪ್ರಾಪಂಚಿಕ ಸುಖ ನೆಟ್ಟಗೆ. ಆದರೆ ಹೆಂಡತಿಯಿಂದ ತೊಂದರೆ ಇಲ್ಲವೆ ಕ್ರೋಧ ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಉತ್ತಮ ಹಾಗು ಲಾಭ ತುಂಬಾ, ಸಂಗ್ರಹವೃದ್ಧಿ, ಮಿತ್ರಸುಖ ಕಿಂಚಿತ್ ಸ್ಪರ್ಧಾಜನ್ಯ. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಅನುಕೂಲತೆ. ಪ್ರವಾಸಾದಿ ಕೆಲಸ ಹಿತಕರ ಉತ್ತರಾ ಭಾದ್ರಪದದ ಕೊನೆಯ ೨ ರೇವತಿಯ ಮೊದಲನೆ ೨ ಚರಣಗಳಿಗೆ ತೊಂದರೆಯಿಂದ ಯಶ. ತಾ. ೨೦, ೨೧, ೨೨, ೨೬ ನೆಟ್ಟಗೆ.

ಮುಸ್ಲಿಂ ಲೀಗಿನ ಪಾಕಿಸ್ತಾನ ಬೇಡಿಕೆ

[ಮೊದಲನೇ ಪುಟದಿಂದ]

ಸಂಯುಕ್ತ ರಾಜ್ಯದಲ್ಲಿರುವಂತೆ ನಿರ್ಬಂಧಿಸುವ ವಿಚಾರ" ತನಗಿಲ್ಲವೆಂದು ಸಾರಿತು. ಯಾವದೊಂದು ಪ್ರದೇಶದ ಜನರಿಗೆ ಹಿಂದೀ ಸಂಯುಕ್ತ ರಾಜ್ಯದಿಂದ ಸಿಡಿದುಹೋಗಬೇಕೆಂದು ಇಚ್ಛೆಯಿದ್ದರೆ ಹಾಗೆ ಮಾಡಲು ಅವರಿಗೆ ಅಧಿಕಾರವಿದೆಯೆಂದೇ ಇದರ ಸ್ಪಷ್ಟವಾದ ಅರ್ಥ.

ಈ ಎಲ್ಲ ವಿವಿಧ ತತ್ವಗಳನ್ನು ೧೯೪೫ ಸಪ್ಟಂಬರದ ಪುಣೆ ಗೊತ್ತುವಳಿಯಲ್ಲಿ ಒಂದೆಡೆ ಶೇಖರಿಸಿ ಕೊಡಲಾಯಿತು.

ಇದರಿಂದೆಲ್ಲ ಹೊರಡುವ ಅರ್ಥವೇನು?

ಕಾಂಗ್ರೆಸ್ಸಿಗೆ ಅಖಂಡ ಭಾರತ ಬೇಕಾಗಿದೆ ಅದು ಸಂಯುಕ್ತ ಘಟನೆಯಲ್ಲಿ ಐಕ್ಯಗೊಂಡ ಹಿಂದುಸ್ತಾನವನ್ನು ಅಪೇಕ್ಷಿಸುತ್ತದೆ. ಸಂಯುಕ್ತ ಸರಕಾರಕ್ಕೆ, ಅಖಿಲಭಾರತ ಪ್ರಮಾಣದಲ್ಲಿ ಹೊರತು ಬೇರೆ ಬಗೆಯಾಗಿ ಆಡಳಿತೆ ನಡೆಸಲು ಬಾರದಿರುವಂಥ ಕೆಲವೇ ಅಧಿಕಾರಗಳನ್ನು ಮೀಸಲಿಡಲಾಗುವದು. ಎಲ್ಲ ಘಟಕಗಳಿಗೂ ಪರಮಾವಧಿ ಸ್ವಾಯತ್ತತೆ ದೊರೆಯುವದು. ಸಂಯುಕ್ತ ವಿಷಯಗಳ ಐಚ್ಛಿಕ ಯಾದಿಯೊಂದು ಇರುವದು. ಹೀಗೆ ಕೆಲವು ಘಟಕಗಳು ಆ ವಿಷಯಗಳ ಆಡಳಿತೆಯಲ್ಲಿ ಕೇಂದ್ರದ ಸಹಕಾರವನ್ನು ಅಪೇಕ್ಷಿಸಿದರೆ ಅದಕ್ಕೆ ಅವಕಾಶವುಂಟು. ಇತರ ಘಟಕಗಳಿಗೆ ಆ ಅಧಿಕಾರಗಳನ್ನು ತಾವೇ ನಡೆಸಬೇಕೆಂಬ ಇಚ್ಛೆಯಿದ್ದರೆ ಅದಕ್ಕೂ ಅಡ್ಡಿಯಿಲ್ಲ. ಶಿಷ್ಟಾಧಿಕಾರಗಳೆಲ್ಲ ಘಟಕಗಳಿಗೇ ಸೇರುವವು

ಈಗಿರುವ ಪ್ರಾಂತಗಳ ಗಡಿಗಳನ್ನು ಬದಲಿಸುವ ವಿಷಯದಲ್ಲಿ ಕಾಂಗ್ರೆಸ್ಸಿಗೆ ಯಾವ ಆತಂಕವೂ ತೋರಿಬರುವದಿಲ್ಲ. ಕಾಂಗ್ರೆಸ್ಸು ಇಂಥ ಬದಲಾವಣೆಯ ತತ್ವಗಳನ್ನು ಒಪ್ಪಿದೆ ಮಾತ್ರವಲ್ಲ, ಕಾಂಗ್ರೆಸ್ ಪ್ರಾಂತಗಳ ವಿಂಗಡಿಕೆಯಲ್ಲಿ ಈ ತತ್ವವನ್ನು ಆಚರಣೆಗೇ ತಂದುಬಿಟ್ಟಿದೆ. ಗಡಿ ಬದಲಾವಣೆಯ ವಿಚಾರದಲ್ಲಿ ಕಾಂಗ್ರೆಸ್ಸಿಗೂ ಲೀಗಿಗೂ ಇರುವ ಮತಭೇದವೆಂದರೆ ಬದಲಾವಣೆಯ ತಳಹದಿಯನ್ನು ಕುರಿತಾಗಿ ಮಾತ್ರ ಕಾಂಗ್ರೆಸ್ಸು ಭಾಷಾವಾರು ಮತ್ತು ಸಾಂಸ್ಕೃತಿಕ ತಳಹದಿಯ ಮೇಲೆ ಘಟಕಗಳ ಪುನರ್ವ್ಯವಸ್ಥೆಯನ್ನು ಅಪೇಕ್ಷಿಸಿದರೆ, ಲೀಗು ತತ್ವತಃ ಮುಸ್ಲಿಮರು ಬಹುಸಂಖ್ಯಾಕರಾಗಿರುವ ಪ್ರದೇಶಗಳನ್ನು ವಿಂಗಡಿಸಬೇಕೆಂದು ಅಪೇಕ್ಷಿಸಿದರೂ ವ್ಯವಹಾರದಲ್ಲಿ ಮಾತ್ರ ಇಡಿ ಬಂಗಾಲ ಮತ್ತು ಇಡಿ ಪಂಜಾಬ ಪ್ರಾಂತವನ್ನು ಬೇಡುತ್ತದೆ. ಈ ಪ್ರಕಾರ ಬಂಗಾಲ ಮತ್ತು ಪಂಜಾಬ ಪ್ರಾಂತಗಳ ಮಟ್ಟಿಗಾದರೂ ಕಾಂಗ್ರೆಸ್-ಲೀಗುಗಳಲ್ಲಿ ಭಿನ್ನತೆ ಕಂಡುಬರುವದಿಲ್ಲ

ಇನ್ನುಳಿದುದು ಸಾರ್ವಭೌಮತ್ವದ ಪ್ರಶ್ನೆ ಮಾತ್ರ. ಘಟಕಗಳು ಪ್ರಾದೇಶಿಕ ಸಂಯುಕ್ತ ಘಟನೆಯಲ್ಲಿ ಒಂದಾಗಬೇಕೆಂದೂ ಅದಲ್ಲದೆ ಮಧ್ಯಕಾಲದಲ್ಲಿ ಅಖಿಲ ಭಾರತ ಕೇಂದ್ರವೊಂದಕ್ಕೆ ಅವು ಅಧೀನವಾಗಿರಬೇಕೆಂದೂ ಒಪ್ಪಿದರೂ ಘಟಕಗಳಿಗೆ ಸಾರ್ವಭೌಮಾಧಿಕಾರ ಬೇಕೆಂದು ಲೀಗು ಬೇಡುತ್ತದೆ. ಕಾಂಗ್ರೆಸ್ಸು ಸಂಯುಕ್ತ ಘಟನೆಯಲ್ಲಿ ಕೂಡಿದ ಘಟಕಗಳಿಗೆ ಸಿಡಿದು ಹೋಗುವ ಹಕ್ಕನ್ನು ಕೊಟ್ಟಿದೆ. ಎಂದ ಬಳಿಕ ಅವುಗಳ ಸಾರ್ವಭೌಮತ್ವಾಧಿಕಾರವನ್ನು ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಅಪ್ರತ್ಯಕ್ಷವಾಗಿ ಕಾಂಗ್ರೆಸ್ಸು ಒಪ್ಪಿದಂತಾಯಿತು.

ಶಿಷ್ಟಾಧಿಕಾರಗಳ ಸ್ವಾಮಿತ್ವ ಮತ್ತು ಸಿಡಿದು ಹೋಗುವ ಅಧಿಕಾರವನ್ನು ಘಟಕಗಳಿಗೆ ಕೊಡುವ ಕಾಂಗ್ರೆಸ್ಸಿನ ಯೋಜನೆ " ಸಾರ್ವಭೌಮ " ಶಬ್ದವನ್ನು ಉಪಯೋಗಿಸಿಲ್ಲವಾದರೂ ಲೀಗಿನ ಲಾಹೋರ ಗೊತ್ತುವಳಿಯ ಬೇಡಿಕೆಗೂ ಕಾಂಗ್ರೆಸ್ ಯೋಜನೆಗೂ ತಿರುಳಿನಲ್ಲಿ ಭೇದವಿಲ್ಲ. ನಾವು ಈಗಾಗಲೇ ನೋಡಿದಂತೆ ಲಾಹೋರ ಗೊತ್ತುವಳಿಯಲ್ಲಿ " ಸಾರ್ವಭೌಮ " ಶಬ್ದವನ್ನು ಬಹಳ ಸಂದಿಗ್ಧ ರೀತಿಯಲ್ಲಿ ಉಪಯೋಗಿಸಲಾಗಿದ್ದು ಅದಕ್ಕೂ " ಸ್ವಾಯತ್ತ " ಶಬ್ದಕ್ಕೂ ಅಂಥ ಭೇದವೇನೂ ಕಾಣದಂತಿದೆ.

ಸಾರಾಂಶ

ಒಟ್ಟಿನ ಮೇಲೆ ಕಾಂಗ್ರೆಸ್ಸು ಅಖಂಡ ಭಾರತವನ್ನು ಅಪೇಕ್ಷಿಸಿದರೆ ಲೀಗಿಗೆ ಮಧ್ಯಕಾಲದಲ್ಲಷ್ಟೇ ಅಖಂಡ ಭಾರತ ಬೇಕಾಗಿದೆ. ಕಾಂಗ್ರೆಸ್ಸು ಘಟಕಗಳಿಗೆ ಸಿಡಿದು ಹೋಗುವ ಅಧಿಕಾರ ಕೊಟ್ಟದ್ದರೆ ಲೀಗು ಸಂಯುಕ್ತ ಘಟನೆಯಿಂದ ಸಿಡಿದು ಹೋಗುವ ಅಧಿಕಾರವನ್ನಲ್ಲದೆ ಅದರಲ್ಲಿ ಸೇರಲು ನಿರಾಕರಿಸುವ ಅಧಿಕಾರವನ್ನೂ ಬೇಡುತ್ತದೆ. ಈ ಎರಡೂ ಅಧಿಕಾರಗಳನ್ನು ಉಪಯೋಗಿಸಬಹುದು, ಉಪಯೋಗಿಸದೆ ಇರಬಹುದು, ಎಂಬ ಮಾತು ಬೇರೆ.

ಅಖಿಲ ಭಾರತ ಕೇಂದ್ರಕ್ಕೂ ಸಂಯುಕ್ತ ಘಟನೆಯಲ್ಲಿ ಸೇರುವ ಘಟಕಗಳಿಗೂ ನಡು - ಮಧ್ಯೆ ಇರುವ ಪ್ರಾದೇಶಿಕ ಸಂಯುಕ್ತ ಘಟನೆಯನ್ನು ಲೀಗು ಬೇಡುತ್ತಿದೆಯೆಂಬುದೇ ಅದರ ವೈಶಿಷ್ಟ್ಯ. ಇಂಥ ಮಧ್ಯಸ್ಥಿತಿಗೆ ಕಾಂಗ್ರೆಸ್ಸಿನ ಯೋಜನೆಯಲ್ಲಿ ಅವಕಾಶವಿಲ್ಲ. ಆದರೆ ಕೇಂದ್ರದ ಅಧಿಕಾರ ವಿಷಯಗಳಲ್ಲಿ ಒಂದು ಕಡ್ಡಾಯದ ಮತ್ತು ಇನ್ನೊಂದು ಐಚ್ಛಿಕ ಯಾದಿಯಿರುವದಕ್ಕೆ ಕಾಂಗ್ರೆಸ್ಸು ಒಪ್ಪಿರುವದರಿಂದ ಇದಕ್ಕೂ ಒಂದು ಬಗೆಯಲ್ಲಿ ಎಡೆಯಿಟ್ಟಂತಾಗಿದೆ. ಲೀಗು ಮಾತ್ರ ಪ್ರಾದೇಶಿಕ ಸಂಯುಕ್ತ ಘಟನೆಗಳಿಗೂ ಅವುಗಳಲ್ಲಿ ಸೇರುವ ಘಟಕಗಳಿಗೂ ಇರುವ ಸಂಬಂಧವನ್ನಾಗಲಿ ಅ. ಭಾ. ಕೇಂದ್ರದೊಡನೆ ಅವಕ್ಕಿರುವ ಸಂಬಂಧವನ್ನಾಗಲಿ ಸ್ಪಷ್ಟಗೊಳಿಸಿಲ್ಲ.

ಪುಸ್ತಕ ವಿಮರ್ಶೆ

[೨ನೇ ಪುಟದಿಂದ]

ಯ ಇವರಿಗೆ ಇದ್ದಂತೆ ಕಾಣುವದಿಲ್ಲ. ರಂಗಾಸಾನಿಯನ್ನು ಚಿತ್ರಿಸಬೇಕೆಂದರೆ ಅವಳನ್ನು ನೋಡಿಯೇ ಇಲ್ಲ. ಅತಿ ಶ್ರಮಪಟ್ಟು ಸರ್ವಗುಣ ಸಂಪನ್ನ ಪದ್ಮಾವತಿಯನ್ನು ಮೂಡಿಸಹೋಗಿರುವರು. ಅವಳು ಈ ಭೂಲೋಕದ ಹೆಣ್ಣೆಂದು ಕಾಣುವದಿಲ್ಲ. ಅವಳನ್ನು ಕೊಲ್ಲುವದೇ ಆಗಿದ್ದರೆ ಅವಳ ಗಂಡನ ಒದೆತದಲ್ಲ ಇನ್ನಷ್ಟು ಕಸುವನ್ನು ಹಾಕಿದ್ದರೆ ಒಳ್ಳೆಯದಾಗುತ್ತಿತ್ತು. ಓದುಗರಿಗೆ ಗಂಡ ಹೆಂಡಿರ ಪರಿಚಯ ಚನ್ನಾಗಿ ಆಗುತ್ತಿತ್ತು. ನರಹರಿಯನ್ನು ಒಳ್ಳೆ ಒಲುಮೆಯಿಂದ ಚಿತ್ರಿಸಿರುವರು. ಆದರೆ ನಡುವೆ ಹೇಸಿ ಹಳೆ —ಹಿಮಾಲಯದಷ್ಟು ಹಳೆಯದಾದ— ಮಲತಾಯಿ ಮಲಮಗನ ಸಂಬಂಧ ಸನ್ನಿವೇಶವನ್ನು ಉಪಯೋಗಿಸಿರುವರು. ಆ ಸನ್ನಿವೇಶವು 'ಸಂಗ್ಯಾ-ಬಾಳ್ಯಾ'ನ ಆಟದಷ್ಟು ಹೊಲಸು; ಹಳೆಯದು.

'ರಾಮಾಶ್ವಮೇಧ'ದಲ್ಲಿಯ ಗಂಡ ಹೆಂಡಿರ ಸಂವಾದದಂತೆ ಕಾದಂಬರಿಕಾರರು ತಮ್ಮ ಮತ್ತು ಭುಜಂಗರಾಯರ ನಡುವಿನ ಸಂವಾದವನ್ನು ಕೊಟ್ಟಿರುವರು. ಆ ಭುಜಂಗರಾಯರಿಗೆ ಕಾದಂಬರಿಕಾರರು ತಮ್ಮ ಕಾದಂಬರಿಯ ಹಸ್ತಪ್ರತಿಯನ್ನು ಕೊಟ್ಟಿದ್ದರಂತೆ. ಆ ಮಹಾರಾಯರು ಬಂದ ಎಲ್ಲ ಹಸ್ತಪತ್ರಿಕೆಗಳಿಂದ ತಮ್ಮ ಸ್ನಾನದ ನೀರನ್ನು ಕಾಯಿಸುತ್ತಿದ್ದರಂತೆ. ಈ ಪ್ರತಿಯ ಸದುಪಯೋಗ ಮಾಡದೆ ಅಚ್ಚುಹಾಕಲು ಕೊಟ್ಟರಂತೆ. ಅಚ್ಚಾದುದರಿಂದ ಅದರ ಸ್ಥೂಲವು ಕಡಿಮೆಯಾಗಿದೆ. ಈಗ ಜನರಿಗೆ ಆ ರೀತಿಯ ಉಪಯೋಗ ಬೀಳಲಾರದು. ನಾವು ಯಾರನ್ನೂ ಕ್ಷಮಿಸಬಹುದು. ಆದರೆ ಆ ಭುಜಂಗರಾಯರನ್ನು ಕ್ಷಮಿಸಲಾರೆವು. ಅವರದು ಅಕ್ಷಮ್ಯ ಅಪರಾಧ.

ಸ್ಥೂಲದಲ್ಲಿ ಎಲ್ಲ ಕಾದಂಬರಿಗಳನ್ನು ಸೋಲಿಸುವದೆಂದೂ ಇನ್ನೂ ಸಾವಿರ ಪುಟಗಳಷ್ಟು ಈ ಕಾದಂಬರಿಯು ಬೆಳೆಯುವದಿದೆಯೆಂದೂ ಪ್ರಕಾಶಕರೂ ಜನರನ್ನು ಹೆದರಿಸುತ್ತಿರುವರು. 'ಅಟಂ' ಬಾಂಬಿಗೆ ಹೆದರದ ಯುಗದಲ್ಲಿರುವೆವು. ನಾವು; ಅದಕ್ಕೆ ಬೆದರುವ ಕಾರಣವಿಲ್ಲ. ಸಾವಿರ ಪುಟವಾದರೇನು? ಹತ್ತು ಸಾವಿರ ಪುಟಗಳಾದರೇನು? ಪುಟಸಂಖ್ಯೆಯಿಂದ ಕಾದಂಬರಿಯಾಗಬಲ್ಲದೆ? ಕಾದಂಬರಿಯಲ್ಲಿ ಜೀವಂತ ಜನರಿರಬೇಕಾಗುತ್ತದೆ. ಸತ್ತ ಪುಸ್ತಕಗಳ ಅಭ್ಯಾಸದಿಂದ ಸಜೀವ ಕಾದಂಬರಿಯಾಗದು. ನಮ್ಮ ಸುತ್ತುಮುತ್ತಲಿನ ಸಮಾಜದ ಆಳವಾದ ಅಭ್ಯಾಸ ಬೇಕಾತ್ತದೆ. "ತುಸು ತಿನ್ನು ಕಸ ತಿನ್ನಬೇಡ"

—ರಘುರಾಮ ನಾಡಿಗೇರ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟಿನ ಪರವಾಗಿ ಹ. ರಾ. ಪುರೋಹಿತರವರಿಂದ ಮುದ್ರಿತ ಪ್ರಕಟವಾಯಿತು.